# ಚಿಗುರು

## ಲೇಖನಗಳ ಸಂಗ್ರಹ

ಸಂಪಾದಕರು
ಡಾ. ವೀರೇಂದ್ರ ಕುಮಾರ್ ವಾಲಿ ಎಸ್

# ಚಿಗುರು

## ಲೇಖನಗಳ ಸಂಗ್ರಹ

**ಸಂಪಾದಕರು**

**ಡಾ. ವೀರೇಂದ್ರ ಕುಮಾರ ವಾಲಿ ಎಸ್**

# ಚಿಗುರು ವಾರ್ಷಿಕ ಸಂಚಿಕೆ

**Published By:**
***Notion Press* Publication**
**No.8, 3rd Cross St, CIT Colony, Mylapore,**
**Chennai, Tamil Nadu 600004**
**Email ID: publish @ *notionpress*.com**
**Phone :** 044 4631 5631
**Appointments** : notionpress.com

**ಪುಸ್ತಕದ ಹೆಸರು : ಚಿಗುರು**

**ಸಂಪಾದಕರು:**
ಡಾ. ವೀರೇಂದ್ರ ಕುಮಾರ ವಾಲಿ ಎಸ್
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
**E-mail: veerendrakumarwalis@gmail.com**
**ಸಹ ಸಂಪಾದಕರು:**
ಡಾ. ಕಿರಣ್ ಕುಮಾರ್ ಕೆ. ಎಸ್
ಡಾ. ರವಿ ಹೆಚ್
ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ
**E-mail: kirankumar.ks25@gmail.com**
**E-mail: ravikumarh.06@gmail.com**

ಮೊದಲ ಮುದ್ರಣ – 2024

ಪುಟಗಳು : 100

ಹಕ್ಕುಗಳು ©: ಆಯಾ ಲೇಖಕರದ್ದು

ಬೆಲೆ : 240 /-

ISBN : 979-889233259-0

# ಭಾಷಾಸಂಘ-2023

## ಮಹಾ ಪೋಷಕರು



**ಶ್ರೀ ಬಿ. ಎಸ್ ಯಡಿಯೂರಪ್ಪ**
ನಿಕಟಪೂರ್ವ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

## ಪೋಷಕರು



**ಶ್ರೀ ಬಿ ವೈ ರಾಘವೇಂದ್ರ**
ಕಾರ್ಯದರ್ಶಿಗಳು, ಸ್ವಾಮಿ
ವಿವೇಕಾನಂದ ವಿದ್ಯಾಸಂಸ್ಥೆ, ಶಿಕಾರಿಪುರ
ಹಾಗೂ ಸಂಸದರು, ಶಿವಮೊಗ್ಗ
ವಿಧಾನಸಭಾ ಕ್ಷೇತ್ರ

## ಅಧ್ಯಕ್ಷರು



**ಡಾ. ಶಿವಕುಮಾರ್ ಜಿ. ಎಸ್.,**
ಪ್ರಾಚಾರ್ಯರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ
ಶಿಕಾರಿಪುರ

## ಮಾರ್ಗದರ್ಶಕರು



**ಡಾ. ಕಿರಣ್ ಕುಮಾರ್ ಕೆ. ಎಸ್.,**
ಸಹಾಯಕ ಪ್ರಾಧ್ಯಾಪಕರು



**ಡಾ. ವೀರೇಂದ್ರ ಕುಮಾರ ವಾಲಿ ಎಸ್.,**
ಸಹಾಯಕ ಪ್ರಾಧ್ಯಾಪಕರು



**ಡಾ. ರವಿ ಹೆಚ್.,**
ಸಹಾಯಕ ಪ್ರಾಧ್ಯಾಪಕರು

## ಭಾಷಾ ಸಂಘದ ಸದಸ್ಯರು.

### ನಾಲ್ಕನೇ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು


ಸಂಜಯ್ ಎನ್.ಜಿ


ಮೇಘಾ ಕೆ


ಬಸವರಾಜ ಗುಡಿ


ಚೈತ್ರಾ ಲಮಾಣಿ


ಸಾವಿತ್ರಮ್ಮ ಎಸ್


ಸಹನಾ ಎಸ್


ರಂಜಿತಾ ಎಸ್


ಪ್ರವೀಣ್ ಎಸ್


ಪ್ರೇಮಾ ಮೇಗಳಮನಿ


ಮರೀಸ್ವಾಮಿ


ರಫೀ ದೊಡ್ಮನಿ


ಸಂದೀಪ್ ಕೆ ಎನ್

*******


ISBN : 979-889233259-0

## ಭಾಷಾಸಂಘದ ಸದಸ್ಯರು

### ದ್ವಿತೀಯ ಸೆಮಿಸ್ಟರ್ ಪ್ರಶಿಕ್ಷಣಾರ್ಥಿಗಳು


ಭೋವಿ ವಿಜಯ ಕುಮಾರ್


ಪ್ರಶಾಂತ್ ಭಂಗಿ


ಶಾಲಿನಿ ಎಸ್


ಪ್ರಶಾಂತ್ ಭಂಗಿ


ಬಿ. ರೇಖಮ್ಮ


ನಿಕಿತಾ ಜಿ


ಜವೇರಿಯಾ ಭಾನು


ನಾಗರಾಜ


ನಟರಾಜ ಬಿ


ನಯನ ಹೆಚ್


ಅಮೃತ ಕೆ ಬಿ


ಉಮಾ ಜೆ


ಸುಮಾ ಜಿ ಎಂ


ಸುಧಾ ಎಸ್ ಬಿ


ರಷೀದಾ ಬಾನು ಬೇಗಂ

*******

## ನಾಡಗೀತೆ

ಜಯ್ ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ!

ಭೂದೇವಿಯ ಮಕುಟದ ನವಮಣಿಯೆ,
ಗಂಧದ ಚಂದದ ಹೊನ್ನಿನ ಗಣಿಯೆ;
ರಾಘವ ಮಧುಸೂದನರವತರಿಸಿದ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಜನನಿಯ ಜೋಗುಳ ವೇದದ ಘೋಷ,
ಜನನಿಗೆ ಜೀವವು ನಿನ್ನಾವೇಶ.
ಹಸುರಿನ ಗಿರಿಗಳ ಸಾಲೆ
ನಿನ್ನಯ ಕೊರಳಿನ ಮಾಲೆ,
ಕಪಿಲ ಪತಂಜಲ ಗೌತಮ ಜಿನನುತ
ಭಾರತ ಜನನಿಯ ತನುಜಾತೆ
ಜಯ ಹೇ ಕರ್ನಾಟಕ ಮಾತೆ!

ಶಂಕರ ರಾಮಾನುಜ ವಿದ್ಯಾರಣ್ಯ
ಬಸವೇಶ್ವರರಿಹ ದಿವ್ಯಾರಣ್ಯ
ರನ್ನ ಷಡಕ್ಷರಿ ಪೊನ್ನ
ಪಂಪ ಲಕುಮಿಪತಿ ಜನ್ನ
ಕಬ್ಬಿಗರುದಿಸಿದ ಮಂಗಳಧಾಮ,
ಕವಿಕೋಗಿಲೆಗಳ ಪುಣ್ಯಾರಾಮ!

ನಾನಕ ರಾಮಾನಂದ ಕಬೀರರ
ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ!

ತೈಲಪ ಹೊಯ್ಸಳರಾಳಿದ ನಾಡೆ,
ಡಂಕಣ ಜಕಣರ ನೆಚ್ಚಿನ ಬೀಡೆ,
ಕೃಷ್ಣ ಶರಾವತಿ ತುಂಗಾ
ಕಾವೇರಿಯ ವರ ರಂಗ!
ಚೈತನ್ಯ ಪರಮಹಂಸ ವಿವೇಕರ
ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!

ಸರ್ವ ಜನಾಂಗದ ಶಾಂತಿಯ ತೋಟ,
ರಸಿಕರ ಕಂಗಳ ಸೆಳೆಯುವ ನೋಟ.
ಹಿಂದೂ ಕ್ರೈಸ್ತ ಮುಸಲ್ಮಾನ
ಪಾರಸಿಕ ಜೈನರುದ್ಯಾನ.
ಜನಕನ ಹೋಲುವ ದೊರೆಗಳ ಧಾಮ,
ಗಾಯಕ ವೈಣಿಕರಾರಾಮ
ಕನ್ನಡಿ ನುಡಿ ಕುಣಿದಾಡುವ ಗೇಹ,
ಕನ್ನಡ ತಾಯಿಯ ಮಕ್ಕಳ ದೇಹ!

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ!
ಜಯ್ ಸುಂದರ ನದಿ ವನಗಳ ನಾಡೆ,
ಜಯ ಹೇ ರಸಋಷಿಗಳ ಬೀಡೆ.



ರಾಷ್ಟ್ರಕವಿ ಕುವೆಂಪು

ಸಂಪಾದಕೀಯ .,


ISBN : 979-889233259-0

ಭಾಷೆಯು ಸಂವಹನದ ವಾಹಕ. ಅಲ್ಲದೆ ಯಾವುದೇ ಒಂದು ಪ್ರಾಣಿ ಸಂವಹಿಸಲು ಸಾಧ್ಯವಿಲ್ಲ. ಭಾಷೆ ಎಂಬುದು ಕೇವಲ ಸಂವಹನಕ್ಕೆ ಅವಶ್ಯಕವಾದ ಮಾಧ್ಯಮವೇ ಆದರೂ ವ್ಯಕ್ತಿಯ ಭಾವನೆಗಳು ಹೊರಹೊಮ್ಮಲು ಇರುವ ವಾಹಕವೂ ಸಹ ಆಗಿದೆ. ಇಂದು ವಿವಿಧ ರೂಪಗಳಲ್ಲಿ ಸುಮಾರು 45 ದಶಲಕ್ಷ ಜನರು ಆಡು ನುಡಿಯಾಗಿ ಬಳಸುತ್ತಿದ್ದಾರೆ. ನಮ್ಮ "**ಕನ್ನಡ**" ಭಾಷೆಯು ಭಾರತದ 22 ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ. ಒಂದು ಭೌಗೋಳಿಕ ಎಲ್ಲೆಯೊಳಗೆ ಜನರು ಜನರು ಹೊಂದಿರುವ ಸಂಸ್ಕೃತಿ ಉಳಿಯಬೇಕೆಂದರೆ ಆ ಎಲ್ಲೆಯೊಳಗಿನ ಭಾಷೆ ಅಸ್ತಿತ್ವದಲ್ಲಿರಬೇಕು.

ಕನ್ನಡ ಸುಮಾರು 2000 ವರ್ಷಗಳಷ್ಟು ಇತಿಹಾಸ ಹೊಂದಿರುವ ಪ್ರಾಚೀನ ಭಾಷೆ. ಐದನೆಯ ಶತಮಾನದ ಹಲ್ಮಿಡಿ ಶಾಸನದಿಂದ ಹಿಡಿದು ಇತ್ತೀಚಿಗೆ ದೊರೆತ ತಾಳಗುಂದ ಶಾಸನದವರೆಗೂ ಕನ್ನಡ ಪ್ರತಿಯೊಂದು ಹಂತದಲ್ಲಿಯೂ ಬೆಳೆಯುತ್ತಲೇ ಬಂದಿದೆ. ನವೆಂಬರ್ ಒಂದು ಕೇವಲ ಕನ್ನಡದ ಆಚರಣೆಯಲ್ಲಿ ಅದು ನಮ್ಮ ನಾಡು ನುಡಿ ಬೆಳವಣಿಗೆಯನ್ನು ಕುರಿತು ಆತ್ಮವಿಮರ್ಶೆ ಮಾಡಿಕೊಳ್ಳುವ ಕಾಲಘಟ್ಟ. ಇಲ್ಲಿ ಅನೇಕ ರಾಜವಂಶಗಳು ಆಳಿ ಹೋಗಿದ್ದಾವೆ. ಅಲ್ಲದೇ, ಬೇಲೂರು, ಹಳೇಬೀಡು, ಬಾದಾಮಿ, ಪಟ್ಟದಕಲ್ಲು, ಐಹೊಳೆ, ಹಂಪಿ ಸ್ಥಳಗಳು ನಮ್ಮ ಇತಿಹಾಸ ಮತ್ತು ಪರಂಪರೆಗೆ ಸಾಕ್ಷಿಯಾಗಿವೆ, ಪ್ರಾಚೀನ ಕಾಲದಿಂದಲೂ ನಮ್ಮ ನಾಡು ಧರ್ಮ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕ್ರೀಡೆ, ಶಿಲ್ಪ ಮತ್ತು ವಾಸ್ತು ಶಿಲ್ಪಗಳಿಗೆ ಹೆಸರಾದುದು. ಶೈವ, ವೈಷ್ಣವ, ಜೈನ, ಬೌದ್ಧ, ಲಿಂಗಾಯತ, ಇಸ್ಲಾಂ, ಕ್ರೈಸ್ತ, ಮುಂತಾದ ಧರ್ಮಗಳಿಗೆ ಆಶ್ರಯ ನೀಡಿ "ಸರ್ವಧರ್ಮಧೇನು ನೀವಹಕ್ಕಾಡುಂಬೊಲ" ಎಂಬ ಕವಿವಾಣಿಗೆ ಅನ್ವರ್ಥಕವಾದುದು ಈ ಕನ್ನಡ ನಾಡು.

ಒಂದೊಮ್ಮೆ ಕಾವೇರಿಯಿಂದ ಗೋಧಾವರಿಯ ತೀರದವರೆಗೆ ಹಬ್ಬಿದ ನಮ್ಮ ವಿಶಾಲವಾದ ಕನ್ನಡ ನಾಡು ವಸಹಾತುಶಾಹಿಯ ಆಡಳಿತದ ಪರಿಣಾಮವಾಗಿ ಹರಿದು ಹಂಚಿ ಹೋಗಿತ್ತು. ಪಂಪ ರನ್ನರು ಬಸವಾದಿ ಶರಣರು, ದಾಸಶ್ರೇಷ್ಠರು ಹರಿಹರ, ರಾಘವಾಂಕ, ಕುಮಾರವ್ಯಾಸದಿ ಪ್ರಾಚೀನ ಕವಿಗಳು ರಸಋ ಶಿಗಳು ಹಾಗೂ ಕುವೆಂಪು, ಬೇಂದ್ರೆ ಕಣವಿ ಶಿವರುದ್ರಪ್ಪರಂತಹ ಆಧುನಿಕ ಕವಿ ಸಾಹಿತಿಗಳು ಕನ್ನಡವನ್ನು ಶ್ರೀಮಂತಗೊಳಿಸಿದ್ದಾರೆ.

ಈ ಸುಂದರ ಸಂಚಿಕೆ ಆಕರ್ಷಕವಾಗಿ ಮೂಡಿಬರಲು ಪ್ರೇರಣೆಯಾಗಿರುವ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಗೌರವಾನ್ವಿತ ಆಡಳಿತ ಮಂಡಳಿಯ ಸರ್ವಸದಸ್ಯರಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಹಾಗೆಯೇ ಕಾಲ ಕಾಲಕ್ಕೆ ಸಲಹೆ ಸೂಚನೆಗಳನ್ನು ನೀಡಿ ಭಾಷಾಸಂಘದ ಅಡಿಯಲ್ಲಿ

ನಡೆಯುವ ವಿವಿಧ ಕಾರ್ಯಕ್ರಮಗಳ ಯಶಸ್ವಿಗೆ ಕಾರಣರಾದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರರಾದ ಡಾ. ಶಿವಕುಮಾರ್ ಜಿ ಎಸ್ ರವರಿಗೆ ಹೃತ್ಪೂರ್ವಕ ದನ್ಯವಾದಗಳು.

ಭಾಷಾಸಂಘದ ಸೃಜನಾತ್ಮಕ ಕಾರ್ಯಚಟುವಟಿಕೆಗಳ ಪ್ರೇರೇಪಕರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಉತ್ತಮ ಮಾರ್ಗದರ್ಶಕರಾಗಿ ಈ ರೀತಿಯ ಉತ್ತಮ ಬರವಣಿಗೆಯನ್ನು ಪ್ರೋತ್ಸಾಹಿಸುತ್ತಿರುವ ಡಾ. ಕಿರಣ್ ಕುಮಾರ್ ಕೆ. ಎಸ್ ಹಾಗೂ ಡಾ. ರವಿ ಹೆಚ್., ರವರಿಗೆ ಹಾಗೂ ಮಹಾವಿದ್ಯಾಲಯದ ಎಲ್ಲಾ ಸಹಾಯಕ ಪ್ರಾಧ್ಯಾಪಕರುಗಳಿಗೂ ಕೂಡಾ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಬೋಧನಾ ಕಲಿಕಾ ಸಂದರ್ಭದ ಸಂದಿಗ್ದ ಸಮಯದ ಮಧ್ಯೆದಲ್ಲಿಯೂ ಕನ್ನಡ ನಾಡು ನುಡಿಯ ಬೆಳವಣಿಗೆಯಲ್ಲಿ ಕಲೆ, ವಾಸ್ತುಶಿಲ್ಪ, ಭೌಗೋಳಿಕ ಹಿನ್ನೆಲೆ, ಪ್ರಶಸ್ತಿಗಳು, ಸಾಹಿತ್ಯ ಪ್ರಕಾರಗಳು, ಹಾಗೂ ಪ್ರಮುಖ ಕವಿ, ಲೇಖಕರು ವಿಷಯಕ್ಕೆ ಸಂಬಂಧಿಸಿದಂತೆ ಸತತ ಅಧ್ಯಯನ ನಡೆಸಿ ತಮ್ಮ ಸುಂದರ ಅನುಭವಗಳನ್ನು ಲೇಖನಗಳ ಮೂಲಕ ಚೆಲುವ ಕನ್ನಡ ನಾಡನ್ನು ಕಟ್ಟಿಕೊಟ್ಟಿರುವ ಭಾಷಾ ಸಂಘದ ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕಲಿಕಯೆ ಅಂತಿಮ ಗುರಿ ಜ್ಞಾನಾರ್ಜನೆ, ಇದಕ್ಕೆ ಪೂರಕವಾದುದು ಗ್ರಂಥಾಲಯ. ಜ್ಞಾನದ ದಾಹವನ್ನು ತಣಿಸಲು ಅವಶ್ಯಕವಾದುದು ಪುಸ್ತಕಗಳು, ಪ್ರಶಿಕ್ಷಣಾರ್ಥಿಗಳ ಬೇಡಿಕೆಗೆ ಪೂರಕವಾಗಿ ಅಗತ್ಯ ಪುಸ್ತಕಗಳನ್ನು ನೀಡಿ ಸಕಾಲದಲ್ಲಿ ಪುಸ್ತಕಗಳನ್ನು ನೀಡುತ್ತಿರುವ ಗ್ರಂಥಪಾಲಕರಾದ ಶ್ರೀ ವಿಶ್ವನಾಥ ಜಿ., ಹಾಗೂ ಶ್ರೀಮತಿ ಕವಿತಾ ಹರವಿಶೆಟ್ಟರ್ ಇವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಚಿಗುರು ಸಂಚಿಕೆಯು ಮಾಹಿತಿಯ ಆಗರವಾಗಿ ಹೊರಹೊಮ್ಮಲು ಕಾರಣರಾದ ನೋಷನ್ ಪ್ರೆಶ್ ಪ್ರಕಾಶನದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಹೃದಯ ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಅಂತಿಮವಾಗಿ ಈ ಸಂಚಿಕೆಯು ಸಹೃದಯ ಓದುಗರಿಗೆ ಉತ್ತಮವಾದ ವಿಷಯಗಳನ್ನು ಒದಗಿಸುವ ಕಿರು ಹೊತ್ತಿಗೆಯಾಗಿ ಹಾಗೂ ಬರೆಯಬೇಕೆನ್ನುವ ಮನಸ್ಸುಗಳಿಗೆ ಪ್ರೇರಕಶಕ್ತಿಯಾಗಲಿ ಎಂದು ಹೇಳುತ್ತಾ, ಮುಂಬರುವ ದಿನಗಳಲ್ಲಿ ಸಂಚಿಕೆಯೂ ಇನ್ನೂ ಉತ್ತಮವಾಗಿ ಮೂಡಿಬರಲು ನಿಮ್ಮ ಸಲಹೆ ಸೂಚನೆಗಳನ್ನು ನಿರೀಕ್ಷೆಯಲ್ಲಿ ನಾವುಗಳು...........



**ಡಾ. ವೀರೇಂದ್ರ ಕುಮಾರ ವಾಲಿ ಎಸ್.,** ಸಹಾಯಕ ಪ್ರಾಧ್ಯಾಪಕರು
ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ.

# ಪರಿವಿಡಿ


| ಕ್ರಮ. ಸಂಖ್ಯೆ | ಲೇಖನಗಳ ಹೆಸರು ಮತ್ತು ಹೆಸರು | ಪುಟ ಸಂಖ್ಯೆ |
|---|---|---|
| 1 | **ಭಾಷಾ ಸಂಘ – 2022** | 3–5 |
| 2 | **ನಾಡಗೀತೆ – ಕುವೆಂಪು** | 6 |
| 3 | **ಸಂಪಾದಕೀಯ** | 7–8 |
| 4 | **ಕನ್ನಡ ಭಾಷಾ ಸೌಂದರ್ಯವನ್ನು ಸವಿಯೋಣ ಬನ್ನಿ**<br>ಡಾ. ವೀರೇಂದ್ರ ಕುಮಾರ ವಾಲಿ ಎಸ್., ಸಹಾಯಕ ಪ್ರಾಧ್ಯಾಪಕರು | 11–19 |
| 5 | **ಕನ್ನಡವೇ ಸತ್ಯ ಕನ್ನಡವೇ ನಿತ್ಯ**<br>ಡಾ. ರವಿ ಹೆಚ್., ಸಹಾಯಕ ಪ್ರಾಧ್ಯಾಪಕರು | 20–24 |
| 6 | **ನಮ್ಮ ಭಾಷೆಯ ವೈಶಿಷ್ಟ್ಯಗಳು**<br>ಡಾ. ಕಿರಣ್ ಕುಮಾರ್ ಕೆ ಎಸ್., ಸಹಾಯಕ ಪ್ರಾಧ್ಯಾಪಕರು | 25–29 |
| 7 | **ಮಕ್ಕಳ ಶಿಕ್ಷಣದಲ್ಲಿ ಪಾಲಕರ ಮತ್ತು ಶಿಕ್ಷಕರ ಪಾತ್ರ ಹೇಗಿರಬೇಕು?**<br>ಡಾ. ದೇವರಾಜ ವೈ., ಸಹಾಯಕ ಪ್ರಾಧ್ಯಾಪಕರು | 30–34 |
| 8 | **ಪ್ರಸ್ತುತದಲ್ಲಿ ಶಿಕ್ಷಕರು, ಬೋಧನೆ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನಗಳ ಪಾತ್ರ** – ಶ್ರೀ ವಿಶ್ವನಾಥ ಜಿ., ಗ್ರಂಥಪಾಲಕರು, | 35–39 |
| 9 | **ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ದೇಶಿ ಕೌಶಲಗಳ ಮಹತ್ವ**<br>ಶ್ರೀಮತಿ ಕವಿತಾ ಹರವಿಶೆಟ್ಟರ್, ಸಹಾಯಕ ಗ್ರಂಥಪಾಲಕರು | 40–42 |
| 10 | **ಕನ್ನಡದ ಮೊದಲ ಪ್ರಾಧ್ಯಾಪಕ ತಳುಕಿನ ವೆಂಕಣ್ಣಯ್ಯ** – ಮರೀಸ್ವಾಮಿ | 43–46 |
| 11 | **ಕನ್ನಡದ ಪ್ರಶಸ್ತಿಗಳು** – ರಫೀ ದೊಡ್ಮನಿ | 46–51 |
| 12 | **ಕನ್ನಡದ ಭೌಗೋಳಿಕ ಚರಿತ್ರೆ** – ಸಂದೀಪ್ ಕೆ ಎನ್ | 52–54 |
| 13 | **ಕರ್ನಾಟಕದ ಜನಪದ ಕಲೆಗಳು** – ಸಂಜಯ್ ಎನ್ ಜಿ | 54–60 |
| 14 | **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** – ಬಸವರಾಜ್ ಎನ್ ಗುಡಿ | 60–63 |
| 15 | **ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು** – ಸ್ನೇಹ ಎಸ್ | 63–67 |



ISBN : 979-889233259-0

| | | |
|---|---|---|
| 16 | **ಪಂಪ ಪ್ರಶಸ್ತಿ ಪುರಸ್ಕೃತರು** – ಮೇಘ ಕೆ | 68–70 |
| 17 | **ಕನ್ನಡದ ಶಾಸನಗಳು** – ರಂಜಿತಾ ಎಲ್ | 71–73 |
| 18 | **ಜಗಜ್ಯೋತಿ ಬಸವಣ್ಣನವರು** – ಪ್ರಶಾಂತ್ ಭಂಗಿ | 73–76 |
| 19 | **ಮಲೆನಾಡು** – ನಯನ ಹೆಚ್ | 77 |
| 20 | **ಭಕ್ತ ಕನಕದಾಸರು** – ಸುಮಾ ಜಿ ಎಂ | 78–80 |
| 21 | **ಅವಸರದೊಳಗೆ ಒಂದಿನ ಸಲ್ಲಿಕೆ** – ನಯನ ಹೆಚ್ | 81 |
| 22 | **ಗೋಕಾಕ್ ಚಳುವಳಿ (1980)** – ರಶೀದಾಬಾನು ಬೇಗಂ ದೊಡ್ಮನಿ | 82–84 |
| 23 | **ಪುಸ್ತಕವೆಂಬ ಪರಮಾಪ್ತ.** – ಪರಮೇಶ್ ಉಪ್ಪಾರ್ | 84–85 |
| 24 | **ಕನ್ನಡದ ಸಂಸ್ಕೃತಿ** – ಉಮಾ ಜೆ | 85–87 |
| 25 | **ವೀರಗಾಸೆ** – ಶಾಲಿನಿ ಆರ್ ಎಸ್ | 87–88 |
| 26 | **ಅಲ್ಲಮ ಪ್ರಭು** – ಬಿ. ರೇಖಮ್ಮ | 88–89 |
| 27 | **ಪುರಂದರದಾಸರು** – ಜವೇರಿಯಾ ಬಾನು | 90–91 |
| 28 | **ಭಾಷಾ ಸಂಘದ ಸಹಯೋಗದಲ್ಲಿ ನಡೆದ ಕಾರ್ಯಕ್ರಮಗಳು** | 92–100 |


**ಕನ್ನಡ ಭುವನೇಶ್ವರಿ ಮಾತೆ**




ISBN : 979-889233259-0

## ಕನ್ನಡ ಭಾಷಾ ಸೌಂದರ್ಯವನ್ನು ಸವಿಯೋಣ ಬನ್ನಿ!

**ಡಾ. ವೀರೇಂದ್ರ ಕುಮಾರ ವಾಲಿ ಎಸ್.**, ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಭಾಷೆ ಎಂಬುದು ಒಂದು ವಿಸ್ಮಯ, ನಾಗರಿಕ ಮಾನವನ ಮಹಾ ಅನ್ವೇಷಣೆ. ಜಗತ್ತಿನಲ್ಲಿ ಸಾವಿರಾರು ಭಾಷೆಗಳಿವೆಯಂತೆ. ಅವುಗಳಲ್ಲಿ ಕನ್ನಡದ್ದು ವಿಶಿಷ್ಟ ಸ್ಥಾನ. ಎರಡು ಸಾವಿರ ವರ್ಷಗಳಿಂದ ಜನಭಾಷೆಯಾಗಿದ್ದು ಇಂದಿಗೂ ಜೀವಂತವಾಗಿರುವ ನುಡಿ ಇದು. ಇಂಥ ಅನನ್ಯತೆ ಇರುವುದು ಪ್ರಪಂಚದ ನಾಲ್ಕೈದು ಭಾಷೆಗಳಿಗೆ ಮಾತ್ರ. ಅಸಂಖ್ಯಾತ ಜನ ಕನ್ನಡವನ್ನು ಬಳಸುತ್ತ ಬಳಸುತ್ತ ಆ ನುಡಿಯಲ್ಲಿನ ಶಬ್ದಗಳಿಗೂ ಅವುಗಳ ಆಳದ ಅರ್ಥಗಳಿಗೂ ಅನನ್ಯ ಸಂಬಂಧ ಉಂಟಾಗಿದೆ. ಮಾತಿಗೂ ಅರ್ಥಕ್ಕೂ ಇರುವ ನಂಟನ್ನು ಕಾಳಿದಾಸ ಶಿವಪಾರ್ವತಿಯರಿಗೆ ಹೋಲಿಸಿದ್ದಾನೆ. ಆದರೆ ಶಬ್ದ– ಅರ್ಥಗಳಲ್ಲಿ ಮೂಲಭೂತವಾದ ನಂಟೇನೂ ಇಲ್ಲ, ರೂಢಿಯಿಂದ ಬಂದದ್ದು ಅಷ್ಟೆ.

"ಪದನರಿದು ನುಡಿಯಲುಂ ನುಡಿದುದಂ ಅರಿದು ಆರಯಲುಂ ಆರ್ಪರ್ ಆ ನಾಡವರ್ಗಳ್" ಎಂದು ಕನ್ನಡದ ಅತ್ಯಂತ ಪ್ರಾಚೀನ ಉಪಲಬ್ಧ ಕೃತಿ 'ಕವಿರಾಜಮಾರ್ಗಕ' ಹೇಳುತ್ತದೆ. ಭಾಷೆಯ ಹದವನ್ನು ತಿಳಿದು ಮಾತನಾಡುವುದನ್ನೂ, ಇತರರು ಹೇಳಿದ್ದನ್ನು ಸರಿಯಾಗಿ ಅರ್ಥಮಾಡಿಕೊಂಡು ಯೋಚಿಸುವುದನ್ನೂ ಕನ್ನಡಿಗರು ಬಲ್ಲರು ಎಂಬುದು ಈ ಮಾತಿನ ಅರ್ಥ. ಇದು ಅವರಿಗೆ ಸಹಜವೆಂಬಂತೆ ಅದು ವರ್ಣಿಸುತ್ತದೆ. ಆದರೆ ಇದು ಅಭಿಮಾನದ ಮಾತು. ಮಾತು ಮತ್ತು ಅರ್ಥ – ಇವೆರಡರ ಸಂಬಂಧವನ್ನು ಅರಿತಾಗ ಮಾತ್ರ ಮಾತಿನ 'ಹದಕ' ಉಂಟಾಗುತ್ತದೆ. ಮಾತಿನ ಹೊರಮೈ, ಅದರಲ್ಲಿ ಅರ್ಥ ಬಂದು ಸೇರುವ ಬಗೆ – ಇವುಗಳ ಮರ್ಮ ತಿಳಿದರೆ ಭಾಷೆಯ ಬಗೆಗಿನ ಹಿಡಿತ ಕೈಗೂಡೀತು. ಇದು ಸಾಧ್ಯವಾಗುವುದು ಅಭ್ಯಾಸದಿಂದ, ಎರಡೂ ರೀತಿಯಲ್ಲಿ: ಓದುವುದರಿಂದ ಹಾಗೂ ಬಳಸುವುದರಿಂದ. ಈ ಎರಡು ಸಾವಿರ ವರ್ಷಗಳಲ್ಲಿ ಅಸಂಖ್ಯಾತ ಕನ್ನಡಿಗರ ಬಳಕೆ ಎಂಬ ಪಾತ್ರದಲ್ಲಿ ಕನ್ನಡ ಶಬ್ದವಾಹಿನಿಯು ನಿರಂತರವಾಗಿ ಹರಿದು ಬಂದಿದೆ; ಆ ಹರಿವಿನಲ್ಲಿ ಕೆಲವು ಶಬ್ದಗಳು ಹಿಂದಿನಂತೆಯೇ ಉಳಿದು ಬಂದಿವೆ, ಕೆಲವು ಮಾರ್ಪಾಟು ಹೊಂದಿವೆ, ಮತ್ತೆ ಕೆಲವು ಮರಳಲ್ಲಿ ಇಂಗಿಹೋಗಿವೆ, ಎಷ್ಟೋ ಪದಗಳು ಹೊಸತಾಗಿ ಬಂದು ಸೇರಿಕೊಂಡಿವೆ – ಹೀಗೇ ಈ ನದಿ ಹರಿಯುತ್ತಿದೆ. "ಶಬ್ದಪಾರಂ ಆಗರ್ಂ ಅಶಕ್ಯಂ" ಎಂಬ ಮಾತಿದ್ದರೂ, ನಾವು ಬಳಸುವ ಶಬ್ದಗಳ ಸ್ವರೂಪ – ಅಂದರೆ ಅವುಗಳ ಹುಟ್ಟು, ಬೆಳವಣಿಗೆಗಳನ್ನು ಕೆದಕುವ ಹಾಗೂ ಶಬ್ದ–ಅರ್ಥಗಳ ದಾಂಪತ್ಯದ


ISBN : 979-889233259-0

ಮರ್ಮವನ್ನು ಬೆದಕುವ, ಅದರ ಫಲವಾದ ಕುಡಿಗಳನ್ನು ಹುಡುಕುವ ಮೂಲಕ ಕನ್ನಡ ಭಾಷೆಗಿರುವ ಪದಗಳ ಮರ್ಮವನ್ನು ಇಂದಿಗೂ ನಾವು ಅರಿಯಬೇಕು.

**ಕನ್ನಡ ಭಾಷೆಯನ್ನು ಲಿಪಿಗಳ ರಾಣಿ ಎಂದು ಏಕೆ ಕರೆಯಬೇಕು?**

ಯಾವ ಭಾಷೆಯನ್ನು ಆದರೂ ಕಲಿಯಬಹುದು ಆದರೆ ಕರ್ನಾಟಕದವರನ್ನ ಹೊರತುಪಡಿಸಿ ಕನ್ನಡವನ್ನು ಕಲಿಯಬೇಕಾದರೆ ತುಂಬಾ ಕಷ್ಟ ಯಾಕೆಂದರೆ ಇದರಲ್ಲಿ ಬರುವ ಅಕ್ಷರಗಳು ಶಬ್ದಗಳು ವಾಕ್ಯಗಳು ಒತ್ತಕ್ಷರಗಳು ಸಂಧಿಗಳು ವ್ಯಾಕರಣದಲ್ಲಿ ಬರುವ ಎಲ್ಲಾ ವಿಷಯಗಳು ಕಲಿಯಲು ಕಷ್ಟವಾಗುತ್ತದೆ ಆದರೆ ಬೇರೆ ಭಾಷೆಗಳಲ್ಲಿ ಎಷ್ಟು ಲಿಪಿಗಳನ್ನು ಹೊಂದಿರುವುದಿಲ್ಲ ಹಾಗಾಗಿ ಕನ್ನಡ ಭಾಷೆಯನ್ನ ಲಿಪಿಗಳ ರಾಣಿ ಎಂದು ಕರೆಯುತ್ತಾರೆ

ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಯಾವುದು ರಾಣಿ ಎಂದು ಹೆಚ್ಚಿನ ಜನರು ಆಶ್ಚರ್ಯ ಪಡುತ್ತಾರೆ. ಜಗತ್ತಿನ ಎಲ್ಲಾ ಭಾಷೆಗಳ ರಾಣಿ ಎಂದು ಪರಿಗಣಿಸಲ್ಪಡುವ ಭಾಷೆ ಕನ್ನಡ. ಭಾರತದಲ್ಲಿ ಕರ್ನಾಟಕದಲ್ಲಿ ಮಾತನಾಡುವ ಭಾಷೆ ಕನ್ನಡ. ಇದು ಅನೇಕ ಭಾಷೆಗಳ ತಾಯಿ. ಕನ್ನಡವನ್ನು ಎಲ್ಲಾ ಭಾಷೆಗಳ ರಾಣಿ ಎಂದು ಕರೆಯಲಾಗುತ್ತದೆ. ಇದು ಭಾರತದ ದಕ್ಷಿಣ ಭಾಗದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಬಳಸಲಾಗುವ ಭಾಷೆಯಾಗಿದೆ. ಸರಿಸುಮಾರು, 44 ಮಿಲಿಯನ್ ವ್ಯಕ್ತಿಗಳು ಜಗತ್ತಿನಾದ್ಯಂತ ಭಾಷೆಯಲ್ಲಿ ಸಂವಹನ ನಡೆಸುತ್ತಿದ್ದಾರೆ.

**ಕನ್ನಡ ಭಾಷಾ ಬಳಕೆಯ ಔಚಿತ್ಯ**

1. ಭಾರತದ ಅತ್ಯಂತ ಹಳೆಯ ಭಾಷೆ. (ಸಂಸ್ಕೃತ ಮತ್ತು ತಮಿಳು ನಂತರ) 2000 ವರ್ಷಗಳು.
2. ಕನ್ನಡ 99.99% ಪರಿಪೂರ್ಣ – ತಾರ್ಕಿಕವಾಗಿ ಮತ್ತು ವೈಜ್ಞಾನಿಕವಾಗಿ.
3. ಕನ್ನಡಿಗರಿಗೆ 8 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿವೆ.
4. ಶ್ರೀ ವಿನೋಬಾ ಭಾವೆ ಅವರು ಕನ್ನಡ ಲಿಪಿಯನ್ನು ವಿಶ್ವ ಲಿಪಿಗಳ ರಾಣಿ ಎಂದು ಕರೆದರು – "ವಿಶ್ವ ಲಿಪಿಗಳ ರಾಣಿ – ಕನ್ನಡ".
5. ಅಂತರಾಷ್ಟ್ರೀಯ ಭಾಷೆ ಎಂದು ಕರೆಯಲ್ಪಡುವ ಇಂಗ್ಲಿಷ್ ತನ್ನದೇ ಆದ ಲಿಪಿಯನ್ನು ಹೊಂದಿಲ್ಲ. ಇಂಗ್ಲಿಷ್ ಅನ್ನು "ರೋಮನ್" ನಲ್ಲಿ ಬರೆಯಲಾಗಿದೆ.
6. ರಾಷ್ಟ್ರೀಯ ಭಾಷೆ ಎಂದು ಕರೆಯಲ್ಪಡುವ ಹಿಂದಿ ತನ್ನದೇ ಆದ ಲಿಪಿಯನ್ನು ಹೊಂದಿಲ್ಲ. ಹಿಂದಿಯನ್ನು "ದೇವನಾಗರಿ"ಯಲ್ಲಿ ಬರೆಯಲಾಗಿದೆ.


ISBN : 979-889233259-0

7. ತಮಿಳು ಲಿಪಿಯನ್ನು ಹೊಂದಿದ್ದರೂ, ತಾರ್ಕಿಕವಾಗಿ ಅದು ಅಪೂರ್ಣವಾಗಿದೆ ಸಾಮಾನ್ಯ ಅಕ್ಷರಗಳನ್ನು ಅನೇಕ ಉಚ್ಚಾರಣೆಗಳಿಗೆ ಬಳಸಲಾಗುತ್ತದೆ.
8. ಕನ್ನಡದವರು 2000 ವರ್ಷಗಳಷ್ಟು ಹಳೆಯವರು. ನೀವು ಮಾತನಾಡುವುದನ್ನು ಬರೆಯಬಹುದು ಮತ್ತು ನೀವು ಬರೆಯುವುದನ್ನು ಓದಬಹುದು.
9. ಅಮೋಘ ವರ್ಷ ನೃಪತುಂಗ ಅವರು "ಕಾವೇರಿಯಿಂದ, ಗೋದಾವರಿವರೇಗೀರ್ಪ..." ಎಂದು ಕವಿರಾಜ ಮಾರ್ಗ ಬರೆದಾಗ ಇಂಗ್ಲಿಷ್ ತೊಟ್ಟಿಲಲ್ಲಿತ್ತು ಮತ್ತು ಹಿಂದಿಯೇ ಹುಟ್ಟಲಿಲ್ಲ.
10. ವಿದೇಶಿಗರು (ಕಿಟ್ಟಲ್) ನಿಘಂಟನ್ನು (ಶಬ್ದ ಕೋಶ) ಬರೆದ ಏಕೈಕ ಭಾರತೀಯ ಭಾಷೆ ಕನ್ನಡ. ಅಪರೂಪದ ಮತ್ತು ವಿಭಿನ್ನವಾದ ಸಾಹಿತ್ಯದ ಕನ್ನಡದಲ್ಲಿ ಮಾತ್ರ ರಗಳೆ ಸಾಹಿತ್ಯವನ್ನು ಕಾಣಬಹುದು.
11. ಕುವೆಂಪು ಅವರು ಪಡೆದ ಸಾಹಿತ್ಯ ಪ್ರಶಸ್ತಿಗಳ ಸಂಖ್ಯೆಯು ಯಾವುದೇ ಭಾರತೀಯ ಲೇಖಕರಿಗಿಂತ ಹೆಚ್ಚು.
12. ಕನ್ನಡ ಛಂದಸ್ಸು (ಷಟ್ಪದಿಗಳು) ಎಲ್ಲಾ ಇತರ ಭಾಷೆಗಳಲ್ಲಿಯೂ ಹೊರತಂದಿದೆ.

**ಕನ್ನಡ ವರ್ಣಮಾಲೆ**

ಯಾವುದೇ ಭಾಷೆಯನ್ನು ನಾವು ಕಲಿಯಬೇಕಾದರೂ ಮೊದಲಿಗೆ ಅದರ ವರ್ಣಮಾಲೆಯನ್ನು ಕಲಿಯುತ್ತೇವೆ. ಕನ್ನಡ ವರ್ಣಮಾಲೆಯಲ್ಲಿ ಐವತ್ತು ಅಕ್ಷರಗಳಿವೆ. ಸ್ವರಗಳು ಅ ಆ ಇ ಈ ಉ ಊ .............ಒ ಓ ಔ ಹೂಗೆ 16, 14+ ಅನುಸ್ವರ(ಅಂ) ಮತ್ತು ವಿಸರ್ಗ(ಅಃ), ವ್ಯಂಜನ ಕ ಖ ಗ ಘ ಯಿಂದ ಪ ಫ ಬ ಭ ಮ ವರೆಗೆ 25+ ಯ ರ ಲ ವ......... ಳ ವರೆಗ 9. ಒಟ್ಟು 34. ಪ್ರತಿ ವ್ಯಂಜನವನ್ನು ಸ್ವರಗಳೊಂದಿಗೆ ಸೇರಿಸಿ ಕಾಗುಣಿತ, ಕ ಕಾ ಕಿ ಕೀ ತಯಾರಿಸಿಕೊಂಡಿದ್ದೇವೆ. ಈ ವ್ಯಂಜನಗಳಲ್ಲಿ ಮೊದಲಿಗೆ 5 ಅಕ್ಷರಗಳ ಐದು ಮಾರ್ಗವನ್ನು ನೋಡುತ್ತೇವೆ. ಇವು ಕ ವರ್ಗ, ಚ ವರ್ಗ, ಟ ವರ್ಗ, ತ ವರ್ಗ ಮತ್ತು ಪ ವರ್ಗ, ಇವುಗಳಲ್ಲಿ ಒಂದೊಂದು ವರ್ಗದ ಉಚ್ಚಾರಣೆಯ ಧ್ವನಿಯೂ ನಮ್ಮ ನಾಲಿಗೆ, ಬಾಯಿ, ಒಸಡು ಮತ್ತು ತುಟಿಗಳ ನಡುವೆ ಚಲನೆಯನ್ನು ಆರಂಭಿಸಿದೆ. ಕ ಚ ತ ಪ ಎಂದು ಹೇಳಲಾಗುವ ನಮ್ಮ ನಾಲಿಗೆ ಮೇಲ್ದವಡೆಯ ಹಿಂದಿನಿಂದ ಮುಂದಕ್ಕೆ ಚಲಿಸುವುದನ್ನು ಗಮನಿಸಿ, ಕೊನೆಗೆ ಈ ಯಾವುದೇ ವರ್ಗಕ್ಕೂ ಸೇರದ ಅಕ್ಷರಗಳಾದ ಯ ರ ಲ ವ ಶ ಷ ಸ ಹ ಳ ಗಳನ್ನು ಸೇರಿಸಲಾಗಿದೆ. ಹೀಗೆ ಕನ್ನಡ ಅಕ್ಷರಮಾಲೆಯನ್ನು ಸಂಪೂರ್ಣವಾಗಿ ತಳಹದಿಯ ಮೇಲೆ ವಿನ್ಯಾಸಗೊಳಿಸಲಾಗಿದೆ. ಇದು ಇನ್ನಾವುದೇ ದೇಶದ ಭಾಷೆಯಲ್ಲಿಲ್ಲ.


ISBN : 979-889233259-0

**ಸಂಸ್ಕೃತವನ್ನೂ ಮೀರಿದ ಕನ್ನಡ ಭಾಷೆಯ ಬೆಳವಣಿಗೆ**

ಸಂಸ್ಕೃತದ ತಳಹದಿಯ ಮೇಲೆ ಕನ್ನಡ ನಿಂತಿದ್ದರೂ ಸಂಸ್ಕೃತದಲ್ಲಿಲ್ಲದ ಹಲವು ವಿಶೇಷತೆಗಳು ಕನ್ನಡದಲ್ಲಿವೆ. ಅದನ್ನೂ ಮೀರಿದ ಬೆಳವಣಿಗೆ ಕಂಡಿದೆ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಸಂಸ್ಕೃತದಲ್ಲಿಲ್ಲದ ಹಲವು ಅಕ್ಷರಗಳು ಕನ್ನಡದಲ್ಲಿವೆ ಎಂದರೆ ನಮಗೆ ಆಶ್ಚರ್ಯವಾಗಬಹುದು, ಅವು ಯಾವುದೆಂದರೆ,

1. ಕನ್ನಡದ ಸ್ವರಗಳು ಎ, ಏ, ಐ, ಒ, ಓ, ಔ.. ಇದೆಯಲ್ಲ, ಅದರಲ್ಲಿ ಎ ಮತ್ತು ಒ ಹ್ರಸ್ವ ಸ್ವರಗಳು ಸಂಸ್ಕೃತದಲ್ಲಿಲ್ಲ. ಸಂಸ್ಕೃತದಲ್ಲಿ ಏ, ಐ, ಒ, ಔ ಇಷ್ಟೇ. ಎಲ್ಲಿ, ಏನಾಯ್ತು?, ಬೆಕ್ಕಿಗೆ ಬೇಲಿ ಏಕೆ? ಒಬ್ಬ ಓಡಿಬಂದ, ಒನಕೆ ಓಬವ್ವ, ಕೋಳೂರ ಕೊಡಗೂಸು, ಇವುಗಳಲ್ಲೆಲ್ಲ ಎ, ಏ ಮತ್ತು ಒ, ಓ ಪ್ರಯೋಗಗಳಿವೆ.
2. ಳ ಕನ್ನಡದ್ದು! ನಲ ನಳ, ಕಮಲ ಕಮಳ, ಸ್ಥಲ ಸ್ಥಳ ಹೀಗೆ ಸಂಸ್ಕೃತ ಪದಗಳನ್ನು ಕನ್ನಡದಲ್ಲಿ ಬಳಸುತ್ತೇವೆ. ಲಳಯೋ ನ ಭೇದಃ ಎಂದು ಸಂಸ್ಕೃತದಲ್ಲಿ ಸೂತ್ರವನ್ನೇ ಕೊಟ್ಟಿದ್ದಾರೆ. ಇದು ಸಂಸ್ಕೃತಕ್ಕೆ ಅನ್ವಯಿಸಬಹುದು. ಆದರೆ, ಕನ್ನಡದಲ್ಲಿ ಲ ಬೇರೆ, ಳ ಬೇರೆ, ಉದಾ: ಹುಲಿ ಹುಳಿ, ಹಲ್ಲಿ ಹಳ್ಳಿ, ಹಲಸು ಹಳಸು.
3. ಎರಡು ಅಕ್ಷರಗಳು ಕನ್ನಡದಲ್ಲಿದ್ದವು. ಆದರೆ ಈಗ ಕೈಬಿಟ್ಟಿದೇವೆ. ಅವು ಹಳೆಗನ್ನಡದಲ್ಲಿ ಕಾಣುವ ಱ ಮತ್ತು ೞ ಅಕ್ಷರಗಳು.ಕುಱುತೋದದೆಯಂ, ಅಱುತುಕೋ ಎಂಬಲ್ಲಿ ಱ ಅನ್ನು ಬಳಸುತ್ತಿದ್ದರು. ಅರಿ ಬೇರೆ ಅಱಿ ಬೇರೆ, ಹಾಗೆಯೇ ೞ ಅಕ್ಷರಃ ಪಟ್ಟು ಪತ್ತಿ ಹತ್ತಿ ಫಲಂ ಪಟಿಂ ಪಣ್ ಹಣ್ಣು, ಬಹುಶಃ ನಾಲಿಗೆಯನ್ನು ಹೊರಳಿಸಿ ಉಚ್ಚರಿಸಲು ಆ ಅಕ್ಷರಗಳನ್ನು ಬಳಸುತ್ತಿಲ್ಲ.

ಇಂದು ನಾವು ಇವಲ್ಲದೆ, ಪದಗಳ ಅಂತ್ಯದಲ್ಲಿ ಅನುಸ್ವರಗಳನ್ನೂ, ಅರ್ಧಾಕ್ಷರಗಳನ್ನು ಕೈಬಿಟ್ಟಿದ್ದೇವೆ, ತಿಳಿದುಂ, ಅವನುಂ ಹಾಗೆಯೇ ಮೇಣ್, ಕೇಳ್, ಎಂಬ ಪ್ರಯೋಗಗಳು ಈವತ್ತು ಕನ್ನಡದಲ್ಲಿಲ್ಲ.

**ಕನ್ನಡದ ಧ್ವನಿ ಲಿಪ್ಯಂತರ**

ಕಂಪ್ಯೂಟರ್ ತಾಂತ್ರಿಕತೆ ಅಭಿವೃದ್ಧಿ ಹೊಂದಿದಂತೆ ಎಲ್ಲ ಭಾಷೆಗಳಲ್ಲಿಯೂ ಹೊಸ ಹೊಸ ತಂತ್ರಾಂಶಗಳ ಸೇರ್ಪಡೆಯೂ ಆಗುತ್ತಿವೆ. ಈ ನಿಟ್ಟಿನಲ್ಲಿ ನಾವು ಭಾಷೆಯಲ್ಲಿ ಸುಮಾರು ಹದಿನೈದು–ಹದಿನಾರು ವರ್ಷಗಳಿಂದ ಪ್ರಗತಿ ಸಾಧಿಸಿರುವ voice recognition ತಂತ್ರಾಂಶವನ್ನು ಕಾಣುತ್ತಿದ್ದೇವೆ.


ISBN : 979-889233259-0

ಇದನ್ನು transphonetic literation ಅಥವಾ ಕನ್ನಡದಲ್ಲಿ 'ಧ್ವನಿ ಲಿಪ್ಯಂತರ' ತಂತ್ರಾಂಶ ಎನ್ನಬಹುದು. ಇದರಲ್ಲಿ ಒಬ್ಬ ವ್ಯಕ್ತಿ ಮೈಕ್ರೋಫೋನಲ್ಲಿ ಹೇಳಿದ ಧ್ವನಿತರಂಗಗಳನ್ನು ಕಂಪ್ಯೂಟರ್ ಗ್ರಹಿಸಿ ಅದನ್ನು ಅಕ್ಷರರೂಪದಲ್ಲಿ ಬರೆಯುವುದು.

ಇಂಗ್ಲೀಷಿನಲ್ಲಿ ಈ ತಂತ್ರಾಂಶವನ್ನು ರೂಪಿಸುವುದು Software Engineer ಗಳಿಗೆ ಅತಿ ಕ್ಲಿಷ್ಟವಾದ ಕಾರ್ಯ, ಏಕೆಂದರೆ, ಇಂಗ್ಲೀಷಿನಲ್ಲಿ ನಾವು ಉಚ್ಚರಿಸುವುದು ಒಂದಾದರೆ, ಬರವಣಿಗೆಯಲ್ಲಿ ಬರೆಯುವುದೇ ಬೇರೆ. ಅಲ್ಲದೆ ಒಂದೇ ಪದವನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿ ಉಚ್ಚರಿಸುತ್ತೇವೆ. ಇವೆಲ್ಲವನ್ನೂ ಕಂಪ್ಯೂಟರ್ ಗ್ರಹಿಸಿ ಸಂದರ್ಭಕ್ಕೆ ತಕ್ಕಂತೆ ಬರೆಯಬೇಕು. ಇನ್ನೂ ಪ್ರಗತಿಯಲ್ಲಿರುವ ಈ ಅಮೋಘ ಕಾರ್ಯ ಈವತ್ತು ಶೇಕಡ 98 ರಷ್ಟು ನಿಖರತೆ ಪಡೆದಿದೆ.

ಹೀಗೆ ಆ ತಂತ್ರಾಂಶದಲ್ಲಿ ಇಂಗ್ಲೀಷ್ ಭಾಷೆಯ ಸಂಪೂರ್ಣ ನಿಘಂಟನ್ನು ಮೊದಲಿಗೆ ಕಂಪ್ಯೂಟರ್‌ನ ನೆನಪಿನ ಭಂಡಾರದಲ್ಲಿಟ್ಟು, ಅದರಲ್ಲಿನ ಒಂದೊಂದು ಪದವೂ ಸಾಮಾನ್ಯವಾಗಿ ಹೇಗೆ ಉಚ್ಚರಿಸಲ್ಪಡುತ್ತದೆ ಎಂಬ ವಿಚಾರವನ್ನು ಒಂದೊಂದಾಗಿ ಅದರ ನೆನಪಿಗೆ ತುಂಬಬೇಕು. ಅಲ್ಲಿಂದ ಮತ್ತೊಬ್ಬ ವ್ಯಕ್ತಿ ಆ ಭಂಡಾರದಲ್ಲಿರುವ ಯಾವುದೇ ಪದವನ್ನು ಉಚ್ಚರಿಸಿದರೂ ಆ ಧ್ವನಿ ತರಂಗಗಳನ್ನು ಗ್ರಹಿಸಿ, ಅದಕ್ಕೆ ಯಾವ ಅಕ್ಷರ ಜೋಡಣೆ ಹೊಂದುತ್ತದೆ ಎಂದು ತುಲನೆ ಮಾಡಿ ಆ ಪದವನ್ನು ಬರೆಯುತ್ತದೆ. ಇಂಗ್ಲೀಷಿನಲ್ಲಿ ಈ ತತ್ರಾಂಶವನ್ನು ತಯಾರಿಸಲು ಎಷ್ಟೊಂದು ಕ್ಲಿಷ್ಟ ಮತ್ತು ಈ ಕಾರ್ಯ ಎಷ್ಟು ಸಂಕೀರ್ಣತೆಯಿಂದ ಕೂಡಿದೆ ಎಂಬುದು ನಿಮಗೆ ಅರ್ಥವಾಗಿರಬಹುದು.

ಈಗ ಕನ್ನಡಕ್ಕೆ ಬನ್ನಿ! ಕನ್ನಡದಲ್ಲಿ ನಾವು ಏನು ಉಚ್ಚರಿಸುತ್ತೇವೋ ಅದನ್ನೇ ಲಿಪಿಯಲ್ಲಿ ಬರೆಯುತ್ತೇವೆ. ಮೈಕ್ರೋಫೋನಿನಲ್ಲಿ ಹೇಳಿದ ಧ್ವನಿಯನ್ನು ಗಣಕಯಂತ್ರ ಗ್ರಹಿಸಿ ಅದನ್ನು ನೇರವಾಗಿ ಅಕ್ಷರರೂಪಕ್ಕೆ ಲಿಪ್ಯಂತರಿಸುವುದು ಬಹಳ ಸುಲಭ ಸಾಧ್ಯವಾದ ಕೆಲಸ. ಹೇಳಿದ್ದನ್ನು ಹೇಳಿದ ಹಾಗೆ ಬರೆದುಕೊಂಡು ಹೋಗುತ್ತದೆ. ನನಗೆ ಗೊತ್ತಿಲ್ಲ ಎನ್ನುವಂತಿಲ್ಲ, ನಿಘಂಟಿನ ಅವಶ್ಯಕತೆಯಿಲ್ಲ! ಶೇಕಡ ನೂರಕ್ಕೆ ಮೀರದಷ್ಟು ಕರಾರುವಕ್ಕಾದ ಪದ್ಧತಿ! ಇಂತಹ ತತ್ರಾಂಶವನ್ನು ಒಂದು ಸಾರಿ ಕನ್ನಡದಲ್ಲಿ ರೂಪಿಸಿಬಿಟ್ಟರೆ, ಭಾರತದ ಎಲ್ಲ ಭಾಷೆಗಳಿಗೂ ಅನುಕೂಲ, ಅಲ್ಲದೆ ಪ್ರಪಂಚದ ಯಾವುದೇ ಭಾಷೆಯನ್ನು ಈ ತತ್ರಾಂಶಕ್ಕೆ ಅಳವಡಿಸಬಹುದು.

ಉದಾಹರಣೆಗೆ ಒಬ್ಬ ಬಂಗಾಳಿ ಲೇಖಕ ಬಂಗಾಳಿ ಭಾಷೆಯಲ್ಲಿ ಒಂದು ಲೇಖನವನ್ನು ಬರೆಯಬೇಕಾದಲ್ಲಿ ಈ ಕನ್ನಡ ಧ್ವನಿ ಲಿಪ್ಯಂತರ ತಂತ್ರಾಂಶವನ್ನು ಬಳಸಿ, ಮೊದಲಿಗೆ ಲಿಪಿಯನ್ನು ಬಂಗಾಳಿ


ISBN : 979-889233259-0

ಎಂದು ಕಂಪ್ಯೂಟರ್‌ಗೆ ನಿರ್ದೇಶಿಸಿ, ಅಲ್ಲಿಂದ ಮುಂದೆ ತನ್ನ ಭಾಷೆಯಲ್ಲಿ ಹೇಳುತ್ತಾ ಹೋದರೆ, ಯಾವುದೇ ಅಡೆತಡೆಯಿಲ್ಲದೆ ಬಂಗಾಳ ಭಾಷೆಯಲ್ಲಿಯೇ ಕೃತಿಯನ್ನು ರಚಿಸಬಹುದು. ಇದನ್ನೇ ಒಬ್ಬ ಮಲೆಯಾಳಿಯೂ ಮಾಡಬಹುದು. ತತ್ರಾಂಶ ಕನ್ನಡದ್ದಾದ್ದರಿಂದ ಇದನ್ನು ಬಳಸಿ ಯಾವ ಭಾಷೆಯಲ್ಲಿ ಬೇಕಾದರೂ ಬರವಣಿಗೆಯಲ್ಲಿ ಸಿದ್ಧಪಡಿಸಬಹುದು. ಇದು ಕನ್ನಡದ ಅತಿಶಯ ವಿಶೇಷತೆಯಲ್ಲದೆ ಮತ್ತಿನ್ನೇನು?

ಆದ್ದರಿಂದ ನಾವು ಇಂದಿಗೂ ಒಂದು ತೀರ್ಮಾನಕ್ಕೆ ಬರಬಹುದು. ಇಂದು ಪ್ರಪಂಚದಲ್ಲಿ ಪ್ರಚಲಿತವಿರುವ ಭಾಷೆಗಳಲ್ಲೆಲ್ಲ ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ರಚನೆಯಾದ ಗಣಕ ತಾಂತ್ರಿಕತೆಗೆ ಅತ್ಯಂತ ಸರಳವೂ, ಪೂರಕವೂ ಆದ ಮತ್ತು ಎಲ್ಲಕಿಂತಲೂ ಪರಿಪೂರ್ಣವಾದ ಭಾಷೆ ನಮ್ಮ ಕನ್ನಡ! ಇದನ್ನು ನಾನು ಕನ್ನಡ ಭಾಷೆಯ ಮೇಲಿನ ಅಭಿಮಾನದಿಂದಾಗಲೀ, ಈ ನೆಲದ ಮಣ್ಣಿನ ಋಣಭಾರ ಕಡಿಮೆಯಾಗಲಿ ಎಂದಾಗಲೀ ಹೇಳುತ್ತಿರುವ ಮಾತಲ್ಲ. ಕನ್ನಡಕ್ಕೆ ಈ ಒಂದು ಅದ್ಭುತವಾದ ಉನ್ನತ ಸ್ಥಾನ ಇರುವುದು ನೂರಕ್ಕೆ ನೂರು ಸತ್ಯ.

**ಕನ್ನಡ ಭಾಷೆಯ 9 ಅಚ್ಚರಿಯ ಸಂಗತಿಗಳು ಗೊತ್ತೇ!**

ನಮ್ಮ ಮಾತೃಭಾಷೆ ಕನ್ನಡದ ಈ 9 ಅಚ್ಚರಿಯ ಸಂಗತಿಗಳನ್ನ ನೀವು ನೋಡಲೇಬೇಕು. ಈ ಸಂಗತಿಗಳು ಒಂದಕ್ಕಿಂತ ಒಂದು ಕುತೂಹಲ ಮತ್ತು ಆಶ್ಚರ್ಯ ಹುಟ್ಟಿಸುವಂತಿವೆ. ಬನ್ನಿ ಹಾಗಾದರೆ ತಡಮಾಡದೆ ಈ ಅದ್ಭುತ ಭಾಷೆಯ 9 ಅದ್ಭುತ ವಿಚಾರಗಳನ್ನು ತಿಳಿದುಕೊಳ್ಳಲೇಬೇಕು.

1. ಕನ್ನಡ ಭಾರತದ ಅತ್ಯಂತ ಹಳೆಯ ಭಾಷೆಗಳಲ್ಲಿ ಒಂದು.! ಹೌದು ತಮಿಳು ಮತ್ತು ಸಂಸ್ಕೃತದ ಬಳಿಕ ಕನ್ನಡ ಮೂರನೇ ಅತ್ಯಂತ ಪುರಾತನ ಭಾರತೀಯ ಭಾಷೆ.
2. ಕನ್ನಡ ಭಾಷೆ 2000 ವರ್ಷಗಳಿಗೂ ಹಳೆಯದು! ಲಭ್ಯವಿರುವ ದಾಖಲೆಗಳು ಮತ್ತು ಸಿಕ್ಕಿರುವ ಕಲ್ಲಿನ ಮೇಲಿನ ಕೆತ್ತನೆಗಳ ಆಧಾರದ ಮೇಲೆ ಕನ್ನಡದ ಇತಿಹಾಸ ಎರಡು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಯಾರಿಗೊತ್ತು ಇನ್ನೊಂದಷ್ಟು ಸಂಶೋಧನೆಗಳು ಆದನಂತರ ಅದಕ್ಕಿಂತಲೂ ಹಳೆಯ ಕನ್ನಡದ ಬರಹ ಸಿಕ್ಕಿದರೂ ಸಿಗಬಹುದೇನೋ.
3. ವಿದೇಶಿಯನಿಂದ ಶಬ್ಧಕೋಶ ಬರೆಯಲ್ಪಟ್ಟ ಮೊದಲ ಭಾಷೆ ಕನ್ನಡ! ಹೌದು ವಿದೇಶಿಗರಾದ ಜರ್ಮನ್ ಪ್ರಜೆ ಫರ್ಡಿನಾಂಡ್ ಕಿಟೆಲ್ ಕನ್ನಡದ ಬರದಿದ್ದರೂ, ಕನ್ನಡವನ್ನು ಕಲಿತು, ಕನ್ನಡದ ಸೊಗಡಿಗೆ ಮಾರು ಹೋಗಿ, ಕನ್ನಡದ ಹುಚ್ಚು ಆರಾಧಕರಾಗಿ, ನಂತರ ಕನ್ನಡಭಾಷೆಯ ಶಬ್ಧಕೋಶವನ್ನೇ ಬರೆದುಬಿಟ್ಟರು. ಇದು ಕಿಟಲ್ ಡಿಕ್ಷನರಿ ಅಂತಾನೆ ಖ್ಯಾತವಾಯಿತು.


ISBN : 979-889233259-0

4. ಕನ್ನಡದ ಮುಂದೆ ಬಚ್ಚಾ ಇಂಗ್ಲಿಷ್ ಭಾಷೆ! ಹೌದು.. ರಾಷ್ಟ್ರಕೂಟರ ಸಾಮ್ರಾಟ ಅಮೋಘವರ್ಷ ನೃಪತುಂಗ.. ಕವಿರಾಜಮಾರ್ಗವನ್ನು ಬರೆಯುವಾಗ ಇಂಗ್ಲಿಷ್ ಭಾಷೆ ಆಗಿನ್ನೂ ಅಂಬೆಗಾಲಿಡುತ್ತಿತ್ತು. ಮತ್ತು ಈಗಿನ ಹಿಂದಿ ಆಗಿನ್ನೂ ಹುಟ್ಟಿರಲೇ ಇಲ್ಲ.
5. ಕನ್ನಡ 99.99 ಶೇಕಡಾ ವೈಜ್ಞಾನಿಕ ಭಾಷೆ! ಭಾಷೆಗಳಲ್ಲಿ ಎರಡು ವಿಧ ಫೊನೆಟಿಕ್ ಮತ್ತು ನಾನ್ ಫೊನೆಟಿಕ್. ಕನ್ನಡ ಶೇಕಡಾ 99.99 ಫೋನೇಟಿಕ್ ಲ್ಯಾಂಗ್ವೇಜ್. ಅಂದ್ರೆ ಉದಾಹರಣೆಗೆ ಕನ್ನಡದಲ್ಲಿ ಬರೆಯುವ ಅಕ್ಷರಗಳನ್ನು ಓದುವಾಗ ಹಾಗೆ ಓದುತ್ತೇವೆ. ಆದರೆ ಇಂಗ್ಲೀಷ್ ಭಾಷೆಯಲ್ಲಿ ಹಾಗೆ ಇಲ್ಲ. ಇಂಗ್ಲೀಷ್ ಭಾಷೆಯಲ್ಲಿ CUT ಅಂದ್ರೆ ಕಟ್.. ಆದರೆ PUT ಪಟ್ ಆಗಲ್ಲ. ಪುಟ್ ಎಂದು ಆಗುತ್ತದೆ. ಅಂಖಿ ಕ್ಯಾಟ್ ಎನ್ನುತ್ತೇವೆ. ಅಂದ್ರೆ ಸಿ ಅನ್ನುವ ಶಬ್ದವನ್ನ ಕ ಆಗಿಯು ಇಂಗ್ಲೀಷ್ ಬಳಸಲಾಗುತ್ತದೆ. ಆದರೆ ಕನ್ನಡದಲ್ಲಿ ಇರುವ ಶಬ್ದಗಳನ್ನು ಹೇಗಿದೆಯೋ ಹಾಗೆ ಬಳಸುತ್ತೇವೆ. ಹೀಗಾಗಿ ಕನ್ನಡ ವೈಜ್ಞಾನಿಕವಾಗಿ ಅತ್ಯಂತ ಸ್ಪಷ್ಟತೆ ಇರೋ ಭಾಷೆ.
6. ಸಾಹಿತ್ಯಕ್ಕಾಗಿ ಅತಿ ಹೆಚ್ಚು ಪ್ರಶಸ್ತಿ ಪಡೆದ ಸಾಹಿತಿ ಕನ್ನಡಿಗ! ಸಾಹಿತ್ಯದಲ್ಲಿನ ಸಾಧನೆಗಾಗಿ ಅತಿ ಹೆಚ್ಚು ರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಪಡೆದ ಲೇಖಕ ಒಬ್ಬ ಕನ್ನಡಿಗ. ಅದು ಬೇರೆ ಯಾರು ಅಲ್ಲ ನಮ್ಮ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಅಂದ್ರೆ ನಮ್ಮ ಹೆಮ್ಮೆಯ ಕುವೆಂಪು.
7. ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆ ಕನ್ನಡ! ಹೌದು ಕನ್ನಡಕ್ಕೆ 8 ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಹಿಂದಿಗೆ ಬಂದಿರೋದು 6, ತೆಲುಗಿಗೆ ಕೇವಲ ಎರಡು, ಇನ್ನು ಮಲಯಾಳಂಗೆ 3 ಮತ್ತು ತಮಿಳಿಗೆ ಕೇವಲ ಎರಡು. ಇದು ಕೂಡ ಕನ್ನಡಿಗರಿಗೆ ಹೆಮ್ಮೆಯ ವಿಚಾರ.
8. ವಿಕಿಪೀಡಿಯ ಲೋಗೋದಲ್ಲಿ ಮಿಂಚಿಂಗ್! ಇಡೀ ವಿಶ್ವದ ಮಾಹಿತಿಯ ಕಣಜವಾದ ವಿಕಿಪೀಡಿಯಾ ಲೋಗೋದಲ್ಲಿ ಕನ್ನಡ ಭಾಷೆ ಇದೆ. ಈ ವಿಕಿಪೀಡಿಯ ಲೋಗೋದ ಮೇಲೆ ವಿಶ್ವದ ಕೆಲವೇ ಕೆಲವು ಭಾಷೆಗಳ ಅಕ್ಷರಗಳು ಇದ್ದು, ಅದರಲ್ಲಿ ಕನ್ನಡದ 'ವಿ' ಅಕ್ಷರವಿದೆ.
9. ಪುರಾತನ ಗ್ರೀಕ್ ನಾಟಕದಲ್ಲಿ ಕನ್ನಡದ ಸಾಲು! ಹೌದು ಸುಮಾರು 1800 ವರ್ಷಗಳ ಹಿಂದೆ ರಚಿಸಲಾದ ಗ್ರೀಕ್ ನಾಟಕವೊಂದರಲ್ಲಿ ಕನ್ನಡದ ಸಾಲುಗಳಿದ್ದವು ಅಂತ ಗುರುತಿಸಲಾಗಿದೆ. ಅದರಲ್ಲಿ ಬರುವ ಒಂದು ಕ್ಯಾರೆಕ್ಟರ್ ಯಾವುದೋ ಗೊತ್ತಿಲ್ಲದ ಭಾಷೆಯನ್ನು ಮಾತನಾಡುತ್ತಿತ್ತು. ಆ ಭಾಷೆ ಯಾವುದು ಅಂತ ಮೊದಲಿಗೆ ಯಾರಿಗೂ ಗೊತ್ತಾಗಲಿಲ್ಲ. ನಂತರ ಅದು ಹಳೆಗನ್ನಡದ ಸಾಲುಗಳು ಅಂತ ಪತ್ತೆಹಚ್ಚಲಾಯಿತು.

**ಅಂಕಿಗಳ ಕುರಿತು ಕನ್ನಡ ಭಾಷೆಗಿರುವ ತಾಕತ್ತು**

ನಿಮಗೆ ಆಶ್ಚರ್ಯವಾಗಬಹುದು ಭಾರತದ ಇನ್ನಾವುದೇ ಭಾಷೆಯಲ್ಲಿಯೂ ಅಂಕಿಗಳಿಲ್ಲ, ಎಲ್ಲರೂ ದೇವನಾಗರಿಯಲ್ಲಿ ಅಂಕೆಗಳನ್ನು ಬಳಸಿದರೆ, ಕನ್ನಡಕ್ಕೆ ತನ್ನದೇ ಆದ ಅಂಕೆಗಳಿವೆ! ಕನ್ನಡದ ಅಂಕಿಗಳು, 1 2 3 4 5 6 7 8 9 0, ಇವೂಗಳಲ್ಲಿಯೂ 1 ಗ ಒತ್ತು, 2 ತ ಒತ್ತು, 3 ನ ಒತ್ತು, 4 ಳ ಒತ್ತು, 6 ಮ ಒತ್ತು, ಹೀಗೇ ಕನ್ನಡದ ಒತ್ತಕ್ಷರಗಳು, ಸೊನ್ನೆ ಬಹು ವಿಶೇಷವಾದ ಸಂಖ್ಯೆ. ಇದನ್ನು ಎಲ್ಲರೂ ವೃತ್ತಾಕಾರದ ಚಿಹ್ನೆಯಿಂದಲೇ ಗುರುತ್ತಿಸುತ್ತಾರೆ. ಸೊನ್ನೆ ಗಣಿತ ಲೋಕಕ್ಕೆ ಭಾರತ ದೇಶದ ಕೊಡುಗೆ ಎಂದು ನಮ್ಮ ದೇಶದ ಕಮ್ಯುನಿಸ್ಟರನ್ನೂ ಸೇರಿ, ಪ್ರಪಂಚದಾದ್ಯಂತ ಎಲ್ಲರೂ ಒಪ್ಪಿದ್ದಾರೆ. ಸೊನ್ನೆ ಅನ್ನುವುದು ಶೂನ್ಯದ ಸಂಕೇತ. ಅದು ಪರಿಪೂರ್ಣತೆ, ನಿರಂತರತೆ ಹಾಗೂ ಅನಂತತೆಯ ಸಂಕೇತವೂ ಹೌದು.

ಇನ್ನು ಕನ್ನಡದಲ್ಲಿ ಒತ್ತಕ್ಷರಗಳನ್ನು ಬಳಸುವ ಕ್ರಮವನ್ನು ನೀವು ಗಮನಿಸಬೇಕು, ಇದು ವಿಶಿಷ್ಟವೋ ನೀವೇ ಹೇಳಬೇಕು. ಸಕ್ಕರೆ, ಅನ್ನು, ಬಟ್ಟೆ ಇವು ಸಜಾತಿಯಾ ಒತ್ತಕ್ಷರಗಳಿಗೆ ಉದಾಹರಣೆಗಳು. ಕ, ಗೆ, ಕ ಒತ್ತು, ಮ, ಗೆ, ಮ ಒತ್ತು.....ಹೀಗೆ, ಆದರೆ ಸಂಯುಕ್ತಾಕ್ಷರ ಅಥವಾ ವಿಜಾತಿಯ ಒತ್ತಕ್ಷರಗಳನ್ನು ನೋಡಿ: ಹೆಚ್ಚಿನ ಸಂಯುಕ್ತಾಕ್ಷರಗಳು ಸಂಸ್ಕೃತ ಪದಗಳೇ ಆಗಿವೆ. ರೇಷ್ಮೆ ಎಂಬುದು ರೇ+ಷ್+ಮೆ, ಇಲ್ಲಿ ಉಳಿದ ಭಾಷೆಯವರು ಇದ್ದುದ್ದನ್ನು ಇದ್ದ ಹಾಗೇ ಬರೆದರೂ ಕನ್ನಡದಲ್ಲಿ ನಾವು ರೇ+ಷೆ ಬರೆದು ಅದಕ್ಕೆ ಮ ಒತ್ತು ಕೊಡುತ್ತೇವೆ! ಕ್ಷೀಣ ಎಂಬಲ್ಲಿ ಕ್+ಷೀ+ಮ ಎನ್ನುವುದನ್ನು ಕೀ ಗೆ ಷ ಒತ್ತು+ಣ ಬರೆಯುತ್ತೇವೆ. ಏಕೆ ಹೀಗೆ

ಒಟ್ಟಿನಲ್ಲಿ ಕನ್ನಡ ಕಲಿಯುವುದು ಕಷ್ಟವೇನಲ್ಲ. ಅನ್ಯ ಭಾಷಿಗರು ಕನ್ನಡದ ಕುರಿತು ನೀಡುವ ಪ್ರತಿಕ್ರಿಯೆಗಳನ್ನು ನೋಡಿದಾಗ ಕೆಲವರು "ಅಯ್ಯೋ ಪಾಪ ನಮ್ಮ ಭಾಷೆ ತುಂಬಾ ಕಷ್ಟ ಅವರು ಹೇಗೆ ಕಲಿಯುತ್ತಾರೆ?" ಎಂದು ಅವರ ಪರವಾಗಿ ತಮ್ಮ ಹೇಳಿಕೆಯನ್ನು ನೀಡುತ್ತಾ ಬಂದಿರುವ ಸಂಗತಿಗಳನ್ನು ಕೇಳಿರುತ್ತೀರಿ. ಆದರೆ, ಇದೆಲ್ಲಾ ಬರೀ ಸಮಯ ವ್ಯಯ ಮಾಡುವ ಮತ್ತು ಪರಭಾಷಿಕರ ಭಾಷೆಯನ್ನು ಓಲೈಕೆ ಮಾತ್ರ. ಇನ್ನೊಂದು ಮಾತು ವಲಸಿಗರು ಇಲ್ಲಿ ತೆರಿಗೆ ಕಟ್ಟುತ್ತಿರುವುದು ನಮಗೆ ಮಾಡುತ್ತಿರುವ ಉಪಕಾರವಲ್ಲ ಅವರ ಕರ್ತವ್ಯ ಅವರು ಇಲ್ಲಿಯವರ ಕೆಲಸಗಳನ್ನು ಕಸಿದುಕೊಂಡು ಇಲ್ಲಿಯೇ ತಳವೂರಿದ್ದಾರೆ ಎನ್ನುವುದನ್ನು ನಾವು ಮರೆಯಬಾರದು. ಇಂತಹ ಭವ್ಯ ಇತಿಹಾಸವುಳ್ಳ ಕನ್ನಡ ಬಹುವಿಶಾಲವಾಗಿ, ಅಷ್ಟೇ ಆಳವಾಗಿ ಬೆಳದಿದೆ ಎಂದರೆ ಅತಿಶಯೋಕ್ತಿಯಾಗಲಾರದು, ಪ್ರಪಂಚದಲ್ಲಿ ಇನ್ನಾವುದೇ ಭಾಷೆಗೂ ಇಲ್ಲದ ಧ್ವನಿಭಂಡಾರ ಮತ್ತು ಅಕ್ಷರಭಂಡಾರವೇ ಕನ್ನಡದ ಆಸ್ತಿ ಎಂಬುದು ಹೆಚ್ಚಿನವರಿಗೆ ಗೊತ್ತಿಲ್ಲ. ಹೀಗಾಗಿ ಇಂದಿನಿಂದಲೇ


ISBN : 979-889233259-0

ನಾವುಗಳು ಎಲ್ಲರಿಗೂ ವಾಟ್ಸಪ್, ಫೇಸ್ಬುಕ್ ಇನ್‌ಸ್ಟಾಗ್ರಾಮ್ ಎಲ್ಲಾ ಕಡೆ ಶೇರ್ ಮಾಡಿ. ಕನ್ನಡದ ಭಾಷೆಯ ಬಗೆಗೆ ಪ್ರೋತ್ಸಾಹಿಸೋಣ ಹೆಮ್ಮೆಯಿಂದ ಬೆಳೆಸೋಣ ಎಂದು ಗರ್ವದಿಂದ ಭಾಷೆಯನ್ನು ಮುನ್ನುಡಿಸೋಣ.

**ಆಧಾರ ಗ್ರಂಥಗಳು**


1. ಭಾಷಾವಿಜ್ಞಾನದ ಮೂಲತತ್ವಗಳು – ಡಾ.ಎಂ.ಚಿದಾನಂದಮೂರ್ತಿ
2. ಸಂಕಲ್ಪ – ಎಂ. ರಮೇಶ ಶಂಕರಘಟ್ಟ
3. ಕನ್ನಡ ಪದಗಳ ಒಳರಚನೆ – ಡಿ. ಎನ್. ಶಂಕರ ಭಟ್
4. ಕನ್ನಡ ಸಾಹಿತ್ಯ ಚರಿತ್ರೆ – ರಂ. ಶ್ರೀ. ಮುಗಳಿ
5. ಸಾಹಿತ್ಯ ಸಂಕಥನ 1 – ಪ್ರಸಾರಾಂಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6. ಕನ್ನಡ ಛಂದಸ್ಸು – ಡಿ. ಎಸ್. ಕರ್ಕಿ
7. ನಾಡಿಗೆ ಕರೆ – ಸಂಪಾದನೆ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು.
8. ಕನ್ನಡ ಭಾಷಾಶಾಸ್ತ್ರ – ಡಾ. ರಾ. ಯ. ಧಾರವಾಡಕರ
9. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಜಿ ಎಸ್ ಶಿವರುದ್ರಪ್ಪ
10. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಎಚ್ ತಿಪ್ಪೇರುದ್ರಸ್ವಾಮಿ


***


**ISBN : 979-889233259-0**

## ಕನ್ನಡವೇ ಸತ್ಯ ಕನ್ನಡವೇ ನಿತ್ಯ

**ಡಾ. ರವಿ ಹೆಚ್.,** ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುರಿತೋ
ದದೆಯಂ ಕಾವ್ಯಪ್ರಯೋಗ ಪರಿಣಿತಮತಿಗಳ್॥ – **ಶ್ರೀವಿಜಯ**

ಕನ್ನಡಿಗರ ಮಾತಿನ ವೈಖರಿ, ಕನ್ನಡಿಗರ ಕಾವ್ಯ ಪರಿಣತಿಯನ್ನು ಕವಿ ಇಲ್ಲಿ ಹೆಮ್ಮೆಯಿಂದ ಹೇಳುತ್ತಾನೆ. ಪದಗಳ ಅರ್ಥಗಳನ್ನು ಸರಿಯಾಗಿ ತಿಳಿದುಕೊಂಡು, ಸಂದರ್ಭಕ್ಕೆ ಸರಿಯಾಗಿ ಮಾತನಾಡುವ ಕಲೆ ಕನ್ನಡಿಗರಿಗೆ ತಿಳಿದಿತ್ತು. ಬೇರೆಯವರು ಹೇಳಿದ್ದನ್ನು ಸರಿಯಾಗಿ ಅರಿತುಕೊಳ್ಳುವ ಸಾಮರ್ಥ್ಯವೂ ಅವರಿಗಿತ್ತು. ಸಾಕ್ಷರರಲ್ಲದವರೂ ಕಾವ್ಯ ಪ್ರಯೋಗ ಮಾಡುವುದರಲ್ಲಿ ಅಂದರೆ ಕಾವ್ಯ ರಚಿಸುವುದರಲ್ಲಿ ಪರಿಣಿತರಾಗಿದ್ದ ಕನ್ನಡಿಗರು ತುಂಬಾ ಚತುರರಾಗಿದ್ದರು ಎಂದು ಕವಿ ಹೇಳುತ್ತಾನೆ.

ಭಾಷೆಯು ಸಂವಹನದ ವಾಹಕ. ಮಾನವ ಇತರೆ ಪ್ರಾಣಿಗಳಿಗಿಂತ ಭಿನ್ನ ಅವನು ಮತ್ತೊಬ್ಬ ಮಾನವನೊಡನೆ ಸಂವಹಿಸಲು ವಿಶಿಷ್ಟವಾದ ಭಾಷೆಗಳನ್ನು ರೂಪಿಸಿಕೊಂಡಿದ್ದಾನೆ. ಭಾಷೆ ಎಂಬುವುದು ಕೇವಲ ಸಂವಹನಕ್ಕೆ ಅವಶ್ಯವಾದ ಮಾಧ್ಯಮವೆ ಆದರೂ, ವ್ಯಕ್ತಿಯ ಭಾವನೆಗಳು ಹೊರ ಹೊಮ್ಮಲು ಇರುವ ವಾಹಕವೂ ಸಹ ಆಗಿದೆ. ಇಂದು ವಿವಿಧ ರೂಪಗಳಲ್ಲಿ ಜನರು ಆಡುನುಡಿಯಾಗಿ ಬಳಸುತ್ತಿದ್ದಾರೆ. ನಮ್ಮ 'ಕನ್ನಡ' ಭಾಷೆಯು ಭಾರತದ 22 ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ.

ಕನ್ನಡದ ಬಗ್ಗೆ ಹೇಳುವುದಾದರೆ, ಕನ್ನಡವು ದಕ್ಷಿಣ ಭಾರತದ ಭಾಷೆಗಳ ಮೂಲವೆಂದು ಗುರುತಿಸಲ್ಪಟ್ಟಿರುವ ಮೂಲ ದ್ರಾವಿಡದಿಂದ ಯಾವಾಗ ಆಡುಭಾಷೆಯಾಗಿ ಪರಿವರ್ತಿತವಾಯಿತೆಂದು ಖಚಿತವಾಗಿ ಹೇಳಲು ಅಸಾಧ್ಯ. ತಮಿಳು ಭಾಷೆಯು ದ್ರಾವಿಡ ಭಾಷೆಯಿಂದ ಬೇರ್ಪಟ್ಟ ಸಮಯದಲ್ಲಿಯೇ ಕನ್ನಡವು ಕೂಡ ಆಡುಭಾಷೆಯಾಗಿ ಬೇರ್ಪಟ್ಟಿತೆಂದು ಹೇಳಲಾಗುತ್ತದೆ. ಈ ಭಾಷೆಯ ಲಿಪಿಯು ಸುಮಾರು 1500–1600 ವರ್ಷಗಳಿಗಿಂತಲೂ ಹಳೆಯದು. ಐದನೆಯ ಶತಮಾನದ ಹಲ್ಮಿಡಿ ಶಾಸನದ ಸಮಯಕ್ಕಾಗಲೇ ಕನ್ನಡವು ಸಾಕಷ್ಟು ಅಭಿವೃದ್ಧಿ ಹೊಂದಿತು. ಲಿಪಿಯ ಉಗಮದ ಇತಿಹಾಸವನ್ನು ಗಮನಿಸಿದರೆ, ತಮಿಳಿಗಿಂತಲೂ ಕನ್ನಡದ ಲಿಪಿಯೇ ಮೊದಮೊದಲಿಗೆ ಹೆಚ್ಚು ಪ್ರವರ್ಧಮಾನಕ್ಕೆ ಬಂದಂತೆ ಕಾಣಿಸುತ್ತದೆ.


ISBN : 979-889233259-0

ಕುಮುದೇಂದು ಮುನಿ ರಚಿಸಿದ 'ಸಿರಿಭೂವಲಯ' ಗ್ರಂಥದಲ್ಲಿ ಕನ್ನಡ ಭಾಷೆಗೆ ವಿಶ್ವದ ಎಲ್ಲಾ ಭಾಷೆಗಳನ್ನು ಅಡಗಿಸಿಕೊಳ್ಳುವ ಶಕ್ತಿ ಇದೆ ಎಂದು ಸಾಭೀತುಪಡಿಸಿದ್ದಾರೆ.

**ಕನ್ನಡ ಒಂದು ಅದ್ಭುತ ಭಾಷೆ ಎಂಬುದಕ್ಕೆ ಅನೇಕ ಕಾರಣಗಳಿವೆ :**

1. ವಿಶ್ವದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ವಿಶ್ವದ ನಾನಾ ಪ್ರದೇಶಗಳಲ್ಲಿ ಅಚ್ಚಗನ್ನಡದ ಶಾಸನಗಳು ದೊರೆತಿದ್ದು ಕನ್ನಡದ ಪ್ರಾಚೀನತೆಯನ್ನು ಸಾಭೀತುಪಡಿಸಿವೆ.
2. 2500 ವರ್ಷಗಳ ಇತಹಾಸವನ್ನು ಹೊಂದಿರುವ ಕನ್ನಡ ಭಾಷೆ ಎರಡೂವರೆ ಸಹಸ್ರಮಾನದಷ್ಟೂ ಹಳೆಯದು. ಅಲೆಗ್ಸಾಂಡರನ ಕಾಲದಲ್ಲಿ ಅಂದರೆ ಕ್ರಿ.ಪೂ 4ನೇ ಶತಮಾನದಲ್ಲಿ ಸಿಕ್ಕ ತಾಳೆಗರಿಯೊಂದರಲ್ಲಿ "ಊರಲ್ಲಿ" ಎಂಬ ಪದ ಸಿಕ್ಕಿತ್ತಾದರೂ ಸುಟ್ಟ ತಾಳೆಗರಿ ಪೂರ್ಣಪ್ರಮಾಣದಲ್ಲಿ ಸಿಗದೆ ಸೂಕ್ತ ಪುರಾವೆ ಇಲ್ಲದಾಗಿದೆ.
3. ಕಿಟೆಲ್ ಶಬ್ದಕೋಶದ ಹೆಗ್ಗಳಿಕೆಯೂ ಕೂಡ ಒಂದು. ದೇಶದ ಯಾವುದೇ ಭಾಷೆಯ ಬಗ್ಗೆ ನಡೆಯದ ಅಧ್ಯಯನ ನಮ್ಮ ಕನ್ನಡದ ಕುರಿತು ವಿದೇಶಿಯರೊಬ್ಬರು ಮಾಡಿ ಶಬ್ದಕೋಶ ನೀಡಿದ ಕೊಡುಗೆ ಮತ್ತಾವ ಭಾಷೆಯಲ್ಲಿಯೂ ಇಲ್ಲ.
4. ಭಾರತದಲ್ಲಿ ಹಿಂದಿ ಭಾಷೆ ಹುಟ್ಟಿದ ಕಾಲದಲ್ಲಿ ಕನ್ನಡ ಭಾಷೆ ಮುಗಿಲೆತ್ತರಕ್ಕೆ ಬೆಳೆದಿತ್ತು. ಹಾಗೂ ಶ್ರೀ ವಿಜಯ "ಕವಿರಾಜಮಾರ್ಗ" ರಚಿಸಿದ ಸಂದರ್ಭದಲ್ಲಿ ಇಂಗ್ಲಿಷ್ ಇನ್ನು ತೊಟ್ಟಿಲ ಕೂಸಾಗಿತ್ತು.
5. ಪರಿಪೂರ್ಣ ಭಾಷೆ ಕನ್ನಡ ಭಾಷೆ, ವರ್ಣಮಾಲೆ ತಾರ್ಕಿಕ ಮತ್ತು ವೈಜ್ಞಾನಿಕವಾಗಿಯೂ 99.99 ಪ್ರತಿಶತ ಪರಿಪೂರ್ಣ ಎಂಬುದು ಸಾಭೀತಾಗಿದೆ.
6. ವಿಶ್ವದ ಲಿಪಿಗಳ ರಾಣಿ ಅಂದರೆ ಕನ್ನಡ ಲಿಪಿ ಎಂದು ಶ್ರೀ ವಿನೋಭಾ ಭಾವೆಯವರು ಹೇಳಿದ್ದರು ಎಂಬುದು ಕನ್ನಡದ ಶ್ರೇಷ್ಟತೆಗೆ ಸಾಕ್ಷಿಯಾಗಿದೆ.

ನವೆಂಬರ್ 1, ಕನ್ನಡಿಗರಿಗೆಲ್ಲ ಸಂಭ್ರಮ ಮತ್ತು ಸಡಗರದ ದಿನ. ಹಾಗೆಯೇ ಕನ್ನಡ ನಾಡು–ನುಡಿಯ ಅಭಿವೃದ್ಧಿಯ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸುವ ದಿನವೂ ಆಗಿದೆ. ಸರಿಸುಮಾರು ಎರಡೂವರೆ ಸಾವಿರ ವರ್ಷಗಳ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದ ಈ ಕನ್ನಡ ನಾಡನ್ನು ಶಾತವಾಹನ, ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ ಹೊಯ್ಸಳ ಮುಂತಾದ ರಾಜವಂಶದವರು ಆಳುವುದಲ್ಲದೆ ರಾಷ್ಟ್ರದ ಇತಿಹಾಸದಲ್ಲಿ ತಮ್ಮ ಕೀರ್ತಿಗಾಥೆಯನ್ನು ಸುವರ್ಣಾಕ್ಷರಗಳಿಂದ ದಾಖಲಿಸಿದ್ದಾರೆ. ಬೇಲೂರು–ಹಳೆಬೀಡು, ಬದಾಮಿ–ಪಟ್ಟದಕಲ್ಲು, ಐಹೊಳೆ ಹಂಪಿ ಮುಂತಾದ ಸ್ಥಳಗಳು ನಮ್ಮ ಭವ್ಯ ಇತಿಹಾಸ ಮತ್ತು ಪರಂಪರೆಗೆ

ಸಾಕ್ಷಿಯಾಗಿವೆ. ಪ್ರಾಚೀನ ಕಾಲದಿಂದಲೂ ನಮ್ಮ ನಾಡು ಧರ್ಮ, ಸಾಹಿತ್ಯ, ಸಂಗೀತ, ನೃತ್ಯ, ಕಲೆ, ಕ್ರೀಡೆ, ಶಿಲ್ಪ ಮತ್ತು ವಾಸ್ತು ಶಿಲ್ಪಗಳಿಗೆ ಹೆಸರಾದುದು. ಶೈವ, ವೈಷ್ಣವ, ಜೈನ, ಬೌದ್ಧ, ಲಿಂಗಾಯತ, ಇಸ್ಲಾಂ, ಕ್ರೈಸ್ತ ಮುಂತಾದ ಧರ್ಮಗಳಿಗೆ ಆಶ್ರಯ ನೀಡಿ 'ಸರ್ವಧರ್ಮಧೇನು ನಿವಹಕ್ಕಾಡುಂಬೊಲಂ' ಎಂಬ ಕವಿವಾಣಿಗೆ ಅನ್ವರ್ಥಕವಾದುದು ಈ ಕನ್ನಡನಾಡು.

ಒಂದೊಮ್ಮೆ ಕಾವೇರಿಯಿಂದ ಗೋದಾವರಿಯ ತೀರದವರೆಗೆ ಹಬ್ಬಿದ ನಮ್ಮ ವಿಶಾಲವಾದ ಕನ್ನಡ ನಾಡು ವಸಾಹತುಶಾಹಿಯ ಆಡಳಿತದ ಪರಿಣಾಮವಾಗಿ ಹರಿದು ಹಂಚಿಹೋಗಿತ್ತು. ಕನ್ನಡತ್ವ ಮತ್ತು ಕರ್ನಾಟಕತ್ವದ ಪ್ರಜ್ಞೆ ಮಾಯವಾಗಿದ್ದ ಆ ಸಂದರ್ಭದಲ್ಲಿ ಡೆಪ್ಯೂಟಿ ಚೆನ್ನಬಸಪ್ಪ, ಆಲೂರ ವೆಂಕಟರಾಯರಂಥ ಅನೇಕ ಪುಣ್ಯಜೀವಿಗಳು ಆ ಪ್ರಜ್ಞೆಯನ್ನು ಮರುಸ್ಥಾಪಿಸಿ ಕನ್ನಡದ ಸಾಂಸ್ಕೃತಿಕ ನೆಲೆಯನ್ನು ಗಟ್ಟಿಗೊಳಿಸಿದರು. ಭಾರತದ ಸ್ವಾತಂತ್ರ್ಯ, ಕರ್ನಾಟಕದ ಏಕೀಕರಣ ಇವೆರಡೂ ಏಕಕಾಲದಲ್ಲಿ ನಡೆದು ಸ್ವತಂತ್ರ ಭಾರತದಲ್ಲಿ 1956ರ ನವೆಂಬರ 1 ರಂದು ನಮ್ಮ ಚೆಲುವ ಕನ್ನಡ ನಾಡು ಉದಿಸಿ ಕನ್ನಡಿಗರೆಲ್ಲ ಸಂಭ್ರಮಪಡುವಂತಾದದ್ದು ಇಂದು ಇತಿಹಾಸ.

ಕರ್ನಾಟಕದಷ್ಟೇ ಪ್ರಾಚೀನತೆ ಹಾಗು ಶ್ರೀಮಂತ ಪರಂಪರೆಯನ್ನು ಹೊಂದಿರುವಂತಹದ್ದು ನಮ್ಮ ತಾಯ್ನುಡಿ ಕನ್ನಡ. ದ್ರಾವಿಡ ಭಾಷೆಗಳಲ್ಲಿ ಮುಕುಟಪ್ರಾಯವಾಗಿರುವ ಕನ್ನಡವು ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳ ಜೊತೆಗೆ ಶಾಸ್ತ್ರೀಯ ಸ್ಥಾನಮಾನ ಪಡೆದ ಮೃದು–ಮಧುರ ಭಾಷೆಯಾಗಿದೆ. 'ಎನಿತು ಇನಿದು ಈ ಕನ್ನಡ ನುಡಿಯು, ಮನವನು ತಣಿಸುವ ಮೋಹನ ಸುಧೆಯು' ಎಂದು ಕವಿ ಬೆಟಗೇರಿ ಕೃಷ್ಣಶರ್ಮರು ಮನದುಂಬಿ ಹಾಡಿದ್ದಾರೆ. ಪಂಪ–ರನ್ನರು, ಬಸವಾದಿ ಶರಣರು, ದಾಸಶ್ರೇಷ್ಠರು, ಹರಿಹರ, ರಾಘವಾಂಕ, ಕುಮಾರವ್ಯಾಸಾದಿ ಪ್ರಾಚೀನ ಕವಿಗಳು, ರಸ ಋಷಿಗಳು ಹಾಗು ಕುವೆಂಪು, ಬೇಂದ್ರೆ, ಕಣವಿ, ಶಿವರುದ್ರಪ್ಪನವರಂತಹ ಆಧುನಿಕ ಕವಿ ಸಾಹಿತಿಗಳು ಕನ್ನಡವನ್ನು ಸಮೃದ್ಧಗೊಳಿಸಿದ್ದಾರೆ.

ಈ ಅಖಂಡ ನುಡಿಕರ್ನಾಟಕದಲ್ಲಿ 'ನೃಪತುಂಗನೆ ಚಕ್ರವರ್ತಿ। ಪಂಪನಿಲ್ಲಿ ಮುಖ್ಯಮಂತ್ರಿ। ರನ್ನ ಜನ್ನ ನಾಗವರ್ಮ। ರಾಘವಾಂಕ ಹರಿಹರ। ಬಸವೇಶ್ವರ ನಾರಣಪ್ಪ। ಸರ್ವಜ್ಞ ಷಡಕ್ಷರ ಸರಸ್ವತಿಯೆ ರಚಿಸಿದೊಂದು। ನಿತ್ಯ ಸಚಿವ ಮಂಡಲ। ತನಗೆ ರುಚಿರ ಕುಂಡಲ॥' ಎಂದು ಕುವೆಂಪು ಬಣ್ಣಿಸಿದ್ದಾರೆ. ಆದರೆ ಅದೇ ಕವಿಗಳು ಕನ್ನಡಕೆ ಹೋರಾಡು ಕನ್ನಡ ಕಂದ' ಎಂದು ಕರೆ ಕೊಟ್ಟಿದ್ದರೂ ಇಂದು 'ಕನ್ನಡವ ಕಾಪಾಡು ಕನ್ನಡಿಗರಿಂದ' ಎಂದು ಹೇಳುವಂತಹ ಸಂದರ್ಭ ಒದಗಿರುವುದು ದುರ್ದೈವವೆನ್ನದೆ ವಿಧಿಯಲ್ಲ.


ISBN : 979-889233259-0

ಕನ್ನಡ ನಾಡು ಚೆನ್ನ, ಕನ್ನಡ ನುಡಿ ಚೆನ್ನ. ಚೆಲ್ವಾದುದು ಕನ್ನಡಮೆನಿಪ್ಪಾ ನಮ್ಮ ನಾಡು, ಚೆಲ್ವಾದುದು ಕನ್ನಡಮೆನಿಪ್ಪಾ ನಮ್ಮ ನುಡಿ. ಚೆಲುವ ಕನ್ನಡವನ್ನು ಆ ತಾಯಿಯ ಮಕ್ಕಳಾದ ನಾವೇ ಉಳಿಸಬೇಕು, ಬೆಳೆಸಬೇಕು. ನಮ್ಮ ತಾಯಿ ನಮ್ಮ ನಿರ್ಲಕ್ಷ್ಯದಿಂದ ಕೊರಗಿ ಸಾಯುವಂತಾಗಬಾರದು. ಕನ್ನಡ ತಾಯಿ ಕರ್ನಾಟಕದಲ್ಲಿ ಕಳೆದು ಹೋಗದಂತೆ, ಕರ್ನಾಟಕ ಕರಗಿ ಹೋಗದಂತೆ ನೆಲ–ಜಲ, ಭಾಷೆ–ಸಂಸ್ಕೃತಿಗಳ ಉಳುವಿಗಾಗಿ ನಾವು ಶ್ರಮಿಸಬೇಕು. ಕನ್ನಡ ತಾಯಿ ಬದುಕಿದರೆ ಕರ್ನಾಟಕದಲ್ಲಿಯೇ ಬದುಕಬೇಕು, ಬೆಳೆದರೆ ಕರ್ನಾಟಕದಲ್ಲಿಯೇ ಬೆಳೆಯಬೇಕು. ಅಂತಹ ಕನ್ನಡ ಪ್ರಜ್ಞೆ ಹಾಗು ಕರ್ನಾಟಕ ಪ್ರಜ್ಞೆಯನ್ನು ನಾವೆಲ್ಲ ಮೈಗೂಡಿಸಿಕೊಂಡು, ಬೆಳೆಯೋಣ, ಕನ್ನಡ ನಾಡು–ನುಡಿಯನ್ನು ಬೆಳೆಸೋಣ.

ಇಂಗ್ಲೀಷ್ ಜಗತ್ತಿನ ಭಾಷೆಯಾಗಿದ್ದೇ ಇಂಗ್ಲೀಷ್ಗರ ಆಕ್ರಮಣಕಾರಿ ನೀತಿಯಿಂದ. ಮೊದಲು ಅಮೇರಿಕದಲ್ಲಿ ಇಂಗ್ಲೀಷ್ ಭಾಷೆಯೇ ಇರಲಿಲ್ಲ. ಕಾಲಾಂತರದಲ್ಲಿ ಬ್ರಿಟೀಷರ ಅಧಿಕಾರಶಾಹಿ ಹಾಗೂ ವಸಾಹತುಶಾಹಿ ನೀತಿಯಿಂದಾಗಿ ಇಂದು ಅಮೇರಿಕಾದಲ್ಲಿ ಇಂಗ್ಲೀಷ್ ಜನರ ನಾಡಿಯಾಗಿದೆ. ಒಂದು ವೇಳೆ ಕನ್ನಡವನ್ನು ಬಳಸದೇ ಹೋದಲ್ಲಿ ಇಂಗ್ಲೀಷ್ ಭಾಷೆಯೆ ಭವಿಷ್ಯದಲ್ಲಿ ನಮ್ಮ ಭಾಷೆಯಾಗುವ ಮೂಲಕ ನಮ್ಮ ನಾಡು ಬ್ರಿಟನ್ ಅಥವಾ ಅಮೇರಿಕ ದೇಶಗಳ ರಾಜ್ಯಗಳ ಪಟ್ಟಿಯಲ್ಲಿ ಸೇರುವುದರಲ್ಲಿ ಯಾವ ಸಂಶಯ ಬೇಡ. ಈ ನಾಡು ಇಂಗ್ಲೀಷ್ ಮಯವಾದರೆ, ಕನ್ನಡದಲ್ಲಿರುವ ಜನಪದ ಸಾಹಿತ್ಯಗಳನ್ನು ವಸ್ತು ಸಂಗ್ರಹಾಲಯಗಳಲ್ಲಿ ನೋಡುವಂತಾಗುತ್ತದೆ. ಈಗಾಗಲೆ, ಈ ರೀತಿಯ ಸಾಹಿತ್ಯಗಳು ಕಣ್ಮರೆಯಾಗುತ್ತಿದ್ದು ಪಾಪ್ ಗೀತೆಗಳು ಜನಪದದ ಸ್ಥಾನವನ್ನು ಆಕ್ರಮಿಸುತ್ತಿದೆ.

ನಾಡು ಉಳಿಯಬೇಕೆಂದರೆ ಭಾಷೆ ಉಳಿಯಬೇಕು. ಭಾಷೆ ಉಳಿಯಬೇಕೆಂದರೆ, ನಾವು ಪಡೆದುಕೊಂಡ ಜ್ಞಾನವನ್ನು ಕನ್ನಡಕ್ಕಾಗಿ ಮೀಸಲಿಡಬೇಕು. ನಮ್ಮ ಭಾಷೆ ಮೊದಲು ಕನ್ನಡವಾಗಿ ನಂತರ ಇತರೆ ಭಾಷೆಯಾಗಿರಬೇಕು. ಕನ್ನಡದಲ್ಲಿ ಲಭ್ಯವಿರದ್ದನ್ನು ಲಭ್ಯವಾಗುವ ಹಾಗೆ ನಮ್ಮ ಕೌಶಲ್ಯ ಹಾಗೂ ಸಾಮರ್ಥ್ಯ ರೂಪುಗೊಳ್ಳಬೇಕು. ಇದಕ್ಕಾಗಿ ಕನ್ನಡಿಗರಾದವರು ಅನಿವಾರ್ಯವಾಗಿ ಬೇರೆ ಭಾಷೆಯಲ್ಲಿ ಶಿಕ್ಷಣವನ್ನು ಪಡೆದರೂ ಸಾಮರ್ಥ್ಯವನ್ನು ಗಳಿಸಿದ ಮೇಲೆ ಕನ್ನಡದ ಬಳಕೆಯ ವಿಸ್ತರಣೆಗೆ ಅವಶ್ಯವಿರುವ ಕೆಲಸವನ್ನು ಮಾಡಬೇಕು.

ಉದಾ: ಒಬ್ಬ ವ್ಯಕ್ತಿ ಕಂಪ್ಯೂಟರ್ ಶಿಕ್ಷಣವನ್ನು ಇಂಗ್ಲೀಷ್ ಭಾಷೆಯಲ್ಲಿ ಪಡೆದು ಉದ್ಯೋಗಕ್ಕೆ ಸೇರುವುದು ಅನಿವಾರ್ಯವೇ ಆದರು, ಕನ್ನಡದಲ್ಲಿ ತಾನು ಇಂಗ್ಲೀಷ್ ಭಾಷೆಯಲ್ಲಿ ಪಡೆದ ಕಂಪ್ಯೂಟರ್ ಶಿಕ್ಷಣವನ್ನು ಕನ್ನಡದಲ್ಲೂ ಲಭ್ಯವಾಗುವ ಹಾಗೆ ಆತ ಮಾಡಬೇಕು.


ISBN : 979-889233259-0

ಇಂದು ವಿಜ್ಞಾನ, ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ಹೆಚ್ಚು ಇಂಗ್ಲೀಷ್ ಭಾಷೆಯೆ ಬಳಕೆಯಾಗುತ್ತಿದೆ. ನಂತರದ ಸ್ಥಾನಗಳಲ್ಲಿ, ಫ್ರೆಂಚ್, ಜರ್ಮನ್, ರಷ್ಯನ್ ಮತ್ತು ಇತರೆ ಭಾಷೆಗಳು ಬಳಸಲ್ಪಡುತ್ತಿದೆ. ನಮ್ಮ ಕನ್ನಡ ಉಳಿಯಬೇಕೆಂದರೆ ನಮ್ಮ ಪ್ರಯತ್ನವು ಸಹ ಕನ್ನಡ ಮುಖಿಯಾಗಿರಬೇಕು. ಸೈನಿಕರು ನಾಡ ರಕ್ಷಣೆಗೆ ದುಡಿದರೆ, ಆಯಾ ಭಾಷಿಕರು ಆಯಾ ಭಾಷೆಯನ್ನು ರಕ್ಷಿಸುವ ಸಲುವಾಗಿ ದುಡಿಯಬೇಕು. 'ಭಾರತಕರ್ನಾಟಕ' ದ ನಿವಾಸಿಯಾಗಿ ಮನಸ್ಸು ಇಂಗ್ಲೀಷ್ ಆಗಿರಬಾರದು. ಬದಲಾಗಿ ನಾಡ ನಿವಾಸಿಯಾಗಿ 'ಕನ್ನಡ'ದ ಮನಸ್ಸಾಗಿರಬೇಕು. ಬೇರೆ ಭಾಷೆಗಳನ್ನು ಗೌರವಿಸಬೇಕು ಹಾಗು ನಮ್ಮನ್ನು ನಾವು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ತಾಂತ್ರಿಕವಾಗಿ, ಸಾಹಿತ್ಯಾತ್ಮಕವಾಗಿ, ಆಡಳಿತಾತ್ಮಕವಾಗಿ, ಹೀಗೆ ಮುಂತಾದ ಕ್ಷೇತ್ರಗಳಲ್ಲಿ ಕನ್ನಡ ನಾಡನುಡಿಯ ಉಳಿವಿಗಾಗಿ ತೊಡಗಿಸಿಕೊಳ್ಳಬೇಕು. ಅದಕ್ಕಾಗಿ ನಾವು "ಕನ್ನಡವೇ ಸತ್ಯ ಕನ್ನಡವೇ ನಿತ್ಯ"ವನ್ನಾಗಿಸಬೇಕು.

**ಆಕರ ಗ್ರಂಥಗಳು:**


1. ಕನ್ನಡ ಭಾಷೆಯ ಚರಿತ್ರೆ – ಡಾ. ಬಿ ವಿ ವಸಂತ್ ಕುಮಾರ್
2. ಕನ್ನಡ ಸಾಹಿತ್ಯ ಸಮೀಕ್ಷೆ – ಜಿ ಎಸ್ ಶಿವರುದ್ರಪ್ಪ
3. ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್ ಎಸ್ ಶೇಷಗಿರಿರಾವ್
4. ಕನ್ನಡ ಸಾಹಿತ್ಯ ಚರಿತ್ರೆ – ತ. ಸು ಶಾಮರಾಯ
5. ಕನ್ನಡ ಸಾಹಿತ್ಯ ಚರಿತ್ರೆ – ರಂ ಶ್ರೀ ಮುಗಳಿ
6. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಜಿ ಎಸ್ ಶಿವರುದ್ರಪ್ಪ
7. ಕನ್ನಡ ಕೈಪಿಡಿ – ಕೆ ವಿ ಪುಟ್ಟಪ್ಪ
8. ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಚಿ ಸಿ ನಿಂಗಣ್ಣ
9. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಎಚ್ ತಿಪ್ಪೇರುದ್ರಸ್ವಾಮಿ
10. ಕರ್ನಾಟಕ ಪರಂಪರೆ ಸಂಪುಟ – 1 – ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ
11. ಕರ್ನಾಟಕ ಪರಂಪರೆ ಸಂಪುಟ – 2 – ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ
12. ಕನ್ನಡ ಕೈಪಿಡಿ, ಭಾಗ–1 – ಮೈಸೂರು ವಿಶ್ವವಿದ್ಯಾನಿಲಯ
13. ಕನ್ನಡದ ನೆಲೆ – ಡಾ. ಶಂ. ಬಾ. ಜೋಶಿ
14. ಕನ್ನಡ ಭಾಷಾಶಾಸ್ತ್ರ – ಡಾ. ರಾ.ಯ. ಧಾರವಾಡಕರ
15. ಸಿರಿಗನ್ನಡ ಭಾಷಾಂಶ ಸಂಚಿ – ಡಾ. ರವಿ ಹೆಚ್

## ನಮ್ಮ ಭಾಷೆಯ ವೈಶಿಷ್ಟ್ಯಗಳು

**ಡಾ. ಕಿರಣ್ ಕುಮಾರ್ ಕೆ.ಎಸ್.,** ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಭಾಷೆ ಎನ್ನುವುದು ಮನುಕುಲಕ್ಕೆ ಮಾತ್ರ ಸೀಮಿತವಾದದ್ದು. ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿ, ಪಕ್ಷಿಯು ಶಬ್ದೋತ್ಪಾದನೆ ಮಾಡುತ್ತದೆ. ಇದನ್ನು ಸಂವಹನ ಎಂದೂ ಕರೆಯಬಹುದು. ಉದಾಹರಣೆಗೆ ನಾಯಿ ಬೊಗಳುತ್ತದೆ, ಹುಲಿ ಘರ್ಜಿಸುತ್ತದೆ, ಆನೆ ಘೀಳಿಡುತ್ತದೆ. ಇಲ್ಲಿ ಶಬ್ದೋತ್ಪಾದನೆ ಆಗುತ್ತದೆ. ಆದರೆ ಇದನ್ನು ಭಾಷೆ ಎನ್ನಲಾಗುವುದಿಲ್ಲ. ಏಕೆಂದರೆ, ಒಂದು ವರ್ಗಕ್ಕೆ ಸೇರಿದ ಎಲ್ಲಾ ಪ್ರಾಣಿಗಳ ಶಬ್ದೋತ್ಪಾದನೆ ಒಂದೇ ತರವಾಗಿರುತ್ತದೆ. ಉದಾಹರಣೆಗೆ, ನಾಯಿ ಬೊಗಳುವಾಗ ಅದು ತನ್ನ ಯಜಮಾನನನ್ನು ಕಂಡರೂ ಅಥವಾ ಕಳ್ಳರನ್ನು ಕಂಡರೂ ಬೊಗಳಿಕೆಯಲ್ಲಿ ವ್ಯತ್ಯಾಸವಿರುವುದಿಲ್ಲ. ಆದರೆ ಮನುಷ್ಯ ಉತ್ಪಾದಿಸುವ ಪ್ರತಿಯೊಂದು ಶಬ್ದಕ್ಕೂ ಅರ್ಥವಿದೆ. ಹೀಗೆ ಉತ್ಪಾದಿಸಲ್ಪಡುವ ಶಬ್ದವೇ ಒಂದು ಭಾಷೆ ಎನ್ನಬಹುದು. ಭಾಷೆಯು ಪದಗಳಿಂದ ಕೂಡಿರುತ್ತದೆ. ಪದಗಳು ಶಬ್ದಗಳಿಂದ ಕೂಡಿರುತ್ತದೆ. ಶಬ್ದಗಳನ್ನು ಸಂಕೇತಗಳಿಂದ, ಸೂಚನೆಗಳಿಂದ ಗುರುತಿಸಬಹುದು. ಇಂತಹ ಕ್ರಿಯೆಯನ್ನು ಭಾಷಾ ವಿಜ್ಞಾನ ಸಂಶೋಧನೆಯಲ್ಲಿ ಕೈಗೊಂಡ ಪ್ರಕ್ರಿಯೆ ಎನ್ನಬಹುದು.

ಒಂದು ಭಾಷೆ ಉತ್ತಮವೆಂದು ಗುರುತಿಸಿಕೊಳ್ಳಬೇಕಾದರೆ, ಆ ಭಾಷೆಯಲ್ಲಿ ಉತ್ತಮಾಂಶಗಳು ಇರಬೇಕು. ಭಾಷಾ ಶಾಸ್ತ್ರಜ್ಞ ಹಾಕೆಟ್ ಭಾಷೆಯ ಉತ್ತಮಾಂಶಗಳನ್ನು ಈ ಕೆಳಗಿನಂತೆ ಭಾಷೆಯ ವೈಶಿಷ್ಟ್ಯಗಳೆಂದು ಗುರುತಿಸಿದ್ದಾನೆ.

**ದ್ವಿವಿಧತೆ**:

ಭಾಷೆಯಲ್ಲಿ ಬಳಕೆಯಾಗುವ ಶಬ್ದಗಳು ಎರಡು ಅಂಶಗಳನ್ನು ಹೊಂದಿರುತ್ತವೆ. ಒಂದು ಧ್ವನಿ ಮತ್ತೊಂದು ಅರ್ಥ. ಇವು ಶಬ್ದಕ್ಕೆ ಒಂದು ಬಾಹ್ಯ ರೂಪವನ್ನು ಮತ್ತೊಂದು ಅಂತಃರೂಪವನ್ನು ನೀಡುತ್ತವೆ. ಇವುಗಳನ್ನೇ ಅಭಿವ್ಯಕ್ತಿ (expression) ಮತ್ತು ಆಶಯ (content) ಎನ್ನುತ್ತಾರೆ. ಭಾಷೆ ಹೀಗೆ ಎರಡು ಅಂಶಗಳನ್ನು ಪಡೆದುಕೊಂಡಿರುವುದಕ್ಕೆ ದ್ವಿವಿಧತೆ ಎನ್ನುತ್ತಾರೆ. ಇದು ಭಾಷೆಯ ಪ್ರಥಮ ಲಕ್ಷಣವಾಗಿದೆ. ಉದಾಹರಣೆಗೆ; **'ಕೋಲು'** ಎಂಬ ಶಬ್ದದಲ್ಲಿ ಕ್, ಓ, ಲ್, ಉ ಎಂಬ ನಾಲ್ಕು ಧ್ವನಿಗಳಿದ್ದು ಇವು ಶಬ್ದದ ಧ್ವನಿರೂಪವನ್ನು ನಿರ್ಮಿಸಿದೆ. ಈ ಧ್ವನಿರೂಪ ಒಂದು ವಸ್ತುವನ್ನು ಸೂಚಿಸುತ್ತದೆ. ಈ ಅರ್ಥವೇ ಅದರ


ISBN : 979-889233259-0

ಅಂತಃರೂಪವನ್ನು ನಿರ್ಮಿಸಿದೆ. ಹೀಗೆ ಶಬ್ದ ಒಂದು ಮುಖ ಧ್ವನಿರೂಪವಾದರೆ ಅದರ ಮತ್ತೊಂದು ಮುಖ ಅರ್ಥ. ಪದ ಎಂಬ ನಾಣ್ಯ ಚಲಾವಣೆಯಲ್ಲಿ ಇರಬೇಕಾದರೆ ಈ ಎರಡು ಮುಖಗಳನ್ನು ಪಡೆದಿರಬೇಕಾಗುತ್ತದೆ. ಹೀಗೆಯೇ ಪ್ರತಿಯೊಂದು ಭಾಷೆಯ ಪ್ರತಿಯೊಂದು ಶಬ್ದವು ಧ್ವನಿ ಮತ್ತು ಅರ್ಥ ಎಂಬೆರಡು ಅಂಶಗಳನ್ನು ಹೊಂದಿರುವುದು ದ್ವಿವಿಧತೆ ಎನಿಸುತ್ತದೆ.

**ಉತ್ಪಾದಕತೆ :**

ಯಾವುದೇ ಸಮಾಜದಲ್ಲಿ ಹೊಸ ಹೊಸ ಆವಿಷ್ಕಾರಗಳು ಆದಂತೆಲ್ಲ ಅವುಗಳನ್ನು ಗುರುತಿಸಲು ಹೊಸ ಹೊಸ ಶಬ್ದಗಳು ಆ ಜನರ ಭಾಷೆಯಲ್ಲಿ ಸೃಷ್ಟಿಯಾಗುತ್ತಿರುತ್ತವೆ. ಒಂದು ವೇಳೆ ಪರಭಾಷೆಯಲ್ಲಿ ಈಗಾಗಲೇ ಈ ಕುರಿತ ಶಬ್ದಗಳಿದ್ದರೆ ಅಂಥ ಭಾಷೆಯಿಂದ ನೇರವಾಗಿಯೋ ಇಲ್ಲವೇ ಭಾಷಾಂತರಿಸಿಯೋ ಅವುಗಳನ್ನು ಸ್ವೀಕರಿಸುತ್ತಾರೆ. ಮತ್ತೆ ಕೆಲವೊಮ್ಮೆ ಹಳೆಯ ರೂಪಗಳು ಹೊಸ ಅರ್ಥ ಪಡೆದು ಬಳಕೆಯಾಗುವುದೂ ಇದೆ. ಹೀಗೆ ವಸ್ತು, ವಿಷಯ, ವಿಚಾರಗಳನ್ನು ನಿರ್ದೇಶಿಸಲು ಹೊಸ ಹೊಸ ಭಾಷಾ ಪ್ರಯೋಗಗಳೂ ಆಗುವುದಿದೆ. ಹೊಸ ಶಬ್ದಗಳು ನಿರ್ಮಾಣವಾಗುವುದರ ಜೊತೆಗೆ ಕೆಲವೊಮ್ಮೆ ಹೊಸ ಧ್ವನಿಗಳೂ ಭಾಷೆಗೆ ಸೇರ್ಪಡೆಯಾಗುತ್ತವೆ. ಇದು ಜೀವಂತ ಭಾಷೆಯ ಗುಣವಾಗಿದೆ. ಭಾಷೆ ಹೀಗೆ ಶಬ್ದ ನಿರ್ಮಿಸಲು ಪಡೆದಿರುವ ಶಕ್ತಿಯನ್ನೆ ಅದರ ಉತ್ಪಾದಕ ಗುಣ ಎಂದು ಗುರುತಿಸುತ್ತಾರೆ. ಕನ್ನಡದಲ್ಲಿ ಇತ್ತೀಚೆಗೆ ಕಂಪ್ಯೂಟರ್‌ಗೆ ಗಣಕಯಂತ್ರ, ಇಂಟರ್‌ನೆಟ್‌ಗೆ ಅಂತರ್‌ಜಾಲ, ಟೆಲಿವಿಷನ್‌ಗೆ ದೂರದರ್ಶನ, ಮೊಬೈಲ್‌ಗೆ ಜಂಗಮವಾಣಿ ಮುಂತಾದ ಶಬ್ದಗಳು ಸೃಷ್ಟಿಯಾಗಿವೆ. ಹೀಗೆ ಅಗತ್ಯ ಬಿದಾಗಲೆಲ್ಲ ಹೊಸ ಶಬ್ದಗಳನ್ನು ಸೃಷ್ಟಿಸುವ ಭಾಷೆಯ ಶಕ್ತಿಯೇ ಉತ್ಪಾದಕತೆ.

**ಯಾದೃಚ್ಛಿಕತೆ :**

ಭಾಷೆಯಲ್ಲಿ ಶಬ್ದಗಳಿಗೆ ಅರ್ಥ ರೂಢಿಗತವಾಗಿ ಬಂದಿರುತ್ತದೆ. ಸಮಾಜದಲ್ಲಿ ಜನತೆ ಒಪ್ಪಿಕೊಂಡ ಅರ್ಥಗಳಿಂದಲೇ ಶಬ್ದಗಳ ಬಳಕೆಯಾಗುತ್ತದೆ. ವಸ್ತುಗಳನ್ನು, ಶಾಬ್ದಿಕವಾಗಿ ಗುರುತಿಸುವುದು ಮತ್ತು ಅದನ್ನು ಬಳಸಿಕೊಂಡು ಬರುವುದು ಆಯಾ ಜನಸಮುದಾಯಕ್ಕೆ ಸಂಬಂಧಿಸಿದಾಗಿರುತ್ತದೆ. ಉದಾಹರಣೆಗೆ, ಕನ್ನಡದಲ್ಲಿ ಬಳಕೆಯಾಗುವ 'ಕಲ್ಲು' ಎಂಬ ಪದಕ್ಕೆ ಇಂಗ್ಲಿಷಿನಲ್ಲಿ 'ಸ್ಟೋನ್' ಹಿಂದಿಯಲ್ಲಿ 'ಪಥ್ಥರ್', ಮರಾಠಿಯಲ್ಲಿ 'ದಗಡ್', ಸಂಸ್ಕೃತದಲ್ಲಿ 'ಶಿಲಾ' ಮುಂತಾದ ಶಬ್ದಗಳಿವೆ. ಹೀಗೆ ಒಂದೇ ವಸ್ತುವಿಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಪದಗಳು ಬಳಕೆಯಾಗಲು ಕಾರಣ ಭಾಷೆ ಯಾದೃಚ್ಛಿಕವಾಗಿರುವುದೇ ಆಗುದೆ. ಆದ್ದರಿಂದಲೇ ವಿಶ್ವದಾದ್ಯಂತ ಸಾರ್ವತ್ರಿಕವಾಗಿ ವಸ್ತು ಒಂದೇ ಇದ್ದರೂ ಅದರ ರಚನೆ ಒಂದೇ ತೆರನಾಗಿದ್ದರೂ ಅದನ್ನು


ISBN : 979-889233259-0

ಗುರುತಿಸುವ ಪದಗಳು ಭಾಷೆಯಿಂದ ಭಾಷೆಗೆ ಬೇರೆಯಾಗಿರುತ್ತವೆ. ಇದಕ್ಕೆ ಕಾರಣ ಪ್ರತಿಯೊಂದು ಭಾಷಿಕ ಗುಂಪು ತನತನಗೆ ಅನುಕೂಲಕರವಾಗುವಂತೆ ವಸ್ತುವನ್ನೋ ವಿಷಯವನ್ನೋ ಗುರುತಿಸುದಾಗಿದೆ. ಇದನ್ನೇ ಯಾದೃಚ್ಛಿಕತೆ ಎಂದು ಕರೆಯುವುದು.

**ವಿಶಿಷ್ಟ ಪ್ರಾವೀಣ್ಯತೆ :**

ಪ್ರತಿಯೊಂದು ಭಾಷೆ ನಿರ್ಧಿಷ್ಟವಾದ, ನಿಖರವಾದ ರಾಚನಿಕ ವಿನ್ಯಾಸವನ್ನು ಹೊಂದಿದೆ. ಅದರ ಪ್ರತಿಯೊಂದು ಘಟಕವೂ ರಚನೆಯ ನಿಯಮಕ್ಕನುಸಾರವಾಗಿ ಬಂದು ವೃತ್ತಂತವನ್ನೊದಗಿಸುತ್ತದೆ. ಇಂಥ ಭಾಷೆಯನ್ನು ಸ್ವಭಾಷೆಯಾಗಿ ಹೊಂದಿದವರು ಅದನ್ನು ಲೀಲಾಜಾಲವಾಗಿ ಬಳಸುತ್ತಿರುತ್ತಾನೆ. ಅಂದರೆ ಮಾತನಾಡುವವನಾಗಿ, ಕೇಳುಗನಾಗಿ ಆತ ತನ್ನ ಭಾಷೆಯನ್ನು ಬಳಸುವ ವಿಶಿಷ್ಟ ಜ್ಞಾನ ಪಡೆದಿರುತ್ತಾನೆ. ಪ್ರಾವೀಣ್ಯ ಗಳಿಸಿರುತ್ತಾನೆ. ಓದಲು, ಬರೆಯಲು ಬಾರದ ನಿರಕ್ಷರಿಗೂ ಭಾಷಾ ಬಳಕೆಯ ಇಂಥ ಜ್ಞಾನ ಇದ್ದೇ ಇರುತ್ತದೆ. ಇದನ್ನೇ ವಿಶಿಷ್ಟ ಪ್ರಾವೀಣ್ಯ ಎಂದು ಗುರುತಿಸುತ್ತಾರೆ.

**ವಿನಿಮಯ ಗುಣ :**

ಸಮಾಜದಲ್ಲಿ ವ್ಯಕ್ತಿಗಳ ನಡುವೆ ಅನಿಸಿಕೆಗಳ ಅಥವಾ ವಿಚಾರಗಳ ಪರಸ್ಪರ ವಿನಿಮಯ ಭಾಷೆಯಿಂದ ಮಾತ್ರ ಸಾಧ್ಯ. ಭಾಷಿಗನೋರ್ವ ಮಾತನಾಡುವವನಾಗಿ, ಕೇಳುಗನಾಗಿ ತನ್ನ ಭಾಷೆಯನ್ನು ಬಳಸುತ್ತಿರುತ್ತಾನೆ. ಆ ಭಾಷೆಯನ್ನು ಬಲ್ಲ ಮತ್ತೋರ್ವ ಅದನ್ನು ತಿಳಿಯಬಲ್ಲ ಹಾಗೂ ಅದಕ್ಕೆ ಪ್ರತಿಕ್ರಿಯಿಸಬಲ್ಲ. ಹೀಗೆ ಪರಸ್ಪರ ವಿನಿಮಯ ಶಕ್ತಿ ಭಾಷೆಗಿದೆ. ಮಾನವ ಭಾಷೆಯಲ್ಲಿ ಕಂಡುಬರುವ ಈ ಗುಣ ಕೆಲವು ಮಾನವೇತರ ಸಂವಹನೆಗಳಲ್ಲೂ ಇದೆ ಎಂದು ಸಿ.ಎಫ್.ಹಾಕೆಟ್ ಗುರುತಿಸಿದ್ದಾನೆ. ಗಿಬ್ಬಗನ (ಒಂದು ಜಾತಿಯ ಕೋತಿ) ಕೂಗಿನಲ್ಲಿ, ದುಂಬಿಗಳ ಕುಣಿತದಲ್ಲಿ ಈ ಲಕ್ಷಣ ಇದೆ ಎಂದು ಆತ ಹೇಳುತ್ತಾನೆ.

**ಸ್ಥಾನಪಲ್ಲಟತೆ :**

ಭಾಷೆ ವ್ಯವಹಾರದ ನೇರ ಸಂದರ್ಭದಲ್ಲಿ ಮಾತ್ರ ಬಳಕೆಯಾಗುವುದಿಲ್ಲ. ಆ ಸಂದರ್ಭ ಅಥವಾ ವಸ್ತು ಕಣ್ಣೆದುರು ಇಲ್ಲದಿದ್ದಾಗ್ಯೂ ನಾವದನ್ನು ಭಾಷೆಯ ಮೂಲಕ ಅಭಿವ್ಯಕ್ತಿಸಬಲ್ಲೆವು. ಮತ್ತು ಅಭಿವ್ಯಕ್ತಿಸಿದ್ದನ್ನು ಅರ್ಥ ಮಡಿಕೊಳ್ಳಬಲ್ಲೆವು. ಹೀಗೆ ಒಂದು ಕಾಲಘಟ್ಟದಿಂದ ಅಥವಾ ಪ್ರದೇಶದಿಂದ ಅಥವಾ ಸಂದರ್ಭದಿಂದ ಅನುಭವಗಳನ್ನು ಪ್ರತ್ಯೇಕಿಸಿ ಹೇಳುವುದು ಹಾಗೂ ಗ್ರಹಿಸುವುದು ಸ್ಥಾನಪಲ್ಲಟತೆ ಎನಿಸುತ್ತದೆ. ಎಷ್ಟೋ ಸಲ ವಸ್ತುವನ್ನು, ಸ್ಥಳವನ್ನು ನೋಡಿರದೇ ಇದ್ದರೂ ಕಲ್ಪನೆ ಮಾಡಿಕೊಳ್ಳುತ್ತೇವೆ. ಅರ್ಥಮಾಡಿಕೊಳ್ಳುತ್ತೇವೆ. ಉದಾ: ಪುಷ್ಪಕವಿಮಾನ, ಸಂಜೀವಿನಿ ಕಡ್ಡಿ, ಸ್ವರ್ಗ, ನರಕ, ಭಕ್ತಿ, ವಾತ್ಸಲ್ಯ ಇವು ಅಮೂರ್ತವಾದವು. ಆದರೂ


ISBN : 979-889233259-0

ಇವುಗಳ ಕಲ್ಪನೆ ಮಾಡಿಕೊಳ್ಳಲು ನಾವು ಶಕ್ತರಾಗಿದ್ದೇವೆ. ಭಾಷೆಯಿಂದ ಇದು ಸಾಧ್ಯವಾಗಿದೆ. ಹೀಗೆ ಎದುರಿಗಿರದ ಹಾಗೂ ಅಮೂರ್ತವಾಗಿರುವುದನ್ನು ಮೂರ್ತವೆಂಬಂತೆ ಮನಸ್ಸಿಗೆ ತಿಳುವಳಿಕೆ ಮಾಡಿಕೊಡುವ ಭಾಷೆಯ ಲಕ್ಷಣ ಸ್ಥಾನಪಲ್ಲಟತೆ ಎನಿಸಿಕೊಳ್ಳುತ್ತದೆ.

**ಸಂಸ್ಕೃತಿ ವಾಹಕತೆ :**

ನಮ್ಮ ಜ್ಞಾನ, ತಿಳಿವಳಿಕೆ ನಮ್ಮ ಮುಂದಿನ ಜನಾಂಗಕ್ಕೆ ಸಾಗುವುದು ಭಾಷೆಯ ಮೂಲಕ. ಭಾಷೆ ಕೇವಲ ಪದಗಳನ್ನಷ್ಟೇ ಒಳಗೊಂಡಿರದೇ ಆ ಪದಗಳ ಹಿಂದಿನ, ಆ ಭಾಷೆಯನ್ನಾಡುವ ಜನರ ಬದುಕು ಹಾಗೂ ಜೀವನಕ್ರಮದ ಅನೇಕ ಅಂಶಗಳನ್ನು ಹೊಂದಿರುತ್ತದೆ. ಹೀಗೆ ಒಂದು ಜನಾಂಗದ ಸಾಂಸ್ಕೃತಿಕ ಅಂಶಗಳನ್ನು ಭಾಷೆ ತನ್ನಲ್ಲಿ ಹಿಡಿದಿಟ್ಟುಕೊಂಡಿರುತ್ತದೆ. ಮೇಲ್ನೋಟಕ್ಕೆ ಪದಗಳು ಸ್ವತಂತ್ರ ಎನಿಸಿದರೂ ಅದರಲ್ಲಿ ಒಂದು ಜನಾಂಗದ ಸಂಸ್ಕೃತಿ ದಾಖಲಾಗಿರುತ್ತದೆ. ಈ ಸಾಂಸ್ಕøತಿಕ ಅಂಶಗಳು ಒಂದು ತಲೆಮಾರಿನಿಂದ ಅದರ ಮುಂದಿನ ತಲೆಮಾರಿಗೆ ಭಾಷೆಯ ಮೂಲಕ ಸಾಗುತ್ತವೆ. ಅದು ನುಡಿಯಾಗಿರಬಹುದು, ಅಥವಾ ಲಿಪಿಯಾಗಿರಬಹುದು. ಇತಿಹಾಸ, ಚರಿತ್ರೆಗಳು, ಪ್ರಾಚೀನ ಸಾಹಿತ್ಯಗಳು ಬದುಕಿನ ಸಾಂಸ್ಕøತಿಕ ಮೌಲ್ಯಗಳನ್ನು ಇಂದಿಗೂ ನಮಗೆ ನೀಡುತ್ತಿವೆ. ಭಾಷೆಯಿಂದಾಗಿ ಇದು ಸಾದ್ಯವಾಗಿದೆ. ಹೀಗೆ ಅನಾದಿಕಾಲದಿಂದಲೂ ಭಾಷೆ ಸಂಸ್ಕøತಿಯನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತ ಸಂಸ್ಕೃತಿ ವಾಹಕವಾಗಿ ಕಾರ್ಯಗೈಯುತ್ತಿದೆ. ಹೀಗೆ ಒಂದು ಸಂಸ್ಕೃತಿಯ ಅಂಗವಾಗಿರುವ ಭಾಷೆ; ಸಮಗ್ರ ಸಂಸ್ಕøತಿಯ ವಾಹಕವಾಗಿಯೂ ಕೆಲಸ ಮಾಡುತ್ತದೆ. ಭಾಷೆಯ ಈ ಗುಣವನ್ನು ಸಂಸ್ಕøತಿ ವಾಹಕತೆ ಎನ್ನುತ್ತಾರೆ.

ಒಟ್ಟಾರೆಯಾಗಿ ನಿರಂತರ ಬದಲಾವಣೆ ಯಾವುದೇ ಜೀವಂತ ಭಾಷೆಯ ವಿಶಿಷ್ಟ ಲಕ್ಷಣಗಳಲ್ಲಿ ಒಂದು. ಈ ಬದಲಾವಣೆಗೆ ಕಾರಣ ಎನಿಸುವ ಅಂಶ ಹಾಗೂ ಕಾರಣಗಳನ್ನೂ ವಿವೇಚಿಸುವುದು ಮೊದಲ ಕೆಲಸ. ಒಮ್ಮೆ ಒಂದಾಗಿದ್ದ ಭಾಷೆ ಕಾರಣಾಂತರಗಳಿಂದ ಒಡೆದು ಅನೇಕ ಭಾಷೆಗಳಾಗುವುದುಂಟು. ಈ ಭಾಷೆಗಳ ಪರಸ್ಪರ ತೌಲನಿಕ ಅಧ್ಯಯನದ ಮೂಲಕ ಮೂಲಭಾಷೆಯನ್ನು ಗುರುತಿಸುವುದು, ಕೆಲವೇಳೆ ರಚಿಸುವುದು ಇನ್ನೊಂದು ಕೆಲಸ. ಇಂಥ ಸಾಧನೆಗೆ ಅವಶ್ಯಕವಾದ ಎಲ್ಲ ಪ್ರಕ್ರಿಯೆ ಮತ್ತು ಸಿದ್ಧಾಂತಗಳನ್ನೂ ಚಾರಿತ್ರಿಕ ಭಾಷಾವಿಜ್ಞಾನ ಒಳಗೊಂಡಿದೆ.


ISBN : 979-889233259-0

**ಆಧಾರಗ್ರಂಥಗಳು :**


11. ಕನ್ನಡ ಸಾಹಿತ್ಯ ಚರಿತ್ರೆ – ತ. ಸು ಶಾಮರಾಯ
12. ಕನ್ನಡ ಸಾಹಿತ್ಯ ಚರಿತ್ರೆ – ರಂ ಶ್ರೀ ಮುಗಳಿ
13. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಜಿ ಎಸ್ ಶಿವರುದ್ರಪ್ಪ
14. ಕನ್ನಡ ಕೈಪಿಡಿ – ಕೆ ವಿ ಪುಟ್ಟಪ್ಪ
15. ಕನ್ನಡ ಕೈಪಿಡಿ, ಭಾಗ–1 – ಮೈಸೂರು ವಿಶ್ವವಿದ್ಯಾನಿಲಯ
16. ಕನ್ನಡ ಭಾಷಾಶಾಸ್ತ್ರ – ಡಾ. ರಾ.ಯ. ಧಾರವಾಡಕರ


******


ISBN : 979-889233259-0

## ಮಕ್ಕಳ ಶಿಕ್ಷಣದಲ್ಲಿ ಪಾಲಕರ ಮತ್ತು ಶಿಕ್ಷಕರ ಪಾತ್ರ ಹೇಗಿರಬೇಕು?

**ಡಾ. ದೇವರಾಜ ವೈ.**, ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ಮಾನವನ ವ್ಯಕ್ತಿತ್ವದ ರೂಪುರೇಖೆಯು ಅವನ ಬಾಲ್ಯದಿಂದ ಅವನ ಸುತ್ತಮುತ್ತಲಿರುವ ಶಿಕ್ಷಕರ, ಪಾಲಕರ ಹಾಗು ಸಮಾಜದ ಜನರ ಪ್ರಭಾವದಿಂದ ಆಗಿರುತ್ತದೆ. ಬರೀ ಶಿಕ್ಷಣವೊಂದೇ ಸಿಕ್ಕರೆ ಸಾಲದು. ಅದರ ಜೊತೆ ಮಾನವನ ವ್ಯಕ್ತಿತ್ವದ ರೂಪುರೇಖೆಯು ಅವನ ಬಾಲ್ಯದಿಂದ ಅವನ ಸುತ್ತಮುತ್ತಲಿರುವ ಶಿಕ್ಷಕರ, ಪಾಲಕರ ಹಾಗು ಸಮಾಜದ ಜನರ ಪ್ರಭಾವದಿಂದ ಆಗಿರುತ್ತದೆ. ಬರೀ ಶಿಕ್ಷಣವೊಂದೇ ಸಿಕ್ಕರೆ ಸಾಲದು. ಅದರ ಜೊತೆ ಇನ್ನು ಅನೇಕ ಅಂಶಗಳನ್ನು ಬಾಲ್ಯದಿಂದ ರೂಢಿಸಿಕೊಂಡರೆ ಆತ ಯಶಸ್ವಿ ಪುರುಷನೆನ್ನಿಸಿಕೊಳ್ಳುತ್ತಾನೆ. ಮಕ್ಕಳ ಬೆಳವಣಿಗೆಯಲ್ಲಿ ಪಾಲಕರು ಬಹು ದೊಡ್ಡ ಕೊಡುಗೆಯನ್ನು / ಪಾತ್ರವನ್ನು ನಿಭಾಯಿಸಬಲ್ಲರು. ಪಾಲಕರಿಗಾಗಿ ಈ 12 ಸಲಹೆಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ. ಇವುಗಳನ್ನು ಪಾಲಕರು ಹಾಗೂ ಶಿಕ್ಷಕರು ಅನುಸರಿಸಿದರೆ ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಯಲ್ಲಿ ಒಳ್ಳೆಯ ಅಭಿವೃದ್ಧಿ ಕಾಣಬಹುದು.

**ಮಕ್ಕಳ ಜೊತೆ ಓದಿರಿ:**

ಓದುವುದು ಒಂದು ಒಳ್ಳೆಯ ಹವ್ಯಾಸ. ಚಿಕ್ಕಂದಿನಿಂದಲೇ ಇದನ್ನು ರೂಡಿಸಿಕೊಂಡರೆ ಮಕ್ಕಳಿಗೆ ಒಳ್ಳೆಯ ಜ್ಞಾನದ ಜೊತೆ ಕಲ್ಪನಾಶಕ್ತಿಯು ಸಹ ಅಭಿವೃದ್ಧಿ ಆಗುತ್ತದೆ. ಕಥೆಯಲ್ಲಿರುವ ವ್ಯಕ್ತಿ–ಪಾತ್ರಗಳ ಬಗ್ಗೆ ಚರ್ಚಿಸುವುದು ಹಾಗೂ ಚಿತ್ರಗಳ ಮೂಲಕ ಕಥೆಯನ್ನು ವಿವರಿಸುವುದು ಮುಂತಾದವು ಮಕ್ಕಳ ಬೆಳವಣಿಗೆಗೆ ತುಂಬಾ ಮುಖ್ಯ. ಚಿಕ್ಕ ಮಕ್ಕಳಿಗೆ ಕಥೆ ಕೇಳುವುದು ಇಷ್ಟವಾದ್ದರಿಂದ ಪಾಲಕರು ದಿನವೂ ರಾತ್ರಿ ಕಥೆ ಹೇಳಬಹುದು, ಒಳ್ಳೊಳ್ಳೆಯ ಆಸಕ್ತಿದಾಯಕ ಪುಸ್ತಕಗಳನ್ನು ವಾಚನಾಲಯಗಳಿಂದ ಇಲ್ಲವೆ, ಪುಸ್ತಕದಂಗಡಿಗಳಿಂದ ತರಬಹುದು. ಪಾತ್ರದ ಬಗ್ಗೆ ವಿವರಿಸಿ ಮಕ್ಕಳ ಯೋಚನಾ–ಕಲ್ಪನಾ ಶಕ್ತಿಯನ್ನು ಹೆಚ್ಚಿಸಬಹುದು. ನೀತಿಪಾಠವನ್ನು ಹೇಳುತ್ತಾ ಪ್ರಶ್ನೆಗಳನ್ನು ಕೇಳುತ್ತಾ ಅವರನ್ನು ರಂಜಿಸಬಹುದು.

**ಗಣಿತದೊಂದಿಗೆ ಮೋಜು ಇರಲಿ:**

ಮಕ್ಕಳು ಗಣಿತದ ಮೂಲಗಳನ್ನು ಸರಿಯಾಗಿ ಅರ್ಥೈಸಿಕೊಂಡರೆ ಶೈಕ್ಷಣಿಕ ಜೀವನದಲ್ಲಿ ಯಶಸ್ಸು ಖಚಿತ. ಆಟದೊಂದಿಗೆ ಪಾಠ, ಕಲಿ–ನಲಿ ಎಂಬಂತೆ ಮಕ್ಕಳಿಗೆ ಆಟ ತಮಾಷೆಗಳ ನಡುವೆ ಪಾಠವನ್ನು ಅರ್ಥ ಮಾಡಿಸಬಹುದು. ಉದಾಹರಣೆಗೆ, ಬೇರೆ ಬೇರೆ ಆಕಾರದ ವಸ್ತುಗಳನ್ನು ಬೇರ್ಪಡಿಸಲು ಅಥವಾ ಚಿತ್ರಗಳನ್ನು ಬರೆಯಲು ಹೇಳುವುದು. ಎಲ್ಲ ಬಣ್ಣದ ಚೆಂಡುಗಳನ್ನು ಕೊಟ್ಟು ಅವುಗಳಲ್ಲಿ ಒಂದೇ ಬಣ್ಣದ ಚೆಂಡುಗಳನ್ನು

ಪ್ರತ್ಯೇಕಿಸಲು ಹೇಳುವುದು, ಬೇರೆ ಬೇರೆ ಗಾತ್ರದ ಲೋಟಗಳಲ್ಲಿ ಮರಳನ್ನು ತುಂಬಲು ಹೇಳುವುದು, ನಂತರ ಲೋಟಗಳನ್ನು ಗಾತ್ರದ ಪ್ರಕಾರ ಜೋಡಿಸಲು ಹೇಳುವುದು ಮುಂತಾದ ಚಟುವಟಿಕೆಗಳಿಂದ ಮಕ್ಕಳು ಆಟವಾಡುತ್ತ ಆಕಾರ, ಬಣ್ಣ, ಗಾತ್ರದ ಬಗ್ಗೆ ತಿಳಿಯುತ್ತಾರೆ.

**ಮಗುವಿನ ಅರಿವಿನ ಶಕ್ತಿಯನ್ನು ಹೆಚ್ಚಿಸಿ:**

ಚಿಕ್ಕಮಕ್ಕಳಿಗೆ ದಿನನಿತ್ಯ ಎದುರಾಗುವ ಸನ್ನಿವೇಶಗಳ ಬಗ್ಗೆ ಪ್ರಶ್ನಿಸಿ. ಉದಾಹರಣೆಗೆ, ಯಾವ ಆಟ ಇಷ್ಟ, ಯಾವ ಬಣ್ಣ ಇಷ್ಟ ಯಾರನ್ನಾದರೂ ಭೇಟಿಯಾದರೆ ಹೇಗೆ ಕುಶಲ–ಉಭಯೋಪರಿ ವಿಚಾರಿಸುವುದು ಮುಂತಾದವುಗಳು. ಇದರಿಂದ ಮಕ್ಕಳಲ್ಲಿ ಪ್ರಶ್ನೆಗಳಿಗೆ ಉತ್ತರಿಸುವುದು, ಮಾಹಿತಿ ಸಂಗ್ರಹಿಸುವುದು, ಕಾರ್ಯನಿರತ ಜ್ಞಾಪಕಶಕ್ತಿ, ಗಮನ ಕೊಡುವುದು ಮುಂತಾದ ಗುಣಗಳು ಹೆಚ್ಚುತ್ತವೆ.

**ಸೃಷ್ಟಿಸುವ ಯೋಚನೆಗೆ ಸಹಕಾರ ನೀಡಿ:**

ಮಕ್ಕಳಿಗೆ ಸ್ವತಂತ್ರವಾಗಿ ತಮ್ಮ ಮನಸ್ಸಿನಲ್ಲಿ ಬರುವ ಚಿತ್ರಗಳನ್ನು ಬರೆಯಲು ಬಣ್ಣ ತುಂಬಲು ಅವಕಾಶ ನೀಡಿದರೆ ಅವರ ಕ್ರಿಯೇಟಿವ್ ಥಿಂಕಿಂಗ್ ಬೆಳೆಯುತ್ತದೆ. ಅವರೇ ಸೃಷ್ಟಿಸಿರುವ ಕಥೆಗಳನ್ನು, ಹಾಡುಗಳನ್ನು ಉತ್ಸುಕತೆಯಿಂದ ಕೇಳಿರಿ.

**ವಿಜ್ಞಾನವನ್ನು ಅಭಿರುಚಿ ಹುಟ್ಟಿಸುವಂತೆ ತಿಳಿಸಿರಿ:**

ಆಧುನಿಕ ಜಗತ್ತಿಗೆ ವಿಜ್ಞಾನ ಬೇಕೇ ಬೇಕು. ವಿಜ್ಞಾನದ ಹಿಂದಿನ ಅನೇಕ ಸಂಶೋಧನೆಗಳು ಆವಿಷ್ಕಾರಗಳು ಇಂದಿನ ಪೀಳಿಗೆಗೆ ಸೌಲಭ್ಯಗಳನ್ನು, ಆರಾಮದಾಯಕ ಜೀವನವನ್ನು ಒದಗಿಸಿವೆ. ಬರಿ ಓದುವುದರಿಂದ ಆವಿಷ್ಕಾರಗಳ ಬಗ್ಗೆ ತಿಳಿಯಲು ಕಷ್ಟ. ಮನೆಯಲ್ಲಿ ಇಲ್ಲವೇ ಶಾಲೆಗಳಲ್ಲಿ ಚಿತ್ರಗಳ ಹಾಗೂ ಚಿಕ್ಕ–ಚಿಕ್ಕ ಪ್ರಯೋಗಗಳ ಮೂಲಕ ಮಕ್ಕಳಿಗೆ ವಿಜ್ಞಾನದ ಬಗ್ಗೆ ತಿಳಿಸಬೇಕು. ಇದರಿಂದ ಇಂದಿನ ಮಕ್ಕಳು ಸಹ ಇನ್ನೂ ಅನೇಕ ಹೊಸ ಹೊಸ ವಿಷಯಗಳನ್ನು ಕಂಡು ಹಿಡಿದು ಜೀವನದಲ್ಲಿ ಯಶಸ್ವಿಯಾಗಲು ಸಾಧ್ಯ. ಉದಾಹರಣೆಗೆ, ಪ್ರಾಣಿ ಸಂಗ್ರಹಾಲಯಕ್ಕೆ ಕರೆದುಕೊಂಡು ಹೋದರೆ ಪ್ರಾಣಿಗಳು ಯಾವ ರೀತಿ ಇರುತ್ತವೆ, ಅವುಗಳ ಆಹಾರ ಕ್ರಮಗಳೇನು. ಯಾವ ವಾತಾವರಣದಲ್ಲಿ ಜೀವಿಸುತ್ತವೆ ಮೊದಲಾದ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ನೀರಿನಲ್ಲಿ ಯಾವುದೇ ವಸ್ತುವನ್ನು ಹಾಕಿದಾಗ ಅದಕ್ಕೆ ಏನಾಗುತ್ತದೆ, ಅದರ ಕಾರಣವೇನಿರಬಹುದು, ಈರುಳ್ಳಿಯನ್ನು ಹೆಚ್ಚಿದಾಗ, ಹಾಲನ್ನು ಕಾಯಿಸಿದಾಗ ಏನಾಗುತ್ತದೆ ಮೊದಲಾದ ಪ್ರಶ್ನೆಗಳಿಗೆ ಉತ್ತರಗಳನ್ನು ನಿದರ್ಶನದೊಂದಿಗೆ ನೀಡಬೇಕಾಗಿರುತ್ತದೆ.


ISBN : 979-889233259-0

**ಮಕ್ಕಳ ದೈಹಿಕ–ಮಾನಸಿಕ ಬೆಳವಣಿಗೆಗಳಿಗೆ ಚಟುವಟಿಕೆಗಳನ್ನು ಮಾಡಿಸಿರಿ:**

ಮಕ್ಕಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆ ಸರಿಯಾಗಿ ಆಗುತ್ತಿದೆಯೇ ಎಂದು ಪರಿಶೀಲಿಸಲು ಹಾಗೂ ಅವುಗಳಿಗೆ ಸೂಕ್ತ ಪ್ರೋತ್ಸಾಹ ನೀಡಲು ಕೆಲವು ಆಸಕ್ತಿದಾಯಕ ಚಟುವಟಿಕೆಗಳನ್ನು ಅಥವಾ ಆಟಗಳನ್ನು ಆಡಿಸಬಹುದು. ಮಕ್ಕಳಿಗೆ ಆಟವಾಡಿದ ನಂತರ ಆಟದ ಸಾಮಾನುಗಳನ್ನೆಲ್ಲ ಬೇರ್ಪಡಿಸಿ, ಎತ್ತಿಡಲು ಹೇಳುವುದು, ಜಿಗಿತ, ಓಟ, ಮೆಟ್ಟಿಲು ಹತ್ತುವುದು, ಇಲ್ಲವೇ ಮರಗಳನ್ನು ಹತ್ತಿಸುವುದು ಮೊದಲಾದ ಚಟುವಟಿಕೆಗಳಿಂದ ಮಕ್ಕಳ ಹೆದರಿಕೆ ದೂರವಾಗುವುದು ಹಾಗೂ ದೈಹಿಕ ಸಮತೋಲನವನ್ನು ಹೇಗೆ ನಿಭಾಯಿಸುವುದು ಎಂದು ತಿಳಿಯುತ್ತಾರೆ. ಮಕ್ಕಳಿಗೆ ಶಿಶುಗೀತೆಗಳನ್ನು ಕೇಳಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ನರ್ತಿಸಲು, ಅಭಿನಯಿಸಲು ಹೇಳುವುದು ಮಕ್ಕಳ ಕಲ್ಪನಾಶಕ್ತಿ ಹಾಗೂ ಅಭಿವೃದ್ಧಿಯಾಗುತ್ತದೆ.

**ಸಂವೇದನಾಶೀಲ ಕುಶಲತೆ:**

ಮಕ್ಕಳ ಜೊತೆ ಸಂಭಾಷಿಸುವಾಗವಾಗ ಅವರ ಮಾತುಗಳನ್ನು ಪೂರ್ತಿಯಾಗಿ ಕೇಳಿಸಿಕೊಳ್ಳಬೇಕು, ನಿಧಾನವಾಗಿ ಚಿಕ್ಕ–ಚಿಕ್ಕ ಕತೆ–ಹಾಡುಗಳನ್ನು ಹೇಳುವುದು–ಕೇಳುವುದು ಮುಂತಾದವನ್ನು ಆಟಗಳ ಮೂಲಕ ಬೆಂಬಲಿಸಬೇಕು. ಇದರಿಂದ ಶಬ್ದಗಳ ಸರಿಯಾದ ಉಚ್ಚಾರಣೆಯನ್ನು, ಯಾವುದೇ ಸಂಭಾಷಣೆಯನ್ನು ಹೇಗೆ ಪ್ರಾರಂಭಿಸಬೇಕು, ವಿವರಿಸಬೇಕು ಹಾಗೂ ಮುಕ್ತಾಯಗೊಳಿಸಬೇಕು ಎಂದು ತಿಳಿಯುತ್ತಾರೆ.

**ಎಲ್ಲಾ ಭಾಷೆಗಳಿಗೂ ಆದ್ಯತೆ ಇರಲಿ:**

ಬಹುಭಾಷಾ ರಾಷ್ಟ್ರವಾದ ನಮ್ಮ ದೇಶದಲ್ಲಿ ವಿಭಿನ್ನ ಸಂಸ್ಕೃತಿಯ ಜನರಿದ್ದಾರೆ. ಹಾಗೆಯೇ ಅವರು ಆಡುವ ಭಾಷಯೂ ಬೇರೆ ಬೇರೆ. ಮಕ್ಕಳಿ ಗೆ ಭಾಷೆಯನ್ನು ಅರಿಯಲು, ಸಂಭಾಷಿಸಲು ಹಾಗೂ ತಮ್ಮ ವಿಚಾರಗಳನ್ನು ತಿಳಿಸಲು ಗೊಂದಲವಾಗದಂತೆ ನೋಡಿಕೊಂಡು ಶಾಲೆಯಲ್ಲಿ ಹೊಸ ಹೊಸ ಭಾಷೆಗಳನ್ನು ಕಲಿಸಲು ಪ್ರಯತ್ನಿಸಬೇಕು ಮಕ್ಕಳಿಗೆ ಹೊಸ ಭಾಷೆ–ವಿಷಯ ಕಲಿಸಲು ಆಸಕ್ತಿದಾಯಕ ಮಾರ್ಗವನ್ನು ಅನುಸರಿಸಬೇಕು. ಅವರವರ ಅಭಿವೃದ್ಧಿ ಶಕ್ತ್ಯಾನುಸಾರ ಕಲಿಯಲು ಅವಕಾಶ ಮಾಡಿಕೊಡಬೇಕು.

**ಸಾಮಾಜಿಕ ವಿಷಯಗಳೂ ಇರಲಿ:**

ಬೇರೆ ಬೇರೆ ಹಿನ್ನೆಲೆಯ ಕುಟುಂಬ, ಸಂಸ್ಕೃತಿಯಿಂದ ಬಂದ ಮಕ್ಕಳಿಗೆ ಬೇರೆ ಬೇರೆ ಅಭಿರುಚಿಗಳಿರುತ್ತವೆ. ಅವರ ಆಚಾರ–ವಿಚಾರಗಳಿಗೆ ಧಕ್ಕೆಯಾಗದಂತೆ ಎಲ್ಲರೊಡನೆ ಬೆರೆಯಲು ಸಹಾಯ ಮಾಡಬೇಕು. ಮಕ್ಕಳ ನಡುವೆ ಕಾಳಜಿ, ಪ್ರೀತಿ–ವಿಶ್ವಾಸ, ವಸ್ತುಗಳನ್ನು ಅಥವಾ ಆಟಿಕೆಗಳನ್ನು ಹಂಚಿಕೊಳ್ಳುವುದು, ಹೊಂದಾಣಿಕೆಯಿಂದ ಇರುವುದನ್ನು ಕಲಿಸಬೇಕು. ಭಿನ್ನಾಭಿಪ್ರಾಯಗಳು ಅಥವಾ ಜಗಳಗಳು ಬಂದರೆ ಶಿಕ್ಷಕರು ತಾಳ್ಮೆಯಿಂದ ಪ್ರೀತಿಯಿಂದ ಮಕ್ಕಳಿಗೆ ತಿಳಿ ಹೇಳಬೇಕು. ಅಕ್ಕಪಕ್ಕದ ಮನೆಗಳು,

ಹಳ್ಳಿಗಳು, ನಗರಗಳು ಮುಂತಾದ ಜಾಗಗಳಿಗೆ ಮಕ್ಕಳನ್ನು ಕರೆದೊಯ್ದು ಅಲ್ಲಿಯ ಜನರ ಜೀವನದ ಪರಿಚಯ ಮಾಡಿಸಬೇಕು. ತಮ್ಮ ಸಾಮಾನುಗಳು, ಮನೆಯನ್ನು ಚೊಕ್ಕಟವಾಗಿ ಇಡಲು ಪಾಲಕರು ಮಕ್ಕಳಿಗೆ ಮಾರ್ಗದರ್ಶಿಯಾಗಿಬೇಕು. ತಮ್ಮ ಜೊತೆ ಮನೆಯ ಚಿಕ್ಕಚಿಕ್ಕ ಕೆಲಸಗಳಲ್ಲಿ ಮಕ್ಕಳನ್ನು ಸೇರಿಸಿಕೊಳ್ಳಬೇಕು. ಇದರಿಂದ ಮಕ್ಕಳು ಮನೆ,ಶಾಲೆ, ಊರು, ದೇಶ ಹೀಗೆ ಎಲ್ಲವನ್ನು ಸ್ವಚ್ಛವಾಗಿಟ್ಟುಕೊಂಡರೆ ಎಲ್ಲರಿಗೂ ಲಾಭದಾಯಕ ಎಂದು ತಿಳಿಯುತ್ತಾರೆ. ಉದ್ಯಾನಗಳಲ್ಲಿ ಮಕ್ಕಳ ಜೊತೆ ಆಡುವಾಗ ಗಿಡಗಳಿಗೆ, ಆಟಿಕೆಗಳಿಗೆ ಹಾನಿಯಾಗದಂತೆ ಆಡುವುದು, ಸರದಿಯಲ್ಲಿ ಹಾಡುವುದು ಮುಂತಾದವನ್ನು ಕಲಿಯುತ್ತಾರೆ.

**ಜ್ಞಾನೇಂದ್ರಿಯಗಳನ್ನೊಳಗೊಂಡ ಕಲಿಕೆ ಸಹಜವಾಗಿರಲಿ:**

ಸುತ್ತಲಿನ ಪ್ರಪಂಚದೊಂದಿಗೆ ಸಂಪರ್ಕವನ್ನೊದಗಿಸುವ ನಮ್ಮ ಜ್ಞಾನೇಂದ್ರಿಯಗಳ ಪರಿಚಯವನ್ನು ಸರಳವಾದ ಚಟುವಟಿಕೆಗಳೊಂದಿಗೆ ತಿಳಿಯಪಡಿಸಿ. ಬಿಸಿಯಾದ ನೀರನ್ನು ಮುಟ್ಟಲು ಹೇಳುವುದು, ಅವುಗಳನ್ನು ಮುಟ್ಟಿದಾಗ ಭಾವನೆ– ವ್ಯತ್ಯಾಸಗಳನ್ನು ಮಕ್ಕಳ ಮಾತಿನಲ್ಲೇ ಕೇಳುವುದು, ಸುಗಂಧಭರಿತ ಹೂವು ಹಾಗೂ ಕಸದ ತೊಟ್ಟಿಯಿಂದ ಬರುವ ವಾಸನೆಯನ್ನು ಗುರುತಿಸುವುದು, ವಾಹನಗಳಿಂದ ಬರುವ ಶಬ್ದ, ಗಿಡಗಳಲ್ಲಿಯ ತರುಲತೆಗಳನ್ನು ಗುರುತಿಸುವುದು, ಉಪ್ಪು, ಚಾಕೊಲೇಟ್, ನಿಂಬೆರಸ ಹೀಗೆ ಬೇರೆ ಬೇರೆ ಪದಾರ್ಥಗಳನ್ನು ಕೊಟ್ಟು ರುಚಿ ಗುರುತಿಸಲು ಹೇಳುವುದು. ಈ ಕ್ರಿಯಗಳು ಮಕ್ಕಳಿಗೆ ಚಿಕ್ಕಂದಿನಿಂದಲೇ ಇಂದ್ರಿಯಗಳ ಬಗ್ಗೆ ತಿಳಿಯಲು ಮತ್ತು ಅವುಗಳ ಪ್ರಾಮುಖ್ಯತೆ ಅರಿಯಲು ಸಹಕಾರಿ.

**ಎಲ್ಲರೊಂದಿಗೆ ಬೆರೆಯಿರಿ:**

ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವಂತೆ ಪಾಲಕರು ಶಾಲೆಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳಲ್ಲಿ ಅಂದರೆ ಪಾಲಕರ ಸಭೆ, ಕ್ರೀಡಾಕೂಟ, ವಾರ್ಷಿಕೋತ್ಸವ ಮುಂತಾದವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಮಕ್ಕಳಿಗೂ ಸಹ ಪ್ರೋತ್ಸಾಹಿಸಬೇಕು. ಮಕ್ಕಳ ಬಗ್ಗೆ ಇರುವ ಆರೈಕೆಯ ಕಾಳಜಿ ಕುರಿತು ಶಿಕ್ಷಕರ ಜೊತೆ ಚರ್ಚಿಸಬೇಕು. ಶಿಕ್ಷಕರ– ಪಾಲಕರ ನಡುವಿನ ಬಾಂಧವ್ಯ ಶೈಕ್ಷಣಿಕ, ಸಾಮಾಜಿಕ, ಭಾವನಾತ್ಮಕ ಅಂಶಗಳಲ್ಲಿ ಅಭಿವೃದ್ಧಿ ಕಾಣುತ್ತದೆ. ಶಿಕ್ಷಕರು–ಪಾಲಕರು ಇಂಥ ಅನೇಕ ಸುದ್ದಿಗಳ ಉದಾಹರಣೆಗಳಿಂದ ಮಕ್ಕಳಿಗೆ ಸರಿ–ತಪ್ಪು ಕೆಲಸಗಳ ಬಗ್ಗೆ ತಿಳಿ ಹೇಳಬೇಕು ಹಾಗೂ ಧನಾತ್ಮಕ ವಿಚಾರಗಳನ್ನು ಬೆಳೆಸಿಕೊಳ್ಳಲು ಮಾರ್ಗದರ್ಶಕರಾಗಬೇಕು. ಯಾವ ವಿದ್ಯಾರ್ಥಿಯು ಚಿಕ್ಕ ವಯಸ್ಸಿನಿಂದಲೇ ನೈತಿಕ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ರೂಢಿಸಿಕೊಳ್ಳುತ್ತಾರೋ ಅವರು ಒಳ್ಳೆಯ ಪ್ರಜೆಯೂ ಆಗುವರು ಹಾಗೂ ಒಳ್ಳೆಯ ಪಾಲಕರೂ ಆಗುವರು.

ನಾವು ನಮ್ಮ ಮಕ್ಕಳಿಗೆ ಜೀವನದ ಒಳ್ಳೆಯ ಮೌಲ್ಯಗಳನ್ನು ಕಲಿಸಿ ಮುಂದಿನ ಪೀಳಿಗೆಯ ಮಕ್ಕಳು ಸಹ ಸುರಕ್ಷಿತವಾಗಿ ಆರೋಗ್ಯದಿಂದ ಇರಲು ದುಡಿಯೋಣ. ಈ ಮೌಲ್ಯಗಳು ಪ್ರಾಮಾಣಿಕ, ದೇಶಭಕ್ತ, ನಂಬಿಗಸ್ಥ ಹಾಗೂ ಪ್ರೀತಿಯಿಂದ ಕೂಡಿದ ಸಮಾಜದ ರಚನೆಗೆ ಅತ್ಯಗತ್ಯ.

**ಮಕ್ಕಳಿಗೆ ಸ್ವಂತ ನಿರ್ಧಾರ ತೆಗೆದುಕೊಳ್ಳಲು ಪ್ರೋತ್ಸಾಹಿಸಿ:**

ಚಿಕ್ಕಚಿಕ್ಕ ವಿಷಯಗಳಲ್ಲಿ ಮಕ್ಕಳ ಅಭಿಪ್ರಾಯ ಕೇ ಳುವುದು, ಸಹಾಯ ಕೇಳುವುದು,ಸರಳವಾಗಿರುವ ಕೆಲಸಗಳನ್ನು ಮಾಡಲು ಹೇಳುವುದು ಮುಂತಾದವುಗಳಿಂದ ಮಕ್ಕಳು ಸ್ವಂತ ನಿರ್ಧಾರ ತೆಗೆದುಕೊಳ್ಳಲು ದಕ್ಷರಾಗುತ್ತಾರೆ. ಮಕ್ಕಳ ಚುರುಕಾದ ಶಕ್ತಿಯನ್ನು ಉತ್ಪಾದಕರ ರೀತಿಯಲ್ಲಿ ಬಳಸಿರಿ. ಅವರ ಕುತೂಹಲಕಾರಿ


ISBN : 979-889233259-0

ಚಿತ್ತವನ್ನು ಸೃಜನಶೀಲ ಚಿಂತನೆ ಮತ್ತು ಮಾನ್ಯತೆಯ ಕಡೆಗೆ ಹರಿಸಲು ಸಹಕರಿಸಿ. ಬೆಳೆಯುವೆ ಸಿರಿ ಮೊಳಕೆಯಲ್ಲಿ ಎಂಬಂತೆ ಉಜ್ವಲ ಭವಿಷ್ಯಕ್ಕೆ ಭದ್ರಬುನಾದಿಯನ್ನು ಹಾಕಿರಿ. ಮಕ್ಕಳನ್ನು ಒಳ್ಳೆ ವ್ಯಕ್ತಿಗಳನ್ನಾಗಿ ಬೆಳೆಸುವ ಸವಾಲಿನಲ್ಲಿ ಗೆಲ್ಲಿರಿ

ಈ ಎಲ್ಲಾ ಮೇಲ್ಕಾಣಿಸಿದ ನಿರ್ಧಾರಕಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೋಷಕರ & ಶಿಕ್ಷಕರ ಪಾತ್ರವು ಮಹತ್ವಪೂರ್ಣವಾದುದು ಎಂದು ತಿಳಿಸುತ್ತದೆ, ಮಾತ್ರವಲ್ಲ ಮನೋವೈಜ್ಞಾನಿಕವಾಗಿ ಯಾವ ರೂಪದಲ್ಲಿ ಮಕ್ಕಳೊಂದಿಗೆ ಪೋಷಕರು ವರ್ತಿಸಬೇಕು, ಶಿಕ್ಷಕರ ಜವಾಬ್ದಾರಿಗಳೇನು ಎಂದು ತಿಳಿದು ಬರುತ್ತದೆ. ಹಾಗೆಯೇ ಶೈಕ್ಷಣಿಕ ಜಗತ್ತಿನಲ್ಲಿ ಮಕ್ಕಳ ಇರುವಿಕೆಯು ಹೇಗೆ ಸಹಜತೆಯನ್ನು ಹೊಂದಬೇಕು ಹಾಗೂ ಶಿಕ್ಷಕರು ಮಕ್ಕಳ ರೂಪಣೆಯಲ್ಲಿ ಹೇಗೆ ಮಾರ್ಗದರ್ಶನ ಮಾಡಬೇಕು ಎಂಬುದು ತಿಳಿಯುತ್ತದೆ. ಮಕ್ಕಳ ಬೆಳವಣಿಗೆ ನಾಳಿನ ನಾಡಿನ ಭವಿಷ್ಯ ಎಂಬುದನ್ನು, ಶಿಕ್ಷಣ ಜಗತ್ತಿನಲ್ಲಿ ಪಾಲಕರು–ಮಕ್ಕಳು–ಶಿಕ್ಷಕರು ಹೇಗೆ ಅವಲಂಬಿತರು, ಜೊತೆಗೆ ದೇಶದ ಆರ್ಥಿಕತೆ, ಸಾಮಾಜಿಕತೆ, ನೈತಿಕತೆ ಶಿಕ್ಷಣ ಅವಲಂಬಿತ ಎಂಬುದೂ ಕೂಡ ಇಲ್ಲಿ ತಿಳಿಯುತ್ತದೆ.

**ಆಧಾರ ಗ್ರಂಥಗಳು**


1. ಕೃಷ್ಣ .ಬಿ.ಆರ್ – **'ಸಾಮಾಜಿಕ ಸಂಶೋದನೆ'** ವಿದ್ಯಾನಿಧಿ ಪ್ರಕಾಶನ, ಗದಗ–2000.
2. Ahmand, S. (2008). UGC-NET: A Measure to Maintain Quality in Teaching and Research. *University News*, 46(21), May 19-25
3. Edutracks – a monthly magazine
4. Sungoh, S.M. (2010). Quality Issues in Teacher Education. 153-156. Retrived fromttp://dspace.nehu.ac.in/handle/1/3351.
5. Bhatia, K. & Dash, M.K. (2010): "National Knowledge Commission – A Step towards India's

# ಪ್ರಸ್ತುತದಲ್ಲಿ ಶಿಕ್ಷಕರು, ಬೋಧನೆ ಮತ್ತು ಮಾಹಿತಿ ಸಂವಹನ ತಂತ್ರಜ್ಞಾನಗಳ ಪಾತ್ರ

**ಶ್ರೀ ವಿಶ್ವನಾಥ ಜಿ,** ಗ್ರಂಥಪಾಲಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

**ಬೋಧನ ಕಲೆ**

ತಂತ್ರಜ್ಞಾನದ ಪರಿಚಯವೊಂದೆ ಕಲಿಕೆ ಮತ್ತು ಬೋಧನೆ ಪ್ರಕ್ರಿಯೆಯನ್ನು ಬದಲಾಯಿಸುವುದಿಲ್ಲ ಮಾಹಿತಿ ಸಂವಹನ ತಂತ್ರಜ್ಞಾನಗಳ ಅಸ್ತಿತ್ವ ಮಾತ್ರ ಶಿಕ್ಷಕ ಆಚರಣೆಗಳನ್ನು ಪರಿವರ್ತಿಸುವುದಿಲ್ಲ. ಆದರೆ, ಮಾಹಿತಿ ಸಂವಹನ ತಂತ್ರಜ್ಞಾನಗಳು ಶಿಕ್ಷಕರಿಗೆ ತಮ್ಮ ಶಿಕ್ಷಕ ಆಚರಣೆಗಳನ್ನು ಪರಿವರ್ತಿಸಿಕೊಳ್ಳಲು ಸಾಧ್ಯಗೊಳಿಸುತ್ತದೆ. ಶಿಕ್ಷಕರ ಬೋಧನ ಕಲೆಯ ವಿಧಾನಗಳು ಮತ್ತು ವಿಚಾರಗಳು ಅವರ ಮಾಹಿತಿ ಸಂವಹನ ತಂತ್ರಜ್ಞಾನ ಬಳಕೆ ಹಾಗೂ ಇದರಿಂದಾಗುವ ವಿದ್ಯಾರ್ಥಿಗಳ ಸಾಧನೆಯ ಮೇಲೆ ಪ್ರಭಾವ ಬೀರುತ್ತದೆ.

ವಿದ್ಯಾರ್ಥಿ ಕೇಂದ್ರಿತ ಕಲಿಕಾ ಪರಿಸರವನ್ನು ಕಲ್ಪಿಸಲು ಮಾಹಿತಿ ಸಂವಹನ ತಂತ್ರಜ್ಞಾನಗಳನ್ನು ಶಿಕ್ಷಕರಿಗೆ ಸಹಾಯಕ ಸಾಧನಗಳನ್ನಾಗಿ ನೋಡಲಾಗುತ್ತಿದೆ. ಓರ್ವ ಶಿಕ್ಷಕನು, ಇಡಿ ತರಗತಿಯಲ್ಲೆ ಚರ್ಚೆ ಮೂಲಕ ಅಥವಾ ವೈಯುಕ್ತಿಕವಾಗಿಗಿ / ಸಣ್ಣ ಗುಂಪುಗಳಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನ ಬಳಸಿ ಕಾರ್ಯ ಮಾಡುವ ಮೂಲಕ ವಿದ್ಯಾರ್ಥಿಯ ಗ್ರಹಿಕೆ ಮತ್ತು ಯೋಚನೆಗೆ ಸವಾಲು ಹಾಕುವನೋ, ಅಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆ ಪರಿಣಾಮಕಾರಿಯಾಗಿರುತ್ತದೆ ಎಂದು ಒ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟಗಳಲ್ಲಿ ಸಂಶೋಧನೆಯ ಫಲಿತಾಂಶ ತೋರುತ್ತದೆ. ಮಾಹಿತಿ ಸಂವಹನ ತಂತ್ರಜ್ಞಾನಗಳನ್ನು ಸಾಂಪ್ರದಾಯಿಕ ಶಿಕ್ಷಕ ಕೇಂದ್ರಿತ ಬೋಧನೆ ಶೈಲಿಯಿಂದ ಕಲಿಯುವವ ಕೇಂದ್ರಿತ ವಿಧಾನವನ್ನು ಬೆಂಬಲಿಸುವ ಮುಖ್ಯ ಸಾಧನ ಗಳೆಂದು ಪರಿಗಣಿಸಲಾಗುತ್ತಿದೆ.

**ಶಿಕ್ಷಕನ ಪಾತ್ರ**

ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆಯಿಂದಾಗಿ ಓರ್ವ ಶಿಕ್ಷಕನ ಪಾತ್ರವನ್ನು ಸುಗಮಗೊಳಿಸುವವನದಾಗಿ ಬದಲಾಯಿಸಿದ್ದರಿಂದ ತರಗತಿಯ ಕೊಠಡಿಯಲ್ಲಿ ಅವರಿಗೆ ನಾಯಕನಾಗಿರುವುದಕ್ಕೆ ಅಡ್ಡ ಬರುವುದಿಲ್ಲ, ಸಾಂಪ್ರದಾಯಿಕ ನಾಯಕತ್ವ ಕೌಶಲ್ಯಗಳು ಮತ್ತು ಆಚರಣೆಗಳು ಈಗಲೂ ಮುಖ್ಯ (ಮುಖ್ಯವಾಗಿ ಪಾಠದ ಯೋಜನೆ, ತಯಾರಿಯಲ್ಲಿ).

ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯ ಸಮಯದಲ್ಲಿ ಪಾಠದ ಯೋಜನೆ ನಿರ್ಣಾಯಕ ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆ ಸಮಯದಲ್ಲಿ ಶಿಕ್ಷಕನ ಪಾಠ ಯೋಜನೆ ಬಹು ಮುಖ್ಯ; ಎಲ್ಲಿ


ISBN : 979-889233259-0

ಕಡಿಮೆ ಯೋಜನೆ ಯಾಗಿದೆಯೋ; ವಿದ್ಯಾರ್ಥಿಯ ಕಾರ್ಯವೂ ಕೇಂದ್ರೀಕೃತವಾಗಿರುವುದಿಲ್ಲ ಫಲಿತಾಂಶದ ಪ್ರಮಾಣ ಕಡಿಮೆ ಯಾಗುವುದೆಂದು ಸಂಶೋಧನೆಯಿಂದ ತಿಳಿಬಂದಿದೆ.

**ಶಿಕ್ಷಕರ ತಾಂತ್ರಿಕ ಸಾಮರ್ಥ್ಯಗಳು ಮತ್ತು ಮಾಹಿತಿ ಸಂವಹನ ತಂತ್ರಜ್ಞಾನಗಳ ಅರಿವು**

ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯ ಲಾಭವನ್ನು ಪಡೆಯಲು ಶಿಕ್ಷಕರನ್ನು ಸಿದ್ಧಗೊಳಿಸುವುದು ಬರಿ ತಾಂತ್ರಿಕ ಕೌಶಲ್ಯಗಳಿಂದ ಹೆಚ್ಚಿನದಾಗಿದೆ. ಬೋಧನೆಯಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನಗಳ ಯಶಸ್ವಿ ಸಮಗ್ರೀಕರಣವೂ ಶಿಕ್ಷಕರ ತಾಂತ್ರಿಕ ಕೌಶಲ್ಯಗಳ ಆಧಿಪತ್ಯಕ್ಕೆ ಮಾತ್ರ ಪೂರ್ವಭಾವಿ ಷರತ್ತಲ್ಲ.

ಕೇವಲ ಒಂದು ತರಬೇತಿ ಸಾಲದ್ದು ಅತಿ ಸೂಕ್ತ ಸಂಪನ್ಮೂಲವನ್ನು ಆರಿಸಲು ಮತ್ತು ಅರ್ಹತೆ ನಿರ್ಧರಿಸಲು ಶಿಕ್ಷಕರಿಗೆ ಮಾಹಿತಿ ಸಂವಹನ ತಂತ್ರಜ್ಞಾನಗಳ ವ್ಯಾಪಕ ಮತ್ತು ನಿರಂತರ ಮಾಹಿತಿ ಬೇಕಾಗುತ್ತದೆ. ಆದರೆ ಮಾಹಿತಿ ಸಂವಹನ ತಂತ್ರಜ್ಞಾನಗಳ ತಾಂತ್ರಕ ಆಧಿಪತ್ಯಕ್ಕಿಂತ ಸೂಕ್ತ ಪೆಡಗಾಗಿ ಆಚರಣೆಗಳ ಅಭಿವೃದ್ಧಿಯೂ ಮುಖ್ಯವೆಂದು ಪರಿಗಣಿಸಲಾಗುತ್ತಿದೆ.

ಕೆಲವು ಶಿಕ್ಷಕರು ತಮ್ಮ ಬೋಧನೆಯಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆಯಲ್ಲಿ ಪರಿಣತಿ ಹೊಂದಿರುತ್ತಾರೆ ಓ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟಗಳ ಅತಿ ಹೆಚ್ಚಾಗಿ ಮುಂದುವರೆದ ಶಾಲೆಗಳಲ್ಲೂ ಸಹ ಕೆಲವೇ ಕೆಲವು ಶಿಕ್ಷಕರಿಗೆ ಮಾತ್ರ ಮಾಹಿತಿ ಸಂವಹನ ತಂತ್ರಜ್ಞಾನದ ಸಾಧನಗಳ ಮತ್ತು ಸಂಪನ್ಮೂಲಗಳ ವ್ಯಾಪಕ ಮಾಹಿತಿವಿರುತ್ತದೆ.

ಓ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟಗಳಲ್ಲಿ, ಗಣಕಯಂತ್ರ ಸಾಕ್ಷರತೆ ಪ್ರೋತ್ಸಾಹಕ್ಕಾಗಿ ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆಯೂ ಬೋಧನೆ ಮತ್ತು ಕಲಿಕೆಯ ಸಾದನಗಳಾಗಿ ಬಳಸುವುದು ಮುಖ್ಯ ಓ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟಗಳ ಅನುಭವದಲ್ಲಿ ಪ್ರತಿನಿತ್ಯದ ಬೋಧನೆ ಮತ್ತು ಕಲಿಕೆ ಚಟುವಟಿಕೆಗಳಲ್ಲಿ ತಂತ್ರಜ್ಞಾದ ಬಳಕೆಯೂ ಗಣಕಯಂತ್ರ ತರಗತಿಗಳಿಗಿಂತ ಅತಿ ಮುಖ್ಯವೆಂದು ವ್ಯಕ್ತವಾಗುತ್ತದೆ. ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯಲ್ಲಿ ತಾಂತ್ರಿಕ ಕೌಶಲ್ಯಗಳ ಅಭಿವೃದ್ಧಿಗೆ ಪಾತ್ರವಿದ್ದು, ಇತರೆ ಬೋಧನೆ ಮತ್ತು ಕಲಿಕೆ ಆಚರಣೆಗಳನ್ನು ಪ್ರಚೋದಿಸಲು ಮುಖ್ಯ. ಅದರದ್ದೆ ಆದ ಮಹತ್ವ ಹೊಂದಿರುವುದಿಲ್ಲ. ವಿದ್ಯಾರ್ಥಿಗಳ ಮಾಹಿತಿ ಸಂವಹನ ತಂತ್ರಜ್ಞಾನ ಕುರಿತ ಕೌಶಲ್ಯಗಳ ಮತ್ತು ಅನುಭವದ ಉನ್ನತ ಶ್ರೇಣಿ ತೋರು ಶಾಲೆಗಳೆಂದರೆ ಹೆಚ್ಚಿನ ಗಣಕಯಂತ್ರ ಕೋರ್ಸ್ ಬೇಡಿಕೆಗಳು ಹೊಂದಿರುವ ಶಾಲೆಗಳಲ್ಲ ಬದಲಾಗಿ ಶಿಕ್ಷಕರ ವೃತ್ತಿಪರ ಅಭಿವೃದ್ಧಿ ಮತ್ತು ಬೋಧನೆ ಮತ್ತು ಕಲಿಕೆ ಪ್ರಕ್ರಿಯೆಯಲ್ಲಿ ನಿರಂತರವಾಗಿ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆ ಮಾಡುತ್ತಿರುವ ಶಾಲೆಗಳು.


ISBN : 979-889233259-0

ಶಿಕ್ಷಕರಿಗಿಂತ ವಿದ್ಯಾರ್ಥಿಗಳು ತಮ್ಮ ತಂತ್ರಜ್ಞಾನದ ಬಳಕೆಯಲ್ಲಿ ನುರಿತವರು ಓ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟ್ರಗಳಲ್ಲಿ, ವಿದ್ಯಾರ್ಥಿಗಳ ಜ್ಞಾನ ಹಾಗೂ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆ ಮತ್ತು ಶಿಕ್ಷಕರ ಮಾಹಿತಿ ಸಂವಹನ ತಂತ್ರಜ್ಞಾನದ ಜ್ಞಾನ ಮತ್ತು ಬಳಕೆಯ ಸಾಮರ್ಥ್ಯದಲ್ಲಿ ಅತಿ ಹೆಚ್ಚಾದ ವ್ಯತ್ಯಾಸವನ್ನು ಕಾಣಬಹುದಾಗಿದೆ. ವಿದ್ಯಾರ್ಥಿಗಳ ತಮ್ಮ ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಪರಿಣಾಮಕಾರಿ ಬಳಕೆಯು ಶಿಕ್ಷಕನ ಕೌಶಲ್ಯದಿಂದ ಪ್ರಭಾವ ಬೀರುವುದೆಂದು ಇದರಿಂದ ತಿಳಿಯುತ್ತದೆ.

**ಶಿಕ್ಷಕನಿಂದ ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆ**

ಶಿಕ್ಷಕರು ಸಾಮಾನ್ಯವಾಗಿ ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆಯೂ ಆಡಳಿತಾತ್ಮಕ ಕಾರ್ಯಗಳಲ್ಲಿ ಬಳಸುವರು (ಶಿಕ್ಷಕರು ಸಾಮಾನ್ಯವಾಗಿ ಮಾಹಿತಿ ಸಂವಹನ ತಂತ್ರಜ್ಞಾನವನ್ನು ದೈನಂದಿನ ಕೆಲಸ ಗಳಲ್ಲಿ ಬಳಸುವರು (ದಾಖಲೆಗಳನ್ನು ಇಡುವುದು, ಪಠ್ಯ ಯೋಜನೆ ಅಭಿವೃದ್ಧಿ, ಮಾಹಿತಿಯ ಪ್ರದರ್ಶನ, ಅಂತರ್ಜಾಲದಲ್ಲಿ ಮೂಲ ಮಾಹಿತಿ ಹುಡುಕಲು).

ಹೆಚ್ಚಿನ ತಿಳುವಳಿಕೆ ಇರುವ ಶಿಕ್ಷಕರು ಗಣಕಯಂತ್ರ ಸಹಾಯದ ಬೋಧನೆ ಮೇಲೆ ಹೆಚ್ಚಾಗಿ ಅವಲಂಬಿತರಾಗಿರುವುದಿಲ್ಲ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯಲ್ಲಿ ಹೆಚ್ಚಿನ ಜ್ಞಾನವುಳ್ಳ ಶಿಕ್ಷಕರು ಗಣಕಯಂತ್ರ ಸಹಾಯಕ ಬೋಧನೆಯನ್ನು ಕಡಿಮೆ ಪ್ರಮಾಣದಲ್ಲಿ ಬಳಸುತ್ತಾರೆ.

ಶಿಕ್ಷಕರ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆ ಅವರ ಸಾಮಾನ್ಯ ಬೋಧನೆ ಶೈಲಿಗಳ ಮೇಲೆ ಅವಲಂಬಿಸಿದೆ ಮಾಹಿತಿ ಸಂವಹನ ತಂತ್ರಜ್ಞಾನಗಳ ಬಳಕೆಯ ವಿಧಾನಗಳು ಶಿಕ್ಷಕರ ಶೈಕ್ಷಣಿಕ ಕಲೆಯ ತತ್ವಗಳೊಂದಿಗೆ ಪರಸ್ಪರ ಸಂಬಂಧಹೊಂದಿದೆ. ಹೆಚ್ಚಾಗಿ ಪರಿಣಾಮಕಾರಿಯಾಗಿ ಮಾಹಿತಿ ಸಂವಹಣ ತಂತ್ರಜ್ಞಾನಗಳನ್ನು ಬಳಸುವ ಶಿಕ್ಷಕರು ಪೆಡಗಾಗಿಯ ಸಾಂಪ್ರದಾಯಿಕ ಪ್ರಸರಣ ವಿಧಾನವನ್ನು ಬಳಸುವುದು ಕಡಿಮೆ. ಹೆಚ್ಚಿನ ವಿಧದ ಸಾಫ್ಟ್ ವೇರ್ ಬಳಸುವ ಶಿಕ್ಷಕರು ಹೆಚ್ಚಾದ ಪರಿಣಾಮಕಾರಿ ಶೈಕ್ಷಣಿಕ ಕಲೆಯ ಅಭ್ಯಾಸ ಮಾಡುತ್ತಾರೆ.

ಮಾಹಿತಿ ಸಂವಹನ ತಂತ್ರಜ್ಞಾನಗಳೊಂದಿಗಿನ ಬೋಧನೆಯು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಬೋಧನೆಗೆ ಮತ್ತು ಕಲಿಕೆಗೆ ಬೆಂಬಲಿಸುವ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯೂ ಶಿಕ್ಷಕರಿಗೆ ಶೈಕ್ಷಣಿಕ ಕಲೆಯ ತತ್ವಗಳನ್ನು ಹಾಗು ಕಾರ್ಯತಂತ್ರಗಳನ್ನು ಪರಿವರ್ತಿಸಲು ಮತ್ತು ಅವುಗಳನ್ನು ನಿರಂತರವಾಗಿ ಬಳಸಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ.

**ಶಿಕ್ಷಕರ ಆತ್ಮವಿಶ್ವಾಸ ಮತ್ತು ಪ್ರೇರಣೆ**

ಕೆಲ ಶಿಕ್ಷಕರು ಮಾಹಿತಿ ಸಂವಹನ ತಂತ್ರಜ್ಞಾನಗಳ ಭರವಸೆಯ ಕೆಲ ಶಿಕ್ಷಕರು ಮಾಹಿತಿ ಸಂವಹನ ತಂತ್ರಜ್ಞಾನ ಸಂಪನ್ಮೂಲಗಳ ಬಳಕೆಯಲ್ಲಿ ಭರವಸೆಯುಳ್ಳವರು, ಮತ್ತು ಭರವಸೆಯ ಕೊರತೆ ಬೋಧನಾ ವಿಧಾನದ ಮೇಲೆ ಪರಿಣಾಮ ಬೀರುತ್ತದೆ.

ಹಲವಾರು ಶಿಕ್ಷಕರು ಭಯದಿಂದ ಮಾಹಿತಿ ಸಂವಹನ ತಂತ್ರಜ್ಞಾನವನ್ನು ಬಳಸುವುದಿಲ್ಲ ಓ.ಈ.ಸಿ.ಡಿ (ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ) ರಾಷ್ಟ್ರಗಳಲ್ಲಿ ಈಗಲೂ ಸಹ ಹಲವಾರು ಶಿಕ್ಷಕರು ಮಾಹಿತಿ ಸಂವಹನ ತಂತ್ರಜ್ಞಾನದ ಬಳಸಲು ಹೆದರುವರು, ಹಾಗಾಗಿ ತಮ್ಮ ಬೋಧನೆಯಲ್ಲಿ ಬಲಸಲು ಹಿಂಜರಿಯುವರು.

ಮಾಹಿತಿ ಸಂವಹನ ತಂತ್ರಜ್ಞಾನಗಳು (ಕೆಲವು) ಶಿಕ್ಷಕರಿಗೆ ಪ್ರೇರಣೆ ನೀಡುತ್ತವೆ,ಕನಿಷ್ಠ ಆರಂಭದಲ್ಲಿ ಕನಿಷ್ಠ ಪ್ರಾರಂಭದಲ್ಲಿ, ಮಾಹಿತಿ ಸಂವಹನ ತಂತ್ರಜ್ಞಾನದ ತಿಳುವಳಿಕೆಯೂ ಪ್ರೇರೇಪಣೆಯ ಮುಖ್ಯ ಸಾಧನವಾಗಿದೆ. ಇದರಿಂದ ಶಿಕ್ಷಕರ ವೃತ್ತಿಪರ ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಮತ್ತು ಸಶಕ್ತಗೊಳಿಸಲು ಸಹಾಯವಾಗುತ್ತದೆ.

ವೃತ್ತಿಪರ ಅಭಿವೃದ್ಧಿ ಮುಂದುವರಿಸಲು ಪರಿಣಾಮಕಾರಿ ಶಿಕ್ಷಕ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಉತ್ತೇಜನಗಳನ್ನು ಅಭಿವೃದ್ಧಿಗೊಳಿಸಬೇಕು ವೃತ್ತಿಪರ ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸಲು ಶಿಕ್ಷಕರಿಗೆ ಹೆಚ್ಚಿನ ಪ್ರೇರಣೆ ಹಾಗೂ ಉತ್ತೇಜಕ ಸವಲತ್ತುಗಳು ಬೇಕಾಗುತ್ತದೆ. ಪ್ರಮಾಣ ಪತ್ರ, ವೃತ್ತಿಪರ ಪ್ರಗತಿ, ಸಂಬಳದಲ್ಲಿ ಹೆಚ್ಚಳ, ವೃತ್ತಿಪರ ಅಭಿವೃದ್ಧಿಯಲ್ಲಿ ಭಾಗವಹಿಸಲು ಸಂಬಳರಹಿತ ರಜೆ, ಶಾಲಾ ಹಾಗೂ ಸಮುದಾಯ ಮಟ್ಟದಲ್ಲಿ ಮತ್ತು ಸಹುದ್ಯೋಗಿಗಳೊಂದಿಗೆ ಔಪಚಾರಿಕ ಹಾಗೂ ಅನೌಪಚಾರಿಕ ಗುರುತಿಸುವಿಕೆ, ಕಡಿಮೆಗೊಳಿಸಿದ ಪ್ರತ್ಯೇಕೀಕರಣ, ಮತ್ತು ಉತ್ಪಾದನೆ ಯ ಹೆಚ್ಚಳ ಹಲವಾರು ಉತ್ತೇಜಕಗಳನ್ನು ಬಳಸಬಹುದು ಮಾಹಿತಿ ಸಂವಹಣ ತಂತ್ರಜ್ಞಾನಗಳ ಸುಲಭಗಮ್ಯತೆಯೂ ಶಿಕ್ಷಕರಿಂದ ಅವುಗಳ ಬಳಕೆಗಿಂತ ಮುಖ್ಯ ಅಂಶ ಶಿಕ್ಷಕರ ಮಾಹಿತಿ ಸಂವಹನ ತಂತ್ರಜ್ಞಾನ ಕುರಿತ ಕೌಶಲ್ಯಗಳ ಅಭಿವೃದ್ಧಿ ಮುಂದುವರೆಸಲು ಅವರಿಗೆ ಪ್ರಸಕ್ತ ಮಾಹಿತಿ ಸಂವಹನ ತಂತ್ರಜ್ಞಾನದ ಸಾಧನಗಳ ಕಾರ್ಯವಿಧಾನಗಳಿಗೆ ನಿರಂತರ ಲಭ್ಯತೆಯು ಅತಿ ಮುಖ್ಯ ಅಂಶ.

ಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಪರಿಚಯದಿಂದ ಕಲಿತ ಪಾಠಗಳನ್ನು ಹಂಚಿಕೊಳ್ಳಬೇಕಾಗುತ್ತದೆ. ಶಿಕ್ಷಣದಲ್ಲಿ ಮಾಹಿತಿ ಸಂವಹನ ತಂತ್ರಜ್ಞಾನದ ಪರಿಚಯವೂ ದೊಡ್ಡ ಮಟ್ಟದ


ISBN : 979-889233259-0

ಬದಲಾವಣೆ ಅಥವ ಸರಿಪಡಿಸುವ ಪ್ರಕ್ರಿಯೆಯ ಭಾಗವಾಗಿರುವುದರಿಂದ, ಮಾಹಿತಿ ಸಂವಹನ ತಂತ್ರಜ್ಞಾನಗಳ ಯಶಸ್ವಿ ಬಳಕೆಯನ್ನು ಪ್ರೋತ್ಸಾಹಿಸಿ ಹಂಚಿಕೊಳ್ಳಬೇಕಾಗುತ್ತದೆ.

**ಸಾಧ್ಯಗೊಳಿಸುವ ಅಂಶಗಳು**

ಶಿಕ್ಷಕರಿಂದ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯ ಲಾಭವನ್ನು ಪಡೆಯಲು ಹಲವಾರು ಬದಲಾವಣೆಗಳನ್ನು ಅನುಷ್ಠಾನಗೊಳಿಸಬೇಕು ಬೋಧನ ಕಲೆಗಳ ಪರಿವರ್ತನೆ, ಪಠ್ಯಕ್ರಮ ಮತ್ತು ನಿರ್ಧರಣೆಗಳನ ಪುನರ್ರೂಪಣೆ, ಹಾಗೂ ಶಾಲೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡುವುದರಿಂದ ಮಾಹಿತಿ ಸಂವಹನ ತಂತ್ರಜ್ಞಾನದ ಬಳಕೆಯ ಲಾಭಗಳನ್ನು ಪಡೆಯಬಹುದು. ಬೇಕಾಗುವಷ್ಟು ಸಾಧ್ಯಗೊಳಿಸುವ ಅಂಶಗಳನ್ನು ಪರಿಗಣಿಸಿ ಶಿಕ್ಷಕರು ಮಾಹಿತಿ ಸಂವಹನ ತಂತ್ರಜ್ಞಾನವನ್ನು ತಮ್ಮ ಬೋಧನ ಕಲೆಯ ತತ್ವಗಳ ಆಧಾರದ ಮೇಲೆ ಪರಿಣಾಮಕಾರಿಯಾಗಿ ಬಳಸಬಹುದು,

ಕಾರ್ಯನಿರತ ತಾಂತ್ರಿಕ ಮೂಲಭೂತ ಸೌಕರ್ಯ (ಸ್ಪಷ್ಟವಾಗಿ) ಶಿಕ್ಷಕರಿಗೆ ಕಾರ್ಯನಿರತ ಗಣಕಯಂತ್ರಗಳ ಸೂಕ್ತ ಲಭ್ಯತೆಯಿರಬೇಕು, ಸಮರ್ಪಕ ತಾಂತ್ರಿಕ ನೇರವು ನೀಡಬೇಕಾಗುತ್ತದೆ. ಇದರಿಂದ ಅವರು ಮಾಹಿತಿ ಸಂವಹನ ತಂತ್ರಜ್ಞಾನದ ಪರಿಣಾಮಕಾರಿ ಬಳಕೆ ಮಾಡುತ್ತಾರೆ.

ಮಾಹಿತಿ ಸಂವಹನ ತಂತ್ರಜ್ಞಾನಗಳ ಪರಿಚಯ ಸಮಯ ತೆಗೆದುಕೊಳ್ಳುತ್ತದೆ ಮಾಹಿತಿ ಸಂವಹನ ತಂತ್ರಜ್ಞಾನಗಳ ಪರಿಣಾಮಕಾರಿ ಬಳಕೆಗಾಗಿ ಶಿಕ್ಷಕರಿಗೆ ಹೊಸ ಕೌಶಲ್ಯಗಳನ್ನು ಅಬಿವೃದ್ಧಿಸಿಕೊಳ್ಳು, ಅವರ ಪ್ರಸ್ತುವ ಬೋಧನೆಯ ಆಚರಣೆಗಳನ್ನು ಸಮನ್ವಯಗೊಳಿಸಲು ಮತ್ತು ಅಧಿಕವಾಗಿ ಬೇಕಾಗುವ ಪಾಠದ ಯೋಜನೆ ತಯಾರಿಸಲು ಸಾಕಾಗುವಷ್ಟು ಸಮಯ ನೀಡಬೇಕಾಗುತ್ತದೆ.

ಒಟ್ಟಾರೆಯಾಗಿ ಪ್ರಸ್ತುತದಲ್ಲಿ ತಂತ್ರಜ್ಞಾನದಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆಯುತ್ತಿದ್ದು, ಅವು ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಪ್ರಭಾವವನ್ನು ಬೀರುತ್ತಿವೆ. ಶಿಕ್ಷಕರಾದವರು ಅವುಗಳ ಜ್ಞಾನವನ್ನು ಪಡೆದು 21ನೇ ಶತಮಾನದ ವಿದ್ಯಾರ್ಥಿಗಳಿಗೆ ಅವರ ಅಪೇಕ್ಷೆಯಂತೆ ತಂತ್ರಜ್ಞಾನದೊಂದಿಗೆ ಶಿಕ್ಷಣ ನೀಡಲು ಸಿದ್ಧರಾಗಬೇಕಾಗಿದೆ.


ISBN : 979-889233259-0

## ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ದೇಶಿ ಕೌಶಲಗಳ ಮಹತ್ವ

**ಶ್ರೀಮತಿ ಕವಿತಾ ಹರವಿಶೆಟ್ಟರ್,** ಸಹಾಯಕ ಗ್ರಂಥಪಾಲಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದು ಮೂರು ವರ್ಷಗಳು ತುಂಬಿದವು.ದೇಶದ ಶಿಕ್ಷಣವನ್ನು ಕಾಲಕ್ಕೆ ತಕ್ಕಂತೆ ಬದಲಿಸಬೇಕು ಎಂಬ ಮುಖ್ಯ ಆಶಯದೊಂದಿಗೆ ರಾಷ್ಟ್ರೀಯ ಶಿಕ್ಷಣ ನೀತಿ 2020 ಜಾರಿಗೆ ಬಂದಿದೆ. ಶಿಕ್ಷಣ ಮತ್ತು ಶಿಕ್ಷಕರು ಹರಿಯುತ್ತಿರವ ನೀರಾಗಬೇಕು ನಾಳೆ ಬರಲಿರುವ ಸವಾಲುಗಳನ್ನು ಎದುರಿಸುವ ಪಠ್ಯಕ್ರಮವನ್ನು ನಿರ್ಮಿಸಬೇಕು. ವಿಧ್ಯಾರ್ಥಿಗಳಿಗೆ ಚಟುವಟಿಕೆಯುಕ್ತ ಬೋಧನೆಯನ್ನು ನೀಡಬೇಕು. ಕೌಶಲ್ಯ, ಮುಖ್ಯವಾಗಿ ಆಧುನಿಕ ಕೌಶಲಗಳಾದ ಭಾಷೆ. ಸಂವಹನ ಕಲೆ, ತಾರ್ಕಿಕ ಆಲೋಚನೆ, ಗಣಿತ, ವಿಜ್ಞಾನ, ಇಂಜಿನಿಯರಿಂಗ್ ಜೊತೆಗೆ ಕೃಷಿ, ಹೈನುಗಾರಿಕೆ. ಪಾಕ ಕಲೆ ಮುಂತಾದ ಜೀವನ ಕಲೆಗಳಲ್ಲಿ ಮಕ್ಕಳಿಗೆ ಕೌಶಲಾಭಿವೃದ್ಧಿ ಶಿಕ್ಷಣ ನೀಡುವಂತಾಗಬೇಕೆಂದು ಇದರ ಮುಖ್ಯ ಆಶಯ.

ಕೋವಿಡ್ ನಮಗೆ ಕಲಿಸಿರುವ ಪಾಠದ ಆಧಾರದ ಮೇಲೆ ಹೊಸ ಆಲೋಚನಾ ಪದ್ದತಿಯ ಯುವಪೀಳಿಗೆಯನ್ನು ಬೆಳೆಸುವುದು ಶಿಕ್ಷಣ ಕ್ಷೇತ್ರದ ಮುಖ್ಯ ಗುರಿ ಕಳೆದ ಮೂರು ವರ್ಷಗಳಲ್ಲಿ ಶಿಕ್ಷಣ ಜಗತ್ತು ರಾಷ್ಟ್ರೀಯ ಶಿಕ್ಷಣ ನೀತಿಯ ನೆರಳಿನಲ್ಲಿ ಗುಣಮಟ್ಟದ ಶಿಕ್ಷಣದ ಬಗ್ಗೆ ಒತ್ತುಕೊಡುತ್ತಿರುವುದು ಗಮನಾರ್ಹ. ಮಕ್ಕಳ ಮೇಲೆ ಇರುವ ಪಠ್ಯಪುಸ್ತಕಗಳ ಭಾರ ಕಡಿಮೆ ಮಾಡಬೇಕು. ಆಡುತ್ತಾ ನಲಿಯುತ್ತಾ ಕಲಿಯಬೇಕು ಆಟ, ಯೋಗ, ಚಿತ್ರಕಲೆ, ಸಂಗೀತ, ಪಾಕ ಶಾಲೆ ಶಿಕ್ಷಣದ ಬಹುಮುಖ್ಯ ಭಾಗಗಳಾಗಬೇಕು, ಎಂಬ ಎನ್ಇಪಿಯ ಆಶಯ ಶಿಕ್ಷಣ ಕ್ಷೇತ್ರದಲ್ಲಿ ಸಂಚಲನವನ್ನು ತಂದಿದೆ. ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಮಾತ್ರ ಶಿಕ್ಷಣ ಎಂದು ನಂಬಿದ್ದ ಸಮಾಜದಲ್ಲಿ ದೇಶದ ಹಳ್ಳಿ, ಕೆರೆಕುಂಟೆ, ಕೃಷಿ, ಗಿಡಮರ, ಹಸು ಎಮ್ಮೆ ಎತ್ತು ಕೂಡ ದೇಶದ ಬಹುದೊಡ್ಡ ಸಂಪತ್ತು ಎಂಬ ಜಾಗೃತಿ ಮೂಡತೊಡಗಿದೆ, ಬಡಿಗ, ಕುಂಬಾರ, ಕಮ್ಮಾರ, ಅಗಸ, ಕ್ಷೌರಿಕ, ಉಪ್ಪಾರ, ನೀರ ಗಂಟಿ ವೃತ್ತಿಗಳು ಹಳ್ಳಿಯ ಆರ್ಥಿಕ ನೆಲೆಗಳನ್ನು ಪ್ರೋತ್ಸಾಹಿಸುವುದು, ಬೆಳೆಸುವುದು ದೇಶದ ಆರ್ಥಿಕತೆಯ ಭಾಗವಾಗಬೇಕು ಎಂಬ ಹೊಸ ತಿಳಿವಳಿಕೆ ಸಮಾಜದಲ್ಲಿ ಮೂಡುತ್ತಿರುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಸಾಧನೆ. ಮಾರುಕಟ್ಟೆಯ ಏರುಪೇರು, ಹವಾಮಾನ ವೈಪರಿತ್ಯ, ಮಳೆ ನೀರಿನ ಕೊಯ್ಲು, ತ್ಯಾಜ್ಯ ವಿಜ್ಞಾನ–ಗಾರ್ಬೊಲೋಜಿ, ಹೊಸ ಆರ್ಥಿಕ ಅವಕಾಶಗಳಿರುವ ಶೈಕ್ಷಣಿಕ ವಲಯಗಳಾಗಿವೆ ಎಂದು ಶಿಕ್ಷಣ ನೀತಿ ಸಾರಿ ಸಾರಿ ಹೇಳತೊಡಗಿದೆ. ಪರಿಸರ

ರಕ್ಷಣೆ, ಜಲಮೂಲಗಳ ಸ್ವಚ್ಚತೆ ಮತ್ತು ರಕ್ಷಣೆ. ನೀರಿನ ಮಿತವ್ಯಯ ಶಿಕ್ಷಣದ ಅವಿಭಾಜ್ಯ ಅಂಗವಾಗಬೇಕು. ಎಂದು ಪ್ರತಿಪಾದಿಸುವ ಶಿಕ್ಷಣ ನೀತಿ ಹೊಸಪೀಳಿಗೆಯ ವಿಧ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯ ತಿಳಿವಳಿಕೆ ನೀಡುವಲ್ಲಿ ಸಮರ್ಥವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ದೇಶ ಅತ್ಯಂತ ದೊಡ್ಡ ಪ್ರಮಾಣದ ಯುವ ಪೀಳಿಗಯನ್ನು ಹೊಂದಲಿದೆ ಎಂದು ಅಂಕಿ ಸಂಖ್ಯೆಗಳು ಸಾರಿ ಹೇಳುತ್ತಿವೆ. ಈ ಬಹುದೊಡ್ಡ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸುವ ಮೂಲಕ ಭಾರತ ವಿಶ್ವ ಗುರುವಿನ ಸ್ಥಾನ ಪಡೆಯಬಲ್ಲದು, ಎಂಬ ದೇಶದ ಆಶಯಕ್ಕೆ ಅನುಗುಣವಾಗಿ ಶಿಕ್ಷಣ ರೂಪಿಸುವ ಹೊಣೆ ನಮ್ಮೆಲ್ಲರ ಮೇಲೆ ಇದೆ. ಎಂಬುದು ಗಮನಾರ್ಹ. ಮುಂದಿನ ದಿನಗಳಲ್ಲಿ ವಿಫುಲ ಅವಕಾಶ ಇರುವ ಡಿಜಿಟಲ್ ಕಾಮರ್ಸ, ಡಾಟ ಸೈನ್ಸ್, ಡಾಟ ವಿಜ್ಞಾನ, ಪ್ರತಿಭಾ ನಿರ್ವಹಣೆ, ಸೇವಾಕ್ಷೇತ್ರದ ಉದ್ಯೋಗಗಳು. ಬಳಕೆದಾರರ ಸೇವಾ ನಿರ್ವಹಣೆ, ಸಾಮಾಜಿಕ ಮುಂಖಡತ್ವ ಮುಂತಾದವು ಮುಂದಿನ ದಿನಗಳ ಹೊಸ ಉದ್ಯೋಗಳಾಗಲಿವೆ ಎಂಬ ಶಿಕ್ಷಣ ನೀತಿಯ ಧೋರಣೆ ಭಾರತೀಯ ಶೈಕ್ಷಣಿಕ ದಿಕ್ಕನ್ನು ಬದಲಿಸಲಿದೆ. ವೈಫೈ ಹಾಗೂ ಅದರ ವಿರಾಟ ಶಕ್ತಿಯನ್ನು ಶಿಕ್ಷಣದ ಪ್ರತಿಯೊಂದು ವಿಷಯದ ಭಾಗವಾಗಿಸುವ ಮೂಲಕ ಆಧುನಿಕ ಜಗತ್ತಿನ ಈ ಹೊಸ ವ್ಯಾಪಾರಿ ಕೌಶಲವನ್ನು ಕರಗತ ಮಾಡಿ ಕೊಳ್ಳುವ ಕಲೆಯನ್ನ ಹೊಸ ಪೀಳಿಗೆಯವರಿಗೆ ಕಲಿಸುವ ಅವಶ್ಯಕತೆಯನ್ನು ಶಿಕ್ಷಣ ನೀತಿ ಪ್ರತಿಪಾದಿಸುತ್ತದೆ.

ಯಾವುದೇ ವಸ್ತುವನ್ನು ಮಾರುವ ಕೊಳ್ಳುವ ಚಾಕಚಕ್ಯತೆಯನ್ನು ಹೊಂದಿರುವ ವೈಫೈ ಇವತ್ತಿನ ಬಹುದೊಡ್ಡ ವ್ಯಾಪಾರಿ ಮಾಧ್ಯಮವಾಗಿದೆ ಇದನ್ನು ಈಗ ಕೇವಲ ಕಂಪ್ಯೂಟರ್ ಸೈನ್ಸ ಓದುವ ಮಕ್ಕಳಿಗೆ ಕಲಿಸಲಾಗುತ್ತಿದೆ. ಆದರೆ ಮುಂದಿನ ದಿನಗಳಲ್ಲಿ ಬೇಡಿಕೆಯನ್ನು ಪೂರೈಸಲು ಭಾಷೆ.ಸಮಾಜ ವಿಜ್ಞಾನ. ಯೋಗ ವಿಜ್ಞಾನ, ದೈಹಿಕ ಶಿಕ್ಷಣ, ಒಕ್ಕಲುತನ, ವಾಣಿಜ್ಯ ಮುಂತಾದ ಶೈಕ್ಷಣಿಕ ವಲಯದ ವಿವಿಧ ಕ್ಷೇತ್ರಗಳಿಗು ವೈಫ್ಯ ಅಧ್ಯಯನವನ್ನು ವಿಸ್ತರಿಸುವುದು ಸ್ಥಳೀಯ ಉತ್ಪಾದನಾ ಕೇಂದ್ರಗಳಾದ ಹೈನುಗಾರಿಕೆ. ತರಕಾರಿ ಹಣ್ಣು ಹಂಪಲು ಉತ್ಪಾದನೆ. ಕೈ ಕುಸುರಿ ಕೆಲಸ, ದೇಸಿ ತಿಂಡಿ ತಿನಿಸುಗಳನ್ನು ಜಾಗತಿಕ ಮಟ್ಟದಲ್ಲಿ ಮಾರುವ ಜಾಲ ವಿಸ್ತರಿಸುವ ಮೂಲಕ ಹೊಸ ವಾಣಿಜ್ಯ ವಲಯಗಳನ್ನು ಗ್ರಾಮೀಣ ಉತ್ಪಾದನೆಗಳಿಗೆ ತೆರೆಯಲು ಸಾಧ್ಯ ಎಂಬುದನ್ನು ಈ ಮೂರು ವರ್ಷಗಳಲ್ಲಿ ನಾವು ಮನಗಂಡಿದ್ದೇವೆ ಲೋಕಲ್ ಪೇ ವೋಕಲ್ ಎನ್ನುವ ಘೋಷಣೆ ಗ್ರಾಮೀಣ ಉತ್ಪಾದನೆ ಮಾರುಕಟ್ಟೆಯನ್ನೆ ವಿಸ್ತರಿಸುವ ಹೆಬ್ಬಾಗಿಲಾಗಲಿದೆ. ಸ್ಥಳೀಯ ಉತ್ಪಾದನೆ, ಕುಸುರಿ ಕೆಲಸ, ಕಸೂತಿ, ಹೆಣಿಗೆ, ದೇಶಿ ತಿಂಡಿ ಊಟದ ಉತ್ಪಾದನೆ, ದೇಶಿ ಸಂಗೀತ, ನೃತ್ಯ ಕಲೆ, ಪೇಂಟಿಂಗ್ ಆಟಗಳು ಪಠ್ಯಪುಸ್ತಕಗಳ ಭಾಗವಾಗಬೇಕು. ಸ್ಥಳೀಯ ಕೌಶಲಗಳು, ಕುಶಲಕರ್ಮಿಗಳು ಶಾಲೆ

ಕಾಲೇಜುಗಳ ಶಿಕ್ಷಕರು ವಿಧ್ಯಾರ್ಥಿಗಳಿಗೆ ತರಬೇತಿ ಕೊಡುವಂತಾಗಬೇಕು ನಾಟಿ ವೈದ್ಯ, ಗಿಡಮೂಲಿಕೆ ಔಷಧಿ, ದೇಶಿ ತಳಿಯ ಬೀಜಗಳ ಸಂರಕ್ಷಣೆ. ಹವಾಮಾನ ವೈಪರಿತ್ಯ ತಡೆಯಬಲ್ಲ ದೇಶಿಜ್ಞಾನ ಪರಂಪರೆಯ ಭಾಗವಾಗಿವೆ.ಇಂಥ ಎಂದೂ ಅಳಿಯದ ದೇಶಿ ಪರಂಪರೆ ಶಿಕ್ಷಣದ ಭಾಗವಾಗಬೇಕು.ಅದಕ್ಕಾಗಿ ಸದಾ ಕಲಿಯಲು ಸಿದ್ದರಿರುವ, ಅನುಪಯುಕ್ತ ಹಳೆಯದನ್ನು ಮರೆತು ಹೊಸ ತಂತ್ರಜ್ಞಾನ ತಿಳುವಳಿಕೆಯ ಮರುಕಲಿಕೆಗೆ ತಯಾರಿರುವ ಶಿಕ್ಷಕರನ್ನು ತರಬೇತಿಗೊಳಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಸಂಚಲನವನ್ನು ಉಂಟುಮಾಡುವಲ್ಲಿ ಸಫಲವಾಗಿದೆ.

ದಿನದಿಂದ ದಿನಕ್ಕೆ ಬದಲಾಗುತ್ತಿರುವ ತಂತ್ರಜ್ಞಾನ ಔಷಧ ವಿಜ್ಞಾನ, ವಿಜ್ಞಾನದ ಮುಂದೆ ಬದಲಾಗಲಿರುವ ಜಾಡನ್ನು ಗುರುತಿಸುವುದು, ಆ ಬದಲಾವಣೆಗೆ ತಕ್ಕಂತೆ ಶಿಕ್ಷಕರನ್ನು ಈ ಹೊಸ ಸವಾಲನ್ನು ಸ್ವೀಕರಿಸಲು ತಯಾರುಗೊಳಿಸುವುದು. ಈ ಬದಲಾವಣೆಗೆ ತಕ್ಕ ಪಠ್ಯಕ್ರಮ. ತರಬೇತಿ ತಮ್ಮನ್ನು ತಾವು ಬದಲಾಯಿಸಿಕೊಳ್ಳುವ ಮರು ಕಲಿಕೆಗೆ ತಯಾರಾಗುವ ಯುವ ಪೀಳಿಗೆಯನ್ನು ತಯಾರಿಸುವುದು ಶಿಕ್ಷಣ ನೀತಿಯ ಆಶಯಗಳಲ್ಲಿ ಒಂದು. ಭವಿಷ್ಯದ ಕೌಶಲಗಳು, ಎಂಥ ಬಿಕ್ಕಟ್ಟು ಎದುರಾದರೂ ಅದನ್ನು ಅವಕಾಶವಾಗಿ ಪರಿವರ್ತಿಸುವ ಚಾಕ ಚಕ್ಯತೆಯನ್ನು ಯುವ ಪೀಳಿಗೆಯಲ್ಲಿ ತುಂಬುವುದು ಹಾಗೂ ದೇಶಿಯ ತಂತ್ರಜ್ಞಾನ, ಸ್ಥಳೀಯ ಜನರ ಶಕ್ತಿಯನ್ನು ಸ್ಥಳೀಕವಾಗಿ ಬಳಸಿಕೊಂಡು ಹೊಟ್ಟೆ ಪಾಡಿಗಾಗಿ ವಲಸೆ ಹೋಗುವುದನ್ನು ತಪ್ಪಿಸುವುದು ಶಿಕ್ಷಣದ ಗುರಿಯಾಗಬೇಕೆಂಬುದು ಆಧುನಿಕ ಶಿಕ್ಷಣ ಪದ್ದತಿಯ ಪ್ರಮುಖ ಕಾಳಜಿ. ಈ ದೇಶಿಯ ಕಾಳಜಿಗೆ ತಕ್ಕಂತ ಶೈಕ್ಷಣಿಕ ವಾತಾವರಣ ನಿರ್ಮಿಸುವಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಸಫಲವಾಗಿದೆ ಎಂಬುದು ಅತಿಶಯೋಕ್ತಿಯಲ್ಲ.

ಅಂತಿಮವಾಗಿ ಶಿಕ್ಷಣದ ಉದ್ದೇಶ ಜ್ಞಾನಕ್ಕಾಗಿ ಶಿಕ್ಷಣ ಇದರ ಆಧಾರದ ಮೇಲೆಯೇ ಜೀವನಾಧಾರಿತ ಶಿಕ್ಷಣವನ್ನು ನೀಡಿದರೆ ಅಂದರೆ, ಹೊಟ್ಟೆ ಹಸಿವನ್ನು ನೀಗಿಸುವ ಶಿಕ್ಷಣವನ್ನು ನೀಡುವಂತಾದರೆ ಅದನ್ನು ನಿಜವಾದ ಶಿಕ್ಷಣ ಎಂದೂ ಹಾಗೂ ಅದನ್ನು ಪಡೆಯಲು ಮುಂದಿನ ಮಾರ್ಗಗಳನ್ನು/ಅವಕಾಶಗಳನ್ನು ನಾವು ಶಿಕ್ಷಣದ ಆಯಾಮಗಳಲ್ಲಿ ತೆರೆದಿಡುವ ಮೂಲಕ ಪ್ರತಿಯೊಬ್ಬರೂ ಸ್ವಾಭಿಮಾನದಿಂದ ಜೀವನವನ್ನು ನಡೆಸುವಂತಾಗಬೇಕೆಂಬುದೇ ಹೊಸ ರಾಷ್ಟ್ರೀಯ ಶಿಕ್ಷಣದ ಪ್ರಮುಖ ಉದ್ದೇಶ.

# ಕನ್ನಡದ ಮೊದಲ ಪ್ರಾಧ್ಯಾಪಕ ತಳುಕಿನ ವೆಂಕಣ್ಣಯ್ಯ

**ಮರೀಸ್ವಾಮಿ,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ತಳುಕಿನ ಸುಬ್ಬಣ್ಣ ವೆಂಕಣ್ಣಯ್ಯನವರು (ಟಿ.ಎಸ್. ವೆಂಕಣಯ್ಯ) ಕನ್ನಡದ ಮೊದಲ ಪ್ರಾಧ್ಯಾಪಕರು. ಅಲ್ಲಿಯವರೆವಿಗೆ ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆಯಲು ಮದರಾಸಿಗೆ (ಈಗಿನ ಚೆನ್ನೈ) ಹೋಗಬೇಕಿತ್ತು. ಡಿ.ವಿ.ಜಿ. ಯವರು ಹೆಸರಿಸಿರುವ ಕನ್ನಡದ ಮೂವರು ಮೇರು ಗಿರಿಗಳಲ್ಲಿ ತಳುಕಿನ ವೆಂಕಣ್ಣಯ್ಯನವರು ಮೊದಲಿಗರು. ಟಿ.ಎಸ್.ವಿ ಮತ್ತು ಎ.ಆರ್. ಕೃಷ್ಣ ಶಾಸ್ತ್ರೀಗಳನ್ನು ಆಧುನಿಕ ಕನ್ನಡ ಸಾಹಿತ್ಯದ ಅಶ್ವಿನಿಕುಮಾರರೆಂದು ಕರೆಯುತ್ತಿದ್ದರು. ಇವರು ಪ್ರಾರಂಭಿಸಿದ ಕನ್ನಡ ಎಂ.ಎ. ತರಗತಿಯ ಪ್ರಥಮ ಬ್ಯಾಚಿನಲ್ಲಿದ್ದವರುಗಳಲ್ಲಿ ಒಬ್ಬರು ಕುವೆಂಪುರವರು. ಪುಟ್ಟಪ್ಪನವರು ತಮ್ಮ ಗುರುಗಳನ್ನು ದೇವರೆಂದೇ ತಿಳಿದಿದ್ದರಂತೆ.

**ಇವರ ಜೀವನ :**

ಟಿ.ಎಸ್.ವೆಂಕಣ್ಣಯ್ಯನವರು 1885 ಅಕ್ಟೋಬರ್ 1ರಂದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಬಳಿಯಲ್ಲಿದ್ದ ತಳುಕು ಗ್ರಾಮದಲ್ಲಿ ಜನಿಸಿದರು. ತಂದೆ ದೊಡ್ಡ ಸುಬ್ಬಣ್ಣನವರು. ತಾಯಿ ಮಹಾಲಕ್ಷ್ಮಮ್ಮನವರು. ತಂದೆ ಶ್ರೀ ರಾಮ ಭಕ್ತರು ಮತ್ತು ಚುಟುಕಗಳನ್ನು ರಚಿಸುವುದರಲ್ಲಿ ಪರಿಣಿತರಾಗಿದ್ದವರು. ತೆಲುಗಿನಲ್ಲಿ ಮತ್ತು ಕನ್ನಡದಲ್ಲಿ ಚುಟುಕಗಳನ್ನು ಹೊಸೆಯುತ್ತಿದ್ದರಂತೆ. ಕೊಡುಗೈ ದಾನಿ ಸುಬ್ಬಣ್ಣನವರು. ಮನೆಯ ಒಳಗೆ ಏನಿದೆ ಏನಿಲ್ಲ ಎಂಬುದರ ಬಗ್ಗೆ ಚಿಂತೆಯಿಲ್ಲ. ಮನೆ ಮುಂದೆ ಬಂದವರಿಗೆ ಒಂದು ತುತ್ತು ಊಟ ಹಾಕದೆಯೇ ಕಳುಹಿಸುತ್ತಿರಲಿಲ್ಲವಂತೆ. ಟಿ.ಎಸ್.ವಿ.ರವರು ಬಹಳ ಚಿಕ್ಕ ವಯಸ್ಸಿಗೇ ಅಂದ್ರೆ 55 ತುಂಬುವ ವೇಳೆಗೆ 1939ರಲ್ಲಿ ಇಹಲೋಕ ತ್ಯಜಿಸಿದರು.

ನೋಡಲು ಎತ್ತರದ ಆಳು, ಟಿ.ಎಸ್.ವಿ.ಯವರು. ಚಿತ್ರದುರ್ಗದಲ್ಲಿ ವಿದ್ಯಾಭ್ಯಾಸ ಮುಗಿಸಿದ ವೆಂಕಣ್ಣಯ್ಯನವರು ಮೈಸೂರಿನಲ್ಲಿ ಓದಿ ಬಿ.ಎ. ಪದವಿ ಸಂಪಾದಿಸಿದರು. ಅನಂತರ ಮುಂಬಯಿಗೆ ತೆರಳಿ ಸ್ವಲ್ಪ ಸಮಯ ಕಾನೂನು ವ್ಯಾಸಂಗ ಮಾಡಿದರು. ಬಿ.ಎ. ಮುಗಿಸಿದ ತರುವಾಯ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ವಿಷಯದಲ್ಲಿ ಎಂ.ಎ. ಮಾಡಿ ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದರು. ತಮ್ಮ ಶಿಷ್ಯರೆಲ್ಲರನ್ನೂ ತಮ್ಮ ಮಕ್ಕಳಂತೆ ಕಂಡು, ಕೈಲಾಗದವರಿಗೆ ಊಟ

ವಸತಿಗಳನ್ನೂ ಕೊಟ್ಟು ಪಾಠ ಹೇಳಿಕೊಟ್ಟರು. ಕನ್ನಡ ಎಂ.ಎ. ನ ಮೊದಲನೆಯ ಬ್ಯಾಚಿನಲ್ಲಿ ಕುವೆಂಪು ಸೇರಿದಂತೆ ಹಲವರಿದ್ದರು. ಎಲ್ಲರನ್ನೂ ತಮ್ಮ ಮನೆಗೆ ಕರೆದೊಯ್ದು ಊಟ ಹಾಕಿ, ಪಾಠ ಹೇಳಿಕೊಟ್ಟವರು. ಅವರಂತೆಯೇ ಅಷ್ಟೇ ಎತ್ತರಕ್ಕೇರಿದವರು. ಅವರ ತಮ್ಮಂದಿರಲ್ಲೊಬ್ಬರಾದ ತ.ಸು.ಶಾಮರಾಯರು. ಅವರಲ್ಲೂ ಇದೇ ಗುಣವನ್ನು ಕಂಡು, ಅವರ ಶಿಷ್ಯರಾಗಿದ್ದ ಜಿ.ಎಸ್.ಶಿವರುದ್ರಪ್ಪನವರು ಅವರ ಬಗ್ಗೆ ಒಂದು ಕವನವನ್ನೇ ರಚಿಸಿದ್ದರು. ಅದು ಬಹಳ ಜನಪ್ರಿಯವೂ ಹೌದು. ಅದೇ –

ಎದೆ ತುಂಬಿ ಹಾಡಿದೆನು ಅಂದು ನಾನು ।
ಮನವಿಟ್ಟು ಕೇಳಿದಿರಿ ಅಲ್ಲಿ ನೀವು ॥

ಇಂದು ನಾ ಹಾಡಿದರೂ, ಅಂದಿನಂತೆಯೆ ಕುಳಿತು ।
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ ।
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ? ॥

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ ।
ಹಾಡುವುದು ಅನಿವಾರ್ಯ ಕರ್ಮ ನನಗೆ ।
ಕೇಳುವವರಿಹರೆಂದು ನಾ ಬಲ್ಲೆ ಅದರಿಂದ ।
ಹಾಡುವೆನು ಮೈದುಂಬಿ ಎಂದಿನಂತೆ ।
ಯಾರು ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ ॥

ವೆಂಕಣ್ಣಯ್ಯನವರು ಕೆಲಕಾಲ ಅಂಚೆ ಕಚೇರಿಯಲ್ಲಿ ಕೆಲಸ ಮಾಡಿದರು. ಆ ಮೇಲೆ ದೊಡ್ಡಬಳ್ಳಾಪುರದಲ್ಲಿ ಶಿಕ್ಷಕರದರು. ಬೆಂಗಳೂರಿನ ಕ್ಯಾಂಟೋನ್ಮೆಂಟ್ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅನಂತರ ಮೂರು ವರ್ಷ ಕಾಲ ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಬಳಿಕ ಬೆಂಗಳೂರಿನ ಸೆಂಟ್ ಜೋಸೆಫ್ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ, 1919ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಹಾಗು 1927ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾದರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲ ಕನ್ನಡ ಪ್ರೋಫೇಸರ್ ಎಂಬ ಖ್ಯಾತಿಗೆ ಭಾಜನರಾಗಿದ್ದಾರೆ.


ISBN : 979-889233259-0

ಇವರ ಮನೆಯಲ್ಲಿ ಪ್ರತಿನಿತ್ಯವೂ ಸಾಹಿತ್ಯ ಗೋಷ್ಠಿ ನಡೆಯುತ್ತಿತ್ತಂತೆ. ಅದರಲ್ಲಿ ಪಾಲ್ಗೊಳ್ಳುತ್ತಿದ್ದವರಲ್ಲಿ ಬಿ.ಎಂ.ಶ್ರೀ, ತೀ.ನಂ.ಶ್ರೀ, ಎ.ಆರ್.ಕೃ ಮುಂತಾದವರನ್ನು ಹೆಸರಿಸಬಹುದು. ಡಿ. ವಿ. ಗುಂಡಪ್ಪನವರು ಮಂಕುತಿಮ್ಮನ ಕಗ್ಗದ ಮುಖಪುಟದಲ್ಲಿ ಟಿ.ಎಸ್.ವಿ, ಎ.ಆರ್.ಕೃ ಮತ್ತು ಮೋಕ್ಷಗುಂಡಂ ಕೃಷ್ಣಮೂರ್ತಿಗಳನ್ನು (ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಾಕು ಮಗ) ಮೂವರು ಮೇರು ಪರ್ವಗಳೆಂದು ಹೆಸರಿಸಿದ್ದಾರೆ. ಇವರ ಮನೆಯಲ್ಲಿ ನಡೆಯುತ್ತಿದ್ದ ಸಾಹಿತ್ಯ ಗೋಷ್ಠಿಯಲ್ಲಿ ಟಿ.ಎಸ್.ವಿ.ಯವರು ಎಷ್ಟರ ಮಟ್ಟಿಗೆ ತಲ್ಲೀನರಾಗುತ್ತಿದ್ದರೆಂದರೆ, ಒಮ್ಮೆ ಅವರ ನವಜಾತ ಕೂಸು ಮರಣ ಹೊಂದಿ ಮನೆಯವರೆಲ್ಲರೂ ಗೋಳೋ ಎಂದು ಅಳುತ್ತಿದ್ದರೆ, ಒಳಗೆ ಹೋಗಿ ಮತ್ತೆ ಬಂದು ಸಾಹಿತ್ಯ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರಂತೆ. ಅದಕ್ಕೆ ಅಲ್ಲಿದ್ದ ಒಬ್ಬರು ಯಾರೋ ಹೇಳಿದ್ದರಂತೆ, 'ಒಳಗೆ ಅಳುತ್ತಿದ್ದಾರೆ, ಏನೋ ಅಚಾತುರ್ಯವಾಗಿದೆ, ನೀವು ನೋಡುವುದಿಲ್ಲವೇ?'. ಅದಕ್ಕವರು ಎಲ್ಲ ದೈವನಿಯಾಮಕ – ನಡೆಯುವುದೆಲ್ಲವೂ ನಡೆಯುತ್ತಲೇ ಇರುತ್ತದೆ ಎಂದಿದ್ದರಂತೆ. ಎಂದಿಗೂ ಹೆಚ್ಚಿನ ಸಂತೋಷ ಅಥವಾ ದು:ಖ ವ್ಯಕ್ತಪಡಿಸದ ವ್ಯಕ್ತಿತ್ವ ಅವರದ್ದು.

ವೆಂಕಣ್ಣಯ್ಯನವರು ತಮ್ಮ ಅಮೋಘ ವ್ಯಕ್ತಿತ್ವಕ್ಕೆ ಹೆಸರಾಗಿದ್ದರು. ನಿರ್ಲಿಪ್ತತೆ, ನಿಸ್ಪೃಹತೆ, ಮಾನವೀಯ ಗುಣಗಳಿಗೆ ಅವರು ಮಾದರಿಯಾಗಿದ್ದರು. ಸಾಹಿತ್ಯಾಸಕ್ತಿ, ಇನ್ನೊಬ್ಬರಲ್ಲಿರುವ ಸಾಹಿತ್ಯಾತ್ಮಕ ಶಕ್ತಿಯನ್ನು ಗುರುತಿಸಿ ಅವರನ್ನು ಬೆಳೆಸುವಲ್ಲಿ ವೆಂಕಣ್ಣಯ್ಯನವರು ಅಗ್ರಗಣ್ಯರು. ಬಿಎಂಶ್ರೀ ಅವರೇ ಹೇಳುವಂತೆ ವೆಂಕಣ್ಣಯ್ಯನವರು ನಿಧನರಾದಾಗ "ನಾವು ಆಶ್ರಯ ಪಡೆದಿದ್ದ ಹಡಗು ಮುಳುಗಿತು" ಎಂದು ಕಂಬನಿ ಮಿಡಿದಿದ್ದಾರೆ. ಅವರ ಜೀವನಶೈಲಿ ಇತರರಿಗೆ ಮಾರ್ಗದರ್ಶನವಾಗಿತ್ತು. ಭಗವದ್ಗೀತೆಯನ್ನು ಓದಿ ಅದರಂತೆ ನಡೆದ ವಿಶಿಷ್ಟ ವ್ಯಕ್ತಿ ವೆಂಕಣ್ಣಯ್ಯನವರು.

ಒಮ್ಮೆ ಒಬ್ಬರು ಸ್ವಾಮಿಗಳು ಅವರಿಗೆ ಹೇಳಿದ್ದರಂತೆ – ವೆಂಕಣ್ಣಯ್ಯ ನಿನಗೆ ಪುನರ್ಜನ್ಮವಿಲ್ಲ ಎಂದು. ಅದೆಷ್ಟರ ಮಟ್ಟಿಗೆ ಸತ್ಯವೋ ಬಲ್ಲವರಾರು? ಆದರೆ ಆ ಆತ್ಮದ ನಿರ್ಲಿಪ್ತತೆಯನ್ನು ನೋಡಿದರೆ ಆತ್ಮದ ಬಗ್ಗೆ ನಂಬಿಕೆ ಇರುವವರು ಈ ಮಾತುಗಳನ್ನು ನಂಬುವರೇನೋ.

ಹಾಗೆಯೇ ತಮಾಷೆಗಾಗಿ ಒಮ್ಮೆ ಕೈಲಾಸಂರವರು ಇವರ ಎತ್ತರವನ್ನು ಚುಡಾಯಿಸಲು, 'ಸಾರ್ ಅಲ್ಲೇ ಮೇಲೆ ಸ್ವರ್ಗದಲ್ಲಿ ನನ್ನ ಪೂರ್ವಜರು ಕ್ಷೇಮವೇ ಸ್ವಲ್ಪ ನೋಡಿಬಿಡಿ', ಎಂದಿದ್ದರಂತೆ.


ISBN : 979-889233259-0

**ಇವರು ರಚಿಸಿದ ಕೃತಿ :**

ಶ್ರೀ ರಾಮಕೃಷ್ಣ ಪರಮಹಂಸರ ಚರಿತ್ರೆ (ಎ.ಆರ್.ಕೃಷ್ಣಶಾಸ್ತ್ರಿಗಳ ಜೊತೆಗೆ)

**ಲೇಖನ ಸಂಕಲನ ಕೃತಿ :**

ಕನ್ನಡ ಸಾಹಿತ್ಯ ಮತ್ತು ಇತರ ಲೇಖನಗಳು

**ಅನುವಾದ ಕೃತಿ :**

ಶ್ರೀ ರಾಮಕೃಷ್ಣ ಪರಮಹಂಸರ ಲೀಲಾ ಪ್ರಸಂಗ (ಬಂಗಾಲಿಯಿಂದ)

**ಸಂಪಾದಿತ ಕೃತಿಗಳು :**

- ಬಸವದೇವರಾಜ ರಗಳೆ
- ಕರ್ನಾಟಕ ಕಾದಂಬರಿ ಸಂಗ್ರಹ
- ಹರಿಶ್ಚಂದ್ರ ಕಾವ್ಯ ಸಂಗ್ರಹ
- ಕುಮಾರವ್ಯಾಸ ಭೀಷ್ಮಪರ್ವ ಸಂಗ್ರಹ (ಡಿ.ಎಲ್.ಎನ್. ಜೊತೆಗೆ)
- ಸಿದ್ಧರಾಮ ಚಾರಿತ್ರ್ಯ (ಡಿ.ಎಲ್.ಎನ್. ಜೊತೆಗೆ)

ಹೀಗೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದ್ರುವ ತಾರೆಯಂತೆ ಬೆಳಗಿ ಮರೆಯಾದ ಟಿ ಎಸ್ ವೆಂಕಣ್ಣಯ್ಯನವರು ಎಲ್ಲಾ ಸಾಹಿತ್ಯಾಸಕ್ತರಿಗೆ ಪ್ರೇರಣೆಯಾಗಿದ್ದಾರೆ.

***

## ಕನ್ನಡದ ಪ್ರಶಸ್ತಿಗಳು

**ರಫೀ ದೊಡ್ಮನಿ**
ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಭಾಷೆ ಸಂವಾಹನದ ವಾಹಕ. ಅದು ಇಲ್ಲದೆ ಯಾವುದೇ ಒಂದು ಪ್ರಾಣಿ ಸಂವಾಹಿಸಲು ಸಾಧ್ಯವಿಲ್ಲ. ಮಾನವ ಇತರೆ ಪ್ರಾಣಿಗಳಿಗಿಂತ ಭಿನ್ನ ರೀತಿಯ ಸಂವಾಹನದ ಮೂಲಕ ಮತ್ತೊಬ್ಬ ಮಾನವನೊಡನೆ ಸಂವಾಹಿಸಲು ವಿಶಿಷ್ಟವಾದ ಭಾಷೆಗಳನ್ನು ರೂಪಿಸಿಕೊಂಡಿದ್ದಾನೆ. ಭಾಷೆ ಎಂಬುವುದು ಕೇವಲ ಸಂವಾಹನಕ್ಕೆ ಅವಶ್ಯವಾದ ಮಾಧ್ಯಮವೆ ಆದರೂ, ವ್ಯಕ್ತಿಯ ಭಾವನೆಗಳು ಹೊರ ಹೊಮ್ಮಲು ಇರುವ ವಾಹಕವೂ ಸಹ

ಆಗಿದೆ. ಪ್ರಪಂಚದಲ್ಲಿ, ಅನೇಕ ಜನರು ನಿರ್ದಿಷ್ಟವಾದ ಪ್ರದೇಶದೊಳಗೆ ಒಂದು ನಿರ್ದಿಷ್ಟವಾದ ಭಾಷೆಯ ಮೂಲಕ ದೈನಂದಿನ ಚಟುವಟಿಕೆಗಳಿಗಾಗಿ ಮಾತು, ಬರಹಗಳ ಮೂಲಕ ವ್ಯವಹರಿಸುತ್ತಿದ್ದಾರೆ. ಇಂತಹ ಭಾಷೆಗಳಲ್ಲಿ ಕನ್ನಡವೂ ಸಹ ಒಂದು.

'ನಾಡು' ಎಂದರೆ, ಒಂದು ಬೌಗೋಳಿಕ ಸೀಮೆ ಎಂದು. 'ನುಡಿ' ಎಂದರೆ, ಅಭಿವ್ಯಕ್ತಿಗೆ, ಹಾಗುತನ್ನಂತಿರುವ ಜೀವಿಯೊಡನೆ ಸಂವಾಹನಕ್ಕಾಗಿ ಬಳಸುವ ಮಾಧ್ಯಮ ಎಂದು. ಇಂತಹ ಮಾಧ್ಯಮಗಳಲ್ಲಿ ಒಂದು ದ್ರಾವಿಡ ಭಾಷೆಗಳಲ್ಲಿ ಬಹಳ ಹಳೆಯದರಲ್ಲಿ ಒಂದಾದ ಕನ್ನಡ ಭಾಷೆ. ಇಂದು ವಿವಿಧ ರೂಪಗಳಲ್ಲಿ ಸುಮಾರು 45 ದಶಲಕ್ಷ ಜನರು ಆಡುನುಡಿಯಾಗಿ ಬಳಸುತ್ತಿದ್ದಾರೆ.

ನಮ್ಮ 'ಕನ್ನಡ' ಭಾಷೆಯು ಭಾರತದ 22 ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ. ಒಂದು ಬೌಗೋಳಿಕ ಎಲ್ಲೆಯೊಳಗೆ ಜನರು ಹೊಂದಿರುವ ಸಂಸ್ಕೃತಿ ಉಳಿಯ ಬೇಕೆಂದರೆ ಆ ಎಲ್ಲೆಯೊಳಗಿನ ಭಾಷೆ ಅಸ್ತಿತ್ವದಲ್ಲಿರಲೇಬೇಕು. ಕನ್ನಡ ಭಾಷೆ ಇಂದು ಇಂಗ್ಲೀಷಿನ ವ್ಯಾಪಕ ಬಳಕೆಯಿಂದಾಗಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಈ ಪ್ರಬಂಧದಲ್ಲಿ ಕನ್ನಡ ನಾಡ ನುಡಿಯ ರಕ್ಷಣೆ, ಸವಾಲು ಮತ್ತು ವಿವಿಧ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಯ ಬಗ್ಗೆ ಬರೆಯಲಾಗಿದೆ.

**ಕನ್ನಡ ಪ್ರಶಸ್ತಿಗಳು**

- **ಕರ್ನಾಟಕ ರತ್ನ**

ಕರ್ನಾಟಕ ರತ್ನ ಪ್ರಶಸ್ತಿಯು ರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾಗಿದೆ. ಕರ್ನಾಟಕ ರತ್ನ ಪ್ರಶಸ್ತಿಯನ್ನು ಪಡೆಯುವವರಿಗೆ 50 ಗ್ರಾಂ ತೂಕದ ಚಿನ್ನದ ಪದಕ, ನೆನಪಿನ ಕಾಣಿಕೆ ನೀಡಿ ಶಾಲನ್ನು ಹೋಲಿಸಿ ಗೌರವಿಸಲಾಗುತ್ತದೆ. ಕರ್ನಾಟಕ ರತ್ನ ಪ್ರಶಸ್ತಿಯನ್ನು ಇವರಿಗೆ 9 ಸಾಧಕರಿಗೆ ನೀಡಲಾಗಿದೆ. ಕರ್ನಾಟಕ ರತ್ನ ಪ್ರಶಸ್ತಿಯನ್ನು ಮೊದಲ ಬಾರಿಗೆ 1991ರಲ್ಲಿ ಆರಂಭಿಸಲಾಯಿತು.

- **ರಾಜ್ಯೋತ್ಸವ ಪ್ರಶಸ್ತಿ**

ರಾಜ್ಯೋತ್ಸವ ಪ್ರಶಸ್ತಿ ಕರ್ನಾಟಕ ಸರ್ಕಾರದ ವತಿಯಿಂದ ನೀಡಲಾಗುವ ಎರಡನೆಯ ಅತ್ಯುನ್ನತ ನಾಗರಿಕ ಪ್ರಶಸ್ತಿ, ವಿವಿಧ ಕ್ಷೇತ್ರಗಳ ಗಣ್ಯರನ್ನು ಆಯ್ದು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ರಾಜ್ಯೋತ್ಸವ ಪ್ರಶಸ್ತಿಯನ್ನು ಪ್ರತಿವರ್ಷ ನವೆಂಬರ್ ಒಂದರಂದು ಬೆಂಗಳೂರಿನಲ್ಲಿ ಕರ್ನಾಟಕ ಮುಖ್ಯಮಂತ್ರಿಗಳು ಪ್ರಧಾನ ಮಾಡುತ್ತಾರೆ.

- **ಬಸವ ಪುರಸ್ಕಾರ ರಾಷ್ಟ್ರೀಯ ಪ್ರಶಸ್ತಿ**

ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿ ಕೊಂಡವರಿಗೆ ಮಹಾನ್ ಮಾನವತವಾದಿ ಬಸವಣ್ಣನವರ ಹೆಸರಿನಲ್ಲಿ ಬಸವ ಪುರಸ್ಕಾರ ಎಂಬ ರಾಷ್ಟ್ರೀಯ ಪುರಸ್ಕಾರ ನೀಡಿ ಗೌರವಿಸಲಾಗುವುದು. ಪ್ರಶಸ್ತಿಯು ಫಲಕ, ಶಾಲು, ಹಾರ ಹಾಗೂ 10 ಲಕ್ಷಗಳ ನಗದನ್ನು ಒಳಗೊಂಡಿರುತ್ತದೆ.

- **ಟೀ ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ**

ಉಚಿತ ಕನ್ನಡ ಯುನಿಕೋಡ್ ಫಾಂಟ್ ಗಳು ಪಿಟೀಲು ನುಡಿಸುವುದರಲ್ಲಿ ಅಪೂರ್ವ ಸಾಧನೆಗೈದು ಪಿಟೀಲು ಚೌಡಯ್ಯ ಎಂದೇ ಪ್ರಸಿದ್ಧ ಖ್ಯಾತಿ ಗಳಿಸಿದ್ದ ಕರ್ನಾಟ ಹೆಮ್ಮೆಯ  ವಾದಕಾರರಾದ ಚೌಡಯ್ಯನವರ ಹೆಸರಿನಲ್ಲಿ ಸ್ಥಾಪಿಸಲಾಗಿರುವ ರಾಜ್ಯಮಟ್ಟದ ಪ್ರಶಸ್ತಿ ಇದಾಗಿದೆ.

- **ಕನಕಶ್ರೀ ಪ್ರಶಸ್ತಿ**

ಕನಕದಾಸರ ಸಾಹಿತ್ಯ, ಜೀವನ ಮತ್ತು ಸಂದೇಶಗಳ ಕುರಿತು ಅನನ್ಯ ಸೇವೆಯ ಸಲ್ಲಿಸಿದವರನ್ನು ಗೌರವಿಸಲು ಕರ್ನಾಟಕ ಸರ್ಕಾರವು 2018 ರಿಂದ ಕನಕಶ್ರೀ ಪ್ರಶಸ್ತಿಯನ್ನು ನೀಡುತ್ತಿದೆ. ಪ್ರಶಸ್ತಿಯು 5 ಲಕ್ಷ ನಗದು ಕನಕದಾಸರ ಕಂಚಿನ ಪುತ್ಥಳಿ ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡಿದೆ.

- **ಶ್ರೀ ನಿಜಗುಣ ಪುರಂದರ ಪಪ್ರಶಸ್ತಿ**

ಈ ಪ್ರಶಸ್ತಿಯನ್ನು ಕರ್ನಾಟಕ ಸಂಗೀತ ಹಾಗೂ ಹಿಂದುಸ್ಥಾನ ಸಂಗೀತ ಗಾಯನ ಮತ್ತು ವಾದ್ಯ ಪರಿಕರಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿದವರನ್ನು ಆಯ್ಕೆ ಮಾಡಲಾಗುತ್ತದೆ. ಈ ಪ್ರಶಸ್ತಿಯು ಪ್ರಶಸ್ತಿ ಪುತ್ತಳಿ, ಫಲಕ ಶಾಲು, ಹಾರ ಹಾಗೂ ಐದು ಲಕ್ಷಗಳ ನಗದ ಒಳಗೊಂಡಿರುತ್ತದೆ.

- **ಡಾ, ಗುಬ್ಬಿ ವೀರಣ್ಣ ಪ್ರಶಸ್ತಿ**

ರಂಗಭೂಮಿಯ ಮೇಲೆ ಮಾತಾಗಿದ್ದ ಮಹನೀಯರ ಸ್ಮರಣಾರ್ಥ ರಂಗಭೂಮಿಗೆ ಶ್ರಮಿಸಿದ ಶ್ರೇಷ್ಠ ನಾಟಕಗಾರರನ್ನು ಗುರುತಿಸಿ ಆ ಕ್ಷೇತ್ರದ ಅತ್ಯಂತ ಪ್ರಶಸ್ತಿ ನೀಡಬೇಕೆಂದು ಶ್ರೀಯುತದ ಹೆಸರಿನಲ್ಲಿ 1993ರಲ್ಲಿ ವೀರಣ್ಣ ಪ್ರಶಸ್ತಿಯನ್ನು ಸ್ಥಾಪಿಸಲಾಯಿತು. ಪ್ರಶಸ್ತಿ ಪುತ್ತಳಿ, ಫಲಕ, ಶಾಲು, ಹಾರ ಹಾಗೂ ಐದು ಲಕ್ಷಗಳ ನಗದನ್ನು ಒಳಗೊಂಡಿರುತ್ತದೆ.

- **ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ**

ನಾಡಿನ ಚಿತ್ರಕಲೆಯನ್ನು ವಿಖ್ಯಾತ ಗೊಳಿಸಿದ ಶ್ರೇಷ್ಠ ಚಿತ್ರಕಲ ವಿದರ ನಾಡಿದು, ಈ ಕ್ಷೇತ್ರದ ಹಿರಿಯ ಕಲಾವಿದರಿಗೆ ಪುರಸ್ಕರಿಸುವ ಉದ್ದೇಶದಿಂದ ಕನ್ನಡ ನಾಡಿನ ಹೆಮ್ಮೆಯ ಕಲಾವಿದ ದಿ,ವರ್ಣಶಿಲ್ಪಿ


ISBN : 979-889233259-0

ವೆಂಕಟಪ್ಪನವರ ಹೆಸರಿನಲ್ಲಿ 1993 ರಿಂದ ಸ್ಥಾಪಿಸಲಾಗಿರುವ ಪ್ರಶಸ್ತಿ. ಪ್ರಶಸ್ತಿಯು ಪ್ರಶಸ್ತಿ ಪುತ್ಥಳಿ, ಫಲಕ ಶಾಲು, ಹಾರ ಹಾಗೂ 5 ಲಕ್ಷಗಳನ್ನು ಒಳಗೊಂಡಿರುತ್ತದೆ.

- **ಜಾನಪದ ಶ್ರೀ ಪ್ರಶಸ್ತಿ**

ಎಲ್ಲ ಶಾಸ್ತ್ರೀಯ ಕಲೆಗಳ ಮೂಲ ಜಾನಪದದಲ್ಲಿಯೇ ಎಂಬುದು ವಿದ್ವಾಂಸರ ಅಭಿಪ್ರಾಯ, ಇಂತ ಜನಪದ ಕಲೆಗಳಿಗೆ ಮಾಧ್ಯಮವಾಗುತ್ತಾ ಪೂಜಿಸಿಕೊಂಡು ಬಂದ ಹಿರಿಯ ಕಲಾವಿದರಿಗೆ ಪ್ರತಿ ವರ್ಷ ನೀಡಲಾಗುವ ಜಾನಪದ ಶ್ರೀ ಪ್ರಶಸ್ತಿಯು 1994 ರಲ್ಲಿ ಸ್ಥಾಪನೆಗೊಂಡಿತು ಪ್ರಶಸ್ತಿಯು ಪ್ರಶಸ್ತಿ ಪುತ್ತಳಿ, ಪಲಕ ಶಾಲು ಹಾರ ಹಾಗೂ 5 ಲಕ್ಷಗಳ ನಗದನ್ನು ಒಳಗೊಂಡಿರುತ್ತದೆ.

- **ಶಾಂತಲಾ ನಾಟ್ಯ ಪ್ರಶಸ್ತಿ**

ನೃತ್ಯ ಕ್ಷೇತ್ರಕ್ಕೆ ಅವಳ ಕಾಣಿಕೆ ಅಅದ್ವಿತೀಯ,ಇವಳ ಹೆಸರಿನಲ್ಲಿ ಇವರ ಹೆಸರಿನಲ್ಲಿ ನೃತ್ಯ ಕ್ಷೇತ್ರಕ್ಕೆ ಪ್ರಶಸ್ತಿ ನೀಡಲು 1995 ರಲ್ಲಿ ಸರ್ಕಾರ ನಿರ್ಧರಿಸಿತು. ಪ್ರಶಸ್ತಿಯು ಪ್ರಶಸ್ತಿ ಪುತ್ತಳಿ, ಫಲಕ, ಶಾಲು, ಹಾರ ಹಾಗೂ 5 ಲಕ್ಷಗಳ ನಗದು ಒಳಗೊಂಡಿರುತ್ತದೆ.

- **ಜಕಣಾಚಾರಿ ಪ್ರಶಸ್ತಿ**

ಜಕಣಾಚಾರಿ ಪ್ರಶಸ್ತಿ ಕರ್ನಾಟಕದ ರಾಜ್ಯ ಪ್ರಶಸ್ತಿಯಾಗಿದ್ದು, ಶಿಲ್ಪ ಕಲೆ ಮತ್ತು ಕರಕುಶಲ ಕಲೆಯಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು ಪ್ರತಿವರ್ಷ ಕರ್ನಾಟಕ ಸರ್ಕಾರದಿಂದ ಶ್ರೇಷ್ಠ ಶಿಲ್ಪಿ ಅಮರಶಿಲ್ಪಿ ಜಕಣಾಚಾರಿ ಅವರ ಕೊಡುಗೆಯನ್ನು ಸ್ಮರಿಸಲು ನೀಡಲಾಗುತ್ತದೆ.

- **ಸಂತ ಶಿಶುನಾಳ ಶರೀಫ ಪ್ರಶಸ್ತಿ**

ಸಂತ ಶಿಶುನಾಳ ಶರೀಫ ಪ್ರಶಸ್ತಿಯನ್ನು ನೀಡಲು 1995 ರಲ್ಲಿ ಸರ್ಕಾರ ನಿರ್ಧರಿಸಿತು. ಪ್ರಶಸ್ತಿಯು ಪ್ರಶಸ್ತಿ ಪುತ್ಥಳಿ, ಫಲಕ, ಶಾಲು,ಹಾರ ಹಾಗೂ 5 ಲಕ್ಷಗಳ ನಗದನ್ನು ಒಳಗೊಂಡಿರುತ್ತದೆ.

- **ಕುಮಾರವ್ಯಾಸ ಪ್ರಶಸ್ತಿ**

ಪ್ರತಿ ವರ್ಷವೂ ಕರ್ನಾಟಕ ಸರ್ಕಾರವು ಗಮಕವಾಚನ,ವ್ಯಾಖ್ಯಾನ ಹಾಗೂ ಕೀರ್ತನ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿ ಇರುವ ಅರ್ಹರಿಗೆ ಕುಮಾರವ್ಯಾಸ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗುತ್ತದೆ. ಪ್ರಶಸ್ತಿಯು 5 ಲಕ್ಷಗಳ ನಗದು, ಕುಮಾರವ್ಯಾಸರ ಕಂಚಿನ ಪುತ್ಥಳಿ, ಪ್ರಶಸ್ತಿ ಫಲಕ, ಹಾರ ಶಾಲು, ಹಾಗೂ ಫಲ ತಾಂಬೂಲಗಳನ್ನು ಒಳಗೊಂಡಿರುತ್ತದೆ.

- **ಪಂಪ ಪ್ರಶಸ್ತಿ**

ಪಂಪ ಪ್ರಶಸ್ತಿ ಕರ್ನಾಟಕ ರಾಜ್ಯದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದು, ಇದನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಅನನ್ಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವುದು. ಕನ್ನಡದ ಪ್ರಥಮ ಆದಿಕವಿ ಪಂಪ ಅವರ ಹೆಸರನ್ನು ಈ ಪ್ರಶಸ್ತಿ ಇಡಲಾಗಿದೆ.

- **ಪ್ರೊ. ಸೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ**

ಜಿ ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿಯನ್ನು ನೀಡಲು ಘೋಷಣೆ ಮಾಡಿದ್ದು 2010–11ನೇ ಸಾಲಿನ ಆರ್ಥಿಕ ವರ್ಷದಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಆರಂಭಿಸಲಾಯಿತು. ಪ್ರಶಸ್ತಿಯು 5 ಲಕ್ಷಗಳ ನಗದು, ಪುತ್ಥಳಿ, ಪ್ರಶಸ್ತಿ ಫಲಕ,ಹಾರ ಶಾಲು ಹಾಗೂ ಫಲತಾಂಬೂಲಗಳನ್ನು ಒಳಗೊಂಡಿರುತ್ತದೆ.

- **ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ**

ಕರ್ನಾಟಕದ ಸಾಹಿತ್ಯ ಸಂಸ್ಕೃತಿಯ ಇತಿಹಾಸದಲ್ಲಿ ದಾನಚಿಂತಾಮಣಿ ಅತ್ತಿಮಬ್ಬೆ ಕೊಡುಗೆ ಅನನ್ಯ, ಜೈನ ಗ್ರಂಥದ ಸಹಸ್ರ ಪುಸ್ತಕಗಳನ್ನು ಬರೆಯಿರಿ, ಧರ್ಮ ಹಾಗೂ ಸಾಹಿತ್ಯದ ಪ್ರಚಾರ ಕೈಗೊಂಡಿದ್ದು ವಿಶ್ವದಲ್ಲಿ ಅಪರೂಪದ ಪ್ರಸಂಗ ಸ್ತ್ರೀಯರ ಸಾಹಿತ್ಯ ಕೃಷಿ ಅಗಾಧವಾದ ಸೃಜನೆಯಾಗುತ್ತಿರುವ ಸಂದರ್ಭದಲ್ಲಿ ಅವರಿಗೆ ಪ್ರತ್ಯೇಕ ಪ್ರಶಸ್ತಿ ನೀಡಿ ಗೌರವಿಸಬೇಕೆಂಬು ಉದ್ದೇಶದಿಂದ ಅತಿಮಬ್ಬೆ ಹೆಸರಿನಲ್ಲಿ 1995 ರಿಂದ ಸ್ಥಾಪನೆಗೊಂಡ ಮಹಿಳಾ ಸಾಹಿತಿಗಳಿಗೆ ಕೂಡ ಮಾಡುವ ಪ್ರಶಸ್ತಿ ಇದು.

- **ಸಂಗೊಳ್ಳಿ ರಾಯಣ್ಣ ಪ್ರಶಸ್ತಿ**

ಕನ್ನಡ ನಾಡಿನ ನೆಲದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮನಾದ ಕೆಚ್ಚೆದೆಯ ಗಂಡುಗಲಿ ಸಂಗೊಳ್ಳಿ ರಾಯಣ್ಣನ ಹೆಸರಿನಲ್ಲಿ ಕನ್ನಡ ನಾಡಿನ ನೆಲ,ಜಲ,ಭಾಷೆ ಹಾಗೂ ಸಾಂಸ್ಕೃತಿಗಾಗಿ ನಿಸ್ವಾರ್ಥದಿಂದ ಹೋರಾಡಿದವರನ್ನು ಗುರುತಿಸಿ ಪ್ರತಿ ವರ್ಷವೂ ಒಬ್ಬರಿಗೆ ಸಂಗೊಳ್ಳಿ ರಾಯಣ್ಣ ಪ್ರಶಸ್ತಿಯನ್ನು 2003 ನೇ ಸಾಲಿನಲ್ಲಿ ನೀಡಲಾಗುವುದು.

- **ಬಿ.ವಿ.ಕಾರಂತ್ ಪ್ರಶಸ್ತಿ**

ಕರ್ನಾಟಕ ಸರ್ಕಾರವು ಭಾರತೀಯ ರಂಗಭೂಮಿ ಹರಿಕಾರರಲ್ಲಿ ಒಬ್ಬರಾದ ದೇಶ ಕಂಡ ಅಪರೂಪದ ರಂಗಕರ್ಮಿ,ಆಧುನಿಕ ರಂಗಭೂಮಿ ತನ್ನದೇ ಆದ ಮೇಲೆ ಕಂಡುಕೊಳ್ಳಲು ತಮ್ಮ ಅಸಾಮಾನ್ಯ ಸಂಗೀತ ಪ್ರತಿಭೆಯಿಂದ ರಂಗ ಸಂಗೀತ ಎಂಬ ಹೊಸ ಪ್ರಚಾರಕ್ಕೆ ನಾಂದಿ ಹಾಡಿತು, ಮೈಸೂರಿನಲ್ಲಿ ರಂಗಾಯಣ ನಿರ್ಮಾಣದ ಗರೂವಾರಿಯನಿಸಿದ ಶ್ರೀ,ಬಿ,ವಿ ಕಾರಂತ್ ಇವರ ಹೆಸರಿನಲ್ಲಿ ಕನ್ನಡದ ಹವ್ಯಾಸಿ ರಂಗ

ಕರ್ಮಿಗಳನ್ನು ಗುರುತಿಸಿ ಪ್ರತಿ ವರ್ಷ ಒಬ್ಬರಿಗೆ ರಾಜ್ಯ ಮಟ್ಟದಲ್ಲಿ ಬಿ.ವಿ.ಕಾರತ್ ಪ್ರಶಸ್ತಿಯನ್ನು ನೀಡಲು ಸರ್ಕಾರ ಆದೇಶಿಸಿದೆ.

- **ರಾಜ್ಯ ಸಂಗೀತ ವಿದ್ವಾನ್ ಗೌರವ ಪ್ರಶಸ್ತಿ**

ಪ್ರತಿ ವರ್ಷವೂ ಕರ್ನಾಟಕ ಸರ್ಕಾರವು ಸಂಗೀತ ಕ್ಷೇತ್ರಕ್ಕೆ ಅಗ್ರಗಣ್ಯ ವಿದ್ವಾಂಸರೊಬ್ಬರನ್ನು ಆಯ್ಕೆ ಮಾಡಿ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿಯನ್ನು ಕೊಟ್ಟು ಗೌರವಿಸುತ್ತಿದೆ. ಪ್ರಶಸ್ತಿಯು 5 ಲಕ್ಷಗಳ ನಗದು, ಸರಸ್ವತಿ ಪುತ್ಥಳಿ, ಪ್ರಶಸ್ತಿ ಪ್ರಮಾಣ ಪತ್ರ,ಹಾರ ಶಾಲು ಹಾಗೂ ಫಲ ತಾಂಬೂಲಗಳನ್ನು ಒಳಗೊಂಡಿರುತ್ತದೆ.

- **ಅಕ್ಕಮಹಾದೇವಿ ಪ್ರಶಸ್ತಿ**

ಕರ್ನಾಟಕ ಸರ್ಕಾರವು ಶಿವಶರಣೆಯರ ಆಶಯಗಳಿಗೆ ಅನುಗುಣವಾಗಿ ಸೇವೆ ಸಲ್ಲಿಸುತ್ತಿರುವ ಯಾವುದೇ ಕ್ಷೇತ್ರದ ಮಹಿಳಾ ಸಾಧಕರನ್ನು ಮತ್ತು ಮಹಿಳಾ ಸಂಘ ಸಂಸ್ಥೆಗಳನ್ನು ಗೌರವಿಸಲು ಸಲುವಾಗಿ 2016ನೇ ಸಾಲಿನಲ್ಲಿ ಶ್ರೇಷ್ಠ ವಚನಕಾರ್ತಿ ಶಿವಶರಣೆ ಅಕ್ಕಮಹಾದೇವಿ ಪ್ರಶಸ್ತಿಯನ್ನು ಸ್ಥಾಪಿಸಿದೆ.

- **ಭಗವಾನ್ ಮಹಾವೀರ ಶಾಂತಿ ರಾಷ್ಟ್ರೀಯ ಪ್ರಶಸ್ತಿ**

ಕರ್ನಾಟಕ ಸರ್ಕಾರವು ಅಹಿಂಸೆ, ಶಾಂತಿ, ಸೌಹಾರ್ದ, ಜನಕಲ್ಯಾಣ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪ್ರತಿಭಟನೆ ಮತ್ತು ಅನುಷ್ಠಾನಕ್ಕಾಗಿ ನಿರಂತರ ಶ್ರಮಿಸುತ್ತಿರುವ ಮತ್ತು ಸೇವೆ ನೈದಿರುವ ಸಂಘ ಸಂಸ್ಥೆಗಳು ವ್ಯಕ್ತಿಗಳನ್ನು ಗೌರವಿಸುವ ಸಲುವಾಗಿ, 2016ನೇ ಸಾಲಿನಲ್ಲಿ ಶ್ರೀ ಭಗವಾನ್ ಮಹಾವೀರ ಶಾಂತಿಯ ಪ್ರಶಸ್ತಿಯನ್ನು ಸ್ಥಾಪಿಸಿದೆ. ಇದು ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ಪ್ರಶಸ್ತಿಯಾಗಿದ್ದು, ಪ್ರಶಸ್ತಿ ಮತ್ತು 10 ಲಕ್ಷಗಳ ನಗದು, ಪ್ರಶಸ್ತಿ ಪುತ್ತಳಿ, ಪ್ರಶಸ್ತಿ ಫಲಕಗಳನ್ನು ಒಳಗೊಂಡಿರುತ್ತದೆ.

**ಉಪಸಂಹಾರ**

ಕಣ್ಣಿಗೆ ಕಾಡಿಗೆ ಬೇಕುಕಾಡಿಗೆ ಮರ–ಗಿಡ–ಬಳ್ಳಿ, ಪ್ರಾಣಿ–ಪಕ್ಷಿ ಬೇಕು ಮರ–ಗಿಡ–ಬಳ್ಳಿ, ಪ್ರಾನಿ–ಪಕ್ಷಿಗಳಿಗೆ ನೀರು–ಗಾಳಿ–ಬೆಳಕು ಬೇಕು ನೀರು–ಗಾಳಿ–ಕಾಡು–ನೆಲದ ರಕ್ಷಣೆಗೆ ಮಾನವನ ಪರಿಸರಾತ್ಮಕ ಬದುಕು ಬೇಕು ನಮ್ಮಅಭಿವ್ಯಕ್ತಿ–ಸಾಂಸ್ಕೃತಿಕ–ಆಡಳಿತ–ಸಾಹಿತ್ಯ–ತಾಂತ್ರಿಕ ಜ್ಞಾನ ಹೀಗೆ ಮುಂತಾದ 'ಆತ್ಮಕ'ವುಗಳಿಗೆ ಏನು ಬೇಕು? 'ಕನ್ನಡ ನಾಡ ನುಡಿ' ಎಂಬ ಆತ್ಮ ಬೇಕು.


ISBN : 979-889233259-0

## ಕನ್ನಡದ ಭೌಗೋಳಿಕ ಚರಿತ್ರೆ

**ಸಂದೀಪ್ ಕೆ ಎನ್,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಮಲೆನಾಡು ಪ್ರದೇಶ ಸುಂದರ ಬೆಟ್ಟ ಕಣಿವೆ ಮತ್ತು ಅರಣ್ಯಗಳನ್ನು ಒಳಗೊಂಡಿದೆ. ತುಂಗಭದ್ರಾ, ಕಾವೇರಿ, ನೇತ್ರಾವತಿ, ಶರಾವತಿ, ಕಾಳಿ, ಅಘನಾಶಿನಿ ಇತ್ಯಾದಿ ನದಿಗಳು ಈ ಬೆಟ್ಟ ಪ್ರದೇಶಗಳಲ್ಲಿ ಹುಟ್ಟುತ್ತವೆ. ಜಗತ್ಪಸಿದ್ದ ಜೋಗ ಜಲಪಾತ, ಮುಳ್ಳಯ್ಯನಗಿರಿ ಬೆಟ್ಟ ಇಲ್ಲಿನ ಪ್ರಮುಖ ಪ್ರವಾಸಿ ತಾಣಗಳಾಗಿವೆ.ಮೈಸೂರು ರಾಜ್ಯವನ್ನು 1973 ರಲ್ಲಿ **'ಕರ್ನಾಟಕ'** ಎಂದು ಮರುನಾಮಕರಣ ಮಾಡಲಾಯಿತು. ಕನ್ನಡ ಕರ್ನಾಟಕದ ಆಡಳಿತ ಭಾಷೆ. ಬೆಂಗಳೂರು ಕರ್ನಾಟಕದ ರಾಜಧಾನಿ ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಿವೆ.ಕರ್ನಾಟಕವನ್ನು ಅದರ ಭೌಗೋಳಿಕ ಲಕ್ಷಣಗಳ ಆಧಾರದ ಮೇಲೆ ಮುಖ್ಯವಾಗಿ 4 ಭೌಗೋಳಿಕ ವಲಯಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ

- ಕರಾವಳಿ ಪ್ರದೇಶ
- ಉತ್ತರದ ಬಯಲು ಪ್ರದೇಶ
- ದಕ್ಷಿಣದ ಬಯಲು ಪ್ರದೇಶ
- ಮಲೆನಾಡು ಪ್ರದೇಶ

ಕರ್ನಾಟಕದ ಕರಾವಳಿ ಪ್ರದೇಶವು ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡಿದ್ದು, ಸುಮಾರು 350 ಕಿಲೋ ಮೀಟರ್ ಉದ್ದವಿದೆ. ಈ ಭೂಭಾಗವು ಸುಮಾರು 50 ರಿಂದ 60 ಕಿಲೋಮೀಟರ್ ಗಳಷ್ಟು ಅಗಲವಾಗಿದ್ದು, ಇಳಿಜಾರಿನಿಂದ ಕೂಡಿರುವ ಕಾರಣ ಅತಿ ಕಡಿಮೆ ಸಮತಟ್ಟು ಪ್ರದೇಶವನ್ನು ಹೊಂದಿದೆ ಕರ್ನಾಟಕದ ಕರಾವಳಿ ಪ್ರದೇಶವು ಉತ್ತರಕನ್ನಡ, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಒಳಗೊಂಡಿದ್ದು, ಸುಮಾರು 350 ಕಿಲೋ ಮೀಟರ್ ಉದ್ದವಿದೆ. ಈ ಭೂಭಾಗವು ಸುಮಾರು 50 ರಿಂದ 60 ಕಿಲೋಮೀಟರ್ ಗಳಷ್ಟು ಅಗಲವಾಗಿದ್ದು, ಇಳಿಜಾರಿನಿಂದ ಕೂಡಿರುವ ಕಾರಣ ಅತಿ ಕಡಿಮೆ ಸಮತಟ್ಟು ಪ್ರದೇಶವನ್ನು ಹೊಂದಿದೆ ಈ ಪ್ರದೇಶವು ಭತ್ತ ಹಾಗೂ ತೆಂಗನ್ನು ಬೆಳೆಯಲು ಸೂಕ್ತವಾಗಿದೆ. ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಇಲ್ಲಿ ಹರಿಯುವ ಬೆಡ್ತಿ, ಶರಾವತಿ, ಕದ್ರಾ, ಕಾಳಿ ಮುಂತಾದ ನದಿಗಳು ಮೆಕ್ಕಲು ಮಣ್ಣನ್ನು ಶೇಖರಿಸುವುದಲ್ಲದೆ ನೀರಾವರಿ ಸೌಲಭ್ಯವನ್ನು ಒದಗಿಸಿ ವಿದ್ಯುತ್ ಉತ್ಪಾದನೆಗೆ ಸಹಕರಿಸುತ್ತವೆ.


**ISBN : 979-889233259-0**

ಕರಾವಳಿ ತೀರ ಪ್ರದೇಶದ ಉತ್ತರಭಾಗದಲ್ಲಿ ಹೊನ್ನಾವರ, ಕುಮಟಾ, ಅಂಕೋಲಾ, ಭಟ್ಕಳ ಹಾಗೂ ದಕ್ಷಿಣ ಭಾಗದಲ್ಲಿ ಮಂಗಳೂರು ಮಲ್ಪೆ ಗಳಲ್ಲಿ ಬಂದರುಗಳಿವೆ ದಕ್ಷಿಣದ ಬಯಲು ಪ್ರದೇಶವು ಮೈಸೂರು, ಮಂಡ್ಯ, ತುಮಕೂರು, ಚಾಮರಾಜನಗರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಜಿಲ್ಲೆಗಳ ಪೂರ್ವ ಭಾಗಗಳನ್ನು ಒಳಗೊಂಡಿದ್ದು, ಉತ್ತರದ ಪ್ರಸ್ಥಭೂಮಿಗಿಂತ ಹೆಚ್ಚು ಎತ್ತರದಲ್ಲಿದೆ. ಈ ಪ್ರದೇಶದಲ್ಲಿ ಮುಖ್ಯವಾಗಿ ಭತ್ತ, ರಾಗಿ,ತೆಂಗನ್ನು ಬೆಳೆಯುತ್ತಾರೆ. ನೀರಾವರಿಗೆ ಒಳಪಟ್ಟ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

ದಕ್ಷಿಣದ ಬಯಲು ಪ್ರದೇಶವು ಮೈಸೂರು, ಮಂಡ್ಯ, ತುಮಕೂರು, ಚಾಮರಾಜನಗರ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಬೆಂಗಳೂರು ಜಿಲ್ಲೆಗಳ ಪೂರ್ವ ಭಾಗಗಳನ್ನು ಒಳಗೊಂಡಿದ್ದು, ಉತ್ತರದ ಪ್ರಸ್ಥಭೂಮಿಗಿಂತ ಹೆಚ್ಚು ಎತ್ತರದಲ್ಲಿದೆ. ಈ ಪ್ರದೇಶದಲ್ಲಿ ಮುಖ್ಯವಾಗಿ ಭತ್ತ, ರಾಗಿ, ತೆಂಗನ್ನು ಬೆಳೆಯುತ್ತಾರೆ. ನೀರಾವರಿಗೆ ಒಳಪಟ್ಟ ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.ಈ ಪ್ರದೇಶದ ಕೊಳ್ಳೇಗಾಲದ ದಕ್ಷಿಣದಲ್ಲಿರುವ ಬಿಳಿಗಿರಿರಂಗನ ಬೆಟ್ಟ ದಿಂದ ರಾಮನಗರ,ಮಧುಗಿರಿ ಮತ್ತು ಪಾವಗಡದವರೆಗೆ ಚಾರ್ನೋರ್ಕೈಟ್ ಅಥವಾ ಗ್ರಾನೈಟ್ ಶಿಲಾ ಶ್ರೇಣಿ ಹಬ್ಬಿದ್ದು, ಗ್ರಾನೈಟ್ ಕೈಗಾರಿಕೆಗಳಿಗೆ ಆಶ್ರಯ ನೀಡಿದೆ. ಕಾವೇರಿ, ಕಬಿನಿ, ಹೇಮಾವತಿ, ಸುವರ್ಣಾವತಿ, ಶಿಂಷಾ, ಪಾಲಾರ್ ನದಿಗಳು ಈ ಪ್ರದೇಶದಲ್ಲಿ ಹರಿಯುತ್ತವೆ.

ಉತ್ತರದ ಬಯಲು ಪ್ರದೇಶವು ರಾಯಚೂರು, ಬಳ್ಳಾರಿ, ಬೀದರ್ ಬಿಜಾಪುರ, ಬಾಗಲಕೋಟೆ, ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಯ ಪೂರ್ವ ಭಾಗಗಳನ್ನು ಒಳಗೊಂಡಿದೆ. ಈ ಪ್ರದೇಶವು ಸಾಧಾರಣ ಉಬ್ಬು ತಗ್ಗುಗಳಿಂದ ಕೂಡಿದ್ದು, ಹೆಚ್ಚಾಗಿ ಕಪ್ಪು ಮಣ್ಣಿನಿಂದ ಆವೃತವಾಗಿದೆ. ಇಲ್ಲಿ ಹೆಚ್ಚಾಗಿ ಹತ್ತಿ, ಜೋಳ, ಗೋಧಿ, ಮೆಣಸಿನ ಕಾಯಿ, ಎಣ್ಣೆ ಕಾಳುಗಳನ್ನು ಬೆಳೆಯುತ್ತಾರೆ. ಮಲಪ್ರಭಾ, ಘಟಪ್ರಭಾ, ಕೃಷ್ಣ, ಭೀಮ, ತುಂಗಭದ್ರಾ ನದಿಗಳು ಈ ಪ್ರದೇಶದಲ್ಲಿ ಹರಿಯುವ ಪ್ರಮುಖ ನದಿಗಳಾಗಿವೆ.

ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಹಾಸನ, ಕೊಡಗು ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡಿರುವ ಇದು ಪಶ್ಚಿಮ ಘಟ್ಟಗಳ ಪೂರ್ವಭಾಗದ ಪ್ರದೇಶವಾಗಿದೆ. ಈ ಭಾಗವು ದಟ್ಟವಾದ ಅರಣ್ಯದಿಂದ ಆವೃತವಾಗಿದ್ದು, ಹೆಚ್ಚಿನ ನೈಸರ್ಗಿಕ ಸಂಪತ್ತನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಏರುಪೇರಾದ ಘಟ್ಟಗಳಿದ್ದು ಹಿತಕರ ವಾತಾವರಣವಿರುತ್ತದೆ. ಇದು ಕರ್ನಾಟಕದಲ್ಲಿ ಅಧಿಕ ಮಳೆ ಬೀಳುವ

ಭಾಗವಾಗಿದೆ. ಕರ್ನಾಟಕದ ಚಿರಾಪುಂಜಿ ಎಂದು ಹೆಸರಾದ ರಾಜ್ಯದಲ್ಲೇ ಅತಿ ಹೆಚ್ಚು ಮಳೆ ಬೀಳುವ ಸ್ಥಳ ಆಗುಂಬೆ.960 ಅಡಿಯಿಂದ ಧುಮುಕುವ ವಿಶ್ವವಿಖ್ಯಾತ ಜೋಗ ಜಲಪಾತ ಮಲೆನಾಡು ಪ್ರದೇಶದಲ್ಲಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಕರ್ನಾಟಕ ಎಂಬುದು ಬರಿ ಹೆಸರಲ್ಲ ಅದು ಒಂದು ಶಕ್ತಿ, ಯೋಚನೆ ಮತ್ತು ಭಾವನಾತ್ಮಕ ಸಂಬಂಧವನ್ನು ಹೆಣೆಯುವ ವಿಶಿಷ್ಟ ಸಂಗತಿ. ಇಲ್ಲಿ ಅನೇಕ ಜೀವಚರ ಪ್ರಾಣಿಗಳನ್ನು, ದೇವಲೋಕದ ಸ್ವರ್ಗವನ್ನಾಗಿ ರೂಪಿಸಿದ ಹೆಮ್ಮೆ ನಮ್ಮ ಕರುನಾಡು ಇಂತಹ ವಿಶಿಷ್ಟ್ಯತೆಯಿರುವುದು ಕನ್ನಡ ನಾಡಿಗೆ ಮಾತ್ರ ಎಂಬುದು ಅತ್ಯಂತ ಮುಖ್ಯ.

***

## ಕರ್ನಾಟಕದ ಜನಪದ ಕಲೆಗಳು

**ಸಂಜಯ್ ಎನ್ ಜಿ,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಗ್ರಾಮೀಣ ಬದುಕಿನ ಅನಕ್ಷರಸ್ಥರಲ್ಲಿನ ಜಾನಪದ ಕಲೆಗಳು, ಹಾಡು, ಗಾದೆ ನಗರ ಬದುಕಿನ ಜನಕ್ಕೆ ವಿಶಿಷ್ಟ ಸಂವೇದನೆಯನ್ನುಂಟು ಮಾಡಿವೆ. ಗ್ರಾಮಗಳ ದೈನಿಕ ಬದುಕು ಆರಂಭವಾಗುವುದೇ ಇಂಥ ಜನಪದ ಹಾಡು–ಹಬ್ಬ ಆಚರಣೆಗಳಿಂದ. ಇವೊತ್ತಿನ ವಿಜ್ಞಾನಯುಗ ಪರಂಪರಾಗತ ಕಲೆಗಳನ್ನು ಮರೆಸುವಂತೆ ನಾಗಾಲೋಟಕ್ಕೆ ಓಡುತ್ತಿದೆ. ಹೀಗಿದ್ದೂ ನಗರ ಬದುಕಿನ ಈ ಜನಕ್ಕೆ 'ಜನಪದ' ಮನರಂಜನೆಯನ್ನೀಯುವ ಮಟ್ಟಕ್ಕೆ ಸೀಮಿತವಾಗಿದೆಯೇನೋ ಅನ್ನುವ ಸಂಶಯ ಮೂಡಿದೆ. ಇದು ವಾಸ್ತವವೂ ಕೂಡ.

ಈ ಜಾನಪದ ಪ್ರಕಾರವನ್ನು ಸಂಸ್ಕೃತಿಯ ಒಂದು ಭಾಗವೆಂದು ಭಾವಿಸಬೇಕಾಗಿರುವುದರಿಂದ ಇದರ ಉಳಿವು ನಮ್ಮ ಕೈಲಿದೆ. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರ ನೀಡಿ ಗ್ರಾಮೀಣ ಪ್ರತಿಭೆಗಳನ್ನು ಹುಡುಕಿ ಈ ಪ್ರಕಾರದ ಜೀವಂತಿಕೆಗೆ ಶ್ರಮಿಸಬೇಕಾದ ಅಗತ್ಯವಿದೆ. ಅನೇಕ ಗ್ರಾಮೀಣ ಕಲೆ ಮತ್ತು ಆಚರಣೆಗಳು ಸಮಾಜದ ಮುಖ್ಯವಾಹಿನಿಗೆ ಬಾರದೆ ಎಲೆಮರೆಯ ಕಾಯಾಗಿ ಮರೆಯಲ್ಲಿಯೇ ಅಳಿದು ಹೋಗುತ್ತಿವೆ. ಅದರ ಸೊಗಡನ್ನು ಉಳಿಸುವ ಮತ್ತು ಮುಂದಿನ ತಲೆಮಾರಿಗೆ ಇದರ ಸವಿಯನ್ನು ಉಳಿಸಿ ಉಣಬಡಿಸುವ ಗುರುತರವಾದ ಜವಾಬ್ದಾರಿಯು ಪ್ರಜ್ಞಾವಂತ ನಾಗರಿಕರ ಜವಾಬ್ದಾರಿಯಾಗಿದೆ.

ಕರ್ನಾಟಕದ ಧಾರ್ಮಿಕ ನೃತ್ಯಗಳನ್ನು ಕುಣಿತ ಎಂದು ಕರೆಯಲಾಗುತ್ತದೆ. ಅಂತಹ ಒಂದು ನೃತ್ಯವೆಂದರೆ ಡೊಳ್ಳು ಕುಣಿತ. ಇದು ಹಾಡುಗಾರಿಕೆ ಮತ್ತು ಅಲಂಕೃತ ಡ್ರಮ್ಗಳ ಬೀಟ್ಗಳೊಂದಿಗಿನ ಜನಪ್ರಿಯ


ISBN : 979-889233259-0

ನೃತ್ಯ ಪ್ರಕಾರವಾಗಿದೆ. ಈ ನೃತ್ಯವನ್ನು ಪ್ರಾಥಮಿಕವಾಗಿ ಕುರುಬ ಅಥವಾ ಕುರುಬ ಜಾತಿಯ ಪುರುಷರು ಪ್ರದರ್ಶಿಸುತ್ತಾರೆ. ಡೊಳ್ಳು ಕುಣಿತವು ಹುರುಪಿನ ಡ್ರಮ್ ಬೀಟ್ಗಳು, ತ್ವರಿತ ಚಲನೆಗಳು ಮತ್ತು ಸಿಂಕ್ರೊನೈಸ್ ಮಾಡಿದ ಗುಂಪು ರಚನೆಗಳಿಂದ ನಿರೂಪಿಸಲ್ಪಟ್ಟಿದೆ.

**ಭರತನಾಟ್ಯ**

ಭರತನಾಟ್ಯಂ ಕರ್ನಾಟಕದ ಶಾಸ್ತ್ರೀಯ ನೃತ್ಯವೂ ಹೌದು. ಇದನ್ನು ಕನ್ನಡದಲ್ಲಿ ಭರತ ನಾಟ್ಯ ಎಂದು ಕರೆಯಲಾಗುತ್ತದೆ. ಈ ಭಾರತೀಯ ಶಾಸ್ತ್ರೀಯ ನೃತ್ಯ ಪ್ರಕಾರವನ್ನು ಸೋಮೇಶ್ವರ ಅವರು ಬರೆದ ಮಾನಸೋಲ್ಲಾಸ ಎಂಬ ಕನ್ನಡ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ.

**ಡೊಳ್ಳು ಕುಣಿತ**

ಮಹಿಳೆಯರಿಂದ ಡೊಳ್ಳು ಕುಣಿತವೂ ನಡೆಯುತ್ತದೆ. ಇದು ಕುರುಬ ಸಮುದಾಯದ ಪುರುಷರಿಂದ ಪ್ರದರ್ಶಿಸಲಾಗುವ ಡೊಳ್ಳು ಪ್ರದರ್ಶನದಲ್ಲಿ ಬಳಸಿದ ಗುಂಪು ನೃತ್ಯವಾಗಿದೆ. ಗುಂಪು 16 ನೃತ್ಯಗಾರರನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬರೂ ಡ್ರಮ್ ಅನ್ನು ಧರಿಸುತ್ತಾರೆ ಮತ್ತು ನೃತ್ಯ ಮಾಡುವಾಗ ವಿಭಿನ್ನ ಲಯಗಳನ್ನು ನುಡಿಸುತ್ತಾರೆ. ಬೀಟ್ ಅನ್ನು ಮಧ್ಯದಲ್ಲಿ ತಾಳಗಳನ್ನು ಹೊಂದಿರುವ ನಾಯಕ ನಿರ್ದೇಶಿಸುತ್ತಾನೆ. ನಿಧಾನ ಮತ್ತು ವೇಗದ ಲಯಗಳು ಪರ್ಯಾಯವಾಗಿರುತ್ತವೆ ಮತ್ತು ಗುಂಪು ವಿಭಿನ್ನ ಮಾದರಿಯನ್ನು ನೇಯ್ಗೆ ಮಾಡುತ್ತದೆ. ವೇಷಭೂಷಣಗಳು ಸರಳವಾಗಿರುತ್ತದೆ. ದೇಹದ ಮೇಲ್ಭಾಗವನ್ನು ಸಾಮಾನ್ಯವಾಗಿ ಬರಿದಾಗಿ ಬಿಡಲಾಗುತ್ತದೆ, ಆದರೆ ಕಪ್ಪು ಹಾಳೆಯನ್ನು ಧೋತಿಯ ಮೇಲೆ ಕೆಳಗಿನ ದೇಹದ ಮೇಲೆ ಕಟ್ಟಲಾಗುತ್ತದೆ. ಕೆ.ಎಸ್.ಹರಿದಾಸ್ ಭಟ್ ನೇತೃತ್ವದ ತಂಡವು 1987ರಲ್ಲಿ ಯು.ಎಸ್.ಎಸ್.ಆರ್ ಗೆ ಪ್ರವಾಸ ಮಾಡಿತು, ಮಾಸ್ಕೋ, ಲೆನಿನ್ಗ್ರಾಡ್, ವೈಬೋರ್ಗ್, ಆರ್ಚಾಂಗೆಲ್ಸ್ಕ್, ಪ್ಸ್ಕೋವ್, ಮರ್ಮನ್ಸ್ಕ್, ತಾಷ್ಕೆಂಟ್ ಮತ್ತು ನೊವೊಗ್ರಾಡ್ನಲ್ಲಿ ಪ್ರದರ್ಶನ ನೀಡಿತು.

**ಬೀಸು ಕಂಸಾಳೆ ಮತ್ತು ಕಂಸಾಳೆ ನೃತ್ಯ**

ಇದು ಮೈಸೂರು, ನಂಜನಗೂಡು, ಕೊಳ್ಳೇಗಾಲ ಮತ್ತು ಬೆಂಗಳೂರು ಪ್ರದೇಶಗಳಲ್ಲಿನ ಹಳ್ಳಿಗರು ಮಾಡುವ ಸಮೂಹ ನೃತ್ಯವಾಗಿದೆ. ನರ್ತಕರು ಆಡುವ ಮತ್ತು ಆಸರೆಯಾಗಿ ಕಂಸಾಳೆ ಹೆಸರನ್ನು ಇಡಲಾಗಿದೆ.ಕಂಸಾಳೆಯು ಒಂದು ಕೈಯಲ್ಲಿ ತಾಳ ಮತ್ತು ಇನ್ನೊಂದು ಕೈಯಲ್ಲಿ ಕಂಚಿನ ಡಿಸ್ಕ್ ಇದೆ. ಇದು ಲಯಬದ್ಧವಾದ ಧ್ವನಿಯನ್ನು ಉತ್ಪಾದಿಸುತ್ತದೆ.ಕಂಸಾಳೆ ನೃತ್ಯವು ಕುರುಬ ಸಮುದಾಯದಿಂದ ಮಲೆ ಮಹದೇಶ್ವರ (ಶಿವ) ಆರಾಧನೆಯ ಸಂಪ್ರದಾಯಕ್ಕೆ ಸಂಪರ್ಕ ಹೊಂದಿದೆ, ಇದರಿಂದ ಹೆಚ್ಚಿನ ನೃತ್ಯಗಾರರು


ISBN : 979-889233259-0

ಸೆಳೆಯಲ್ಪಟ್ಟಿದ್ದಾರೆ. ಶಿವನನ್ನು ಸ್ತುತಿಸಿ ಹಾಡುವ ಲಯಬದ್ಧ, ಸುಮಧುರ ಸಂಗೀತಕ್ಕೆ ನೃತ್ಯವನ್ನು ನಡೆಸಲಾಗುತ್ತದೆ.

**ಸೋಮನ ಕುಣಿತ**

ಸೋಮನ ಕುಣಿತ (ಮುಖವಾಡ ನೃತ್ಯ) ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಗಾರ್ಡಿಯನ್ ಸ್ಪಿರಿಟ್ ಆರಾಧನೆಯ ಒಂದು ಆಚರಣೆಯ ರೂಪವಾಗಿದೆ, ಇದನ್ನು ಪ್ರಾಥಮಿಕವಾಗಿ ಗಂಗಾಮಾತಾ ಸಮುದಾಯದಿಂದ ಮಾತ್ರ ದೇವತೆಗೆ ಸಮರ್ಪಿತವಾದ ಗ್ರಾಮ ದೇವಾಲಯಗಳಲ್ಲಿ ನಡೆಸಲಾಗುತ್ತದೆ. ನೃತ್ಯವು ವಿವಿಧ ಬಣ್ಣಗಳಲ್ಲಿ ಚಿತ್ರಿಸಿದ ವಿಸ್ತಾರವಾದ ಮುಖವಾಡಗಳಿಂದ (ಸೋಮಗಳು) ನಿರೂಪಿಸಲ್ಪಟ್ಟಿದೆ, ಪ್ರತಿ ಮುಖವಾಡದ ಬಣ್ಣವು ದೇವರ ಸ್ವಭಾವವನ್ನು ಸೂಚಿಸುತ್ತದೆ. ಪರೋಪಕಾರಿ ದೇವತೆಯನ್ನು ಕೆಂಪು ಮುಖವಾಡದಿಂದ ಪ್ರತಿನಿಧಿಸಲಾಗುತ್ತದೆ, ಆದರೆ ಹಳದಿ ಅಥವಾ ಕಪ್ಪು ಮುಖವಾಡವು ವಿರುದ್ಧವಾಗಿ ಸೂಚಿಸುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವ ಹಲವು ಬಗೆಯ ಮುಖವಾಡಗಳಿವೆ. ಸೋಮನ ಕುಣಿತವು ಗ್ರಾಮ ದೇವತೆಯ ಆರಾಧನೆಗೆ ಸಂಬಂಧಿಸಿದ ಒಂದು ಧಾರ್ಮಿಕ ನೃತ್ಯವಾಗಿದೆ ಮತ್ತು ಇದನ್ನು ಪ್ರಾಥಮಿಕವಾಗಿ ಯುಗಾದಿಯ ನಂತರ ಮತ್ತು ಮಾನ್ಸೂನ್ ಪ್ರಾರಂಭವಾಗುವ ಮೊದಲು ಮಹಾ ಶಿವರಾತ್ರಿಯಲ್ಲಿ ಆಚರಿಸಲಾಗುತ್ತದೆ. ಇದು ಹಳೆ ಮೈಸೂರು ಪ್ರಾಂತ್ಯದಲ್ಲಿ, ಹಾಸನ, ತುಮಕೂರು, ಬೆಂಗಳೂರು, ಮಂಡ್ಯ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ.

ವಿದ್ಯುಕ್ತ ದಿನದಂದು, ಆತ್ಮಗಳಿಗೆ ಅರ್ಪಣೆಗಳನ್ನು ಮಾಡಲಾಗುತ್ತದೆ. ಮುಖವಾಡಗಳನ್ನು ಕೆಂಪು ಶ್ರೀಗಂಧದ ಮರದಿಂದ ತಯಾರಿಸಲಾಗುತ್ತದೆ. ಇತರ ರಂಗಪರಿಕರಗಳಲ್ಲಿ ಕಬ್ಬು (ಅಥವಾ ಕೋಲು) ಮತ್ತು ನವಿಲು ಗರಿಗಳು ಸೇರಿವೆ. ಬಣ್ಣಬಣ್ಣದ ಹೂವುಗಳು, ಬೇವಿನ ಎಲೆಗಳು ಮತ್ತು ಬಣ್ಣಬಣ್ಣದ ಬಟ್ಟೆಯ ಪಟ್ಟಿಗಳನ್ನು ಹೊಂದಿರುವ ಸಣ್ಣ ಟೋಪಿಯನ್ನು ಸಹ ಧರಿಸಲಾಗುತ್ತದೆ. ಸಂಗೀತವನ್ನು ಡೊನು (ತಾಳವಾದ್ಯ), ಮೂರಿ (ಪೈಪ್) ಮತ್ತು ಸಡ್ಡೆ (ಶ್ರುತಿಗಾಗಿ ಒಂದು ಪೈಪ್) ಮೂಲಕ ಒದಗಿಸಲಾಗುತ್ತದೆ. ನರ್ತಕಿಯು ದೇವಿಯ ದೇವಾಲಯದಲ್ಲಿ ರಕ್ಷಕನ ಚೈತನ್ಯವನ್ನು ಒಂದು ಟ್ರಾನ್ಸ್ ತರಹದ ಸ್ಥಿತಿಯಲ್ಲಿ ಸ್ತುತಿಸುವುದನ್ನು ಪ್ರಾರಂಭಿಸುತ್ತಾನೆ. ಒಂದು ಕೋಳಿಯ ರಕ್ತವನ್ನು ಕೆಲವೊಮ್ಮೆ ದೇವಿಗೆ ಅರ್ಪಿಸಲಾಗುತ್ತದೆ.

ಸುಗ್ಗಿ ಕುಣಿತ.

ಸುಗ್ಗಿ ಕುಣಿತ (ಸುಗ್ಗಿಯ ನೃತ್ಯ) ಸುಗ್ಗಿಯ ಸಮಯದಲ್ಲಿ ಹೆಚ್ಚಾಗಿ ರೈತ ಸಮುದಾಯದಿಂದ ನಡೆಸಲಾಗುತ್ತದೆ. ಸುಂದರವಾದ ವೇಷಭೂಷಣಗಳು ಮತ್ತು ಕೆತ್ತಿದ ಪಕ್ಷಿಗಳು ಮತ್ತು ಹೂವುಗಳಿಂದ


ISBN : 979-889233259-0

ಅಲಂಕರಿಸಲ್ಪಟ್ಟ ಮರದ ಶಿರಸ್ತ್ರಾಣವನ್ನು ಹೊಂದಿರುವ ಕಲಾವಿದರು ಕೋಲುಗಳು ಮತ್ತು ನವಿಲು ಗರಿಗಳೊಂದಿಗೆ ಡ್ರಮ್ಗಳ ನಾದಕ್ಕೆ ನೃತ್ಯ ಮಾಡುತ್ತಾರೆ. ಅವರು ತಮ್ಮ ಸ್ವಂತಿಕೆಯನ್ನು ಬಳಸಿ ಕೆಲವೊಮ್ಮೆ ನೃತ್ಯವನ್ನು ಹೆಚ್ಚಿಸುತ್ತಾರೆ.

**ಭೂತಾರಾಧನೆ**

ಈ ನೃತ್ಯ ಪ್ರಕಾರವನ್ನು ಕರಾವಳಿ ಪ್ರದೇಶಗಳಲ್ಲಿ ವ್ಯಾಪಕವಾಗಿ ಪ್ರದರ್ಶಿಸಲಾಗುತ್ತದೆ. ಭೂತಾರಾಧನೆ ಆರಾಧನೆಯು ವಿಗ್ರಹಗಳ ಮೆರವಣಿಗೆಯನ್ನು ಒಳಗೊಂಡಿರುತ್ತದೆ ಮತ್ತು ಇದು ಡೋಲು ಮತ್ತು ಪಟಾಕಿಗಳಿಂದ ನಿರೂಪಿಸಲ್ಪಟ್ಟಿದೆ. ಮೆರವಣಿಗೆಯ ಕೊನೆಯಲ್ಲಿ, ವಿಗ್ರಹಗಳನ್ನು ಸ್ತಂಭದ ಮೇಲೆ ಇರಿಸಲಾಗುತ್ತದೆ. ಒಬ್ಬ ನರ್ತಕ, ಭೂತವನ್ನು (ಪವಿತ್ರಾತ್ಮ) ವ್ಯಕ್ತಿಗತಗೊಳಿಸುತ್ತಾ, ಕತ್ತಿ ಮತ್ತು ಝೇಂಕರಿಸುವ ಘಂಟೆಗಳೊಂದಿಗೆ ಸ್ತಂಭದ ಸುತ್ತಲೂ ನೃತ್ಯ ಮಾಡುತ್ತಾನೆ. ನರ್ತಕ ತ್ವರಿತವಾಗಿ ನೃತ್ಯ ಮಾಡುತ್ತಾನೆ ಮತ್ತು ನಂತರ ನಿಧಾನಗೊಳಿಸುತ್ತಾನೆ, ಇದು ಅವನನ್ನು ದೈವಿಕ ಎಂದು ಸೂಚಿಸುತ್ತದೆ. ಇದು ಇತ್ತೀಚಿಗೆ ಕನ್ನಡ ಚಲನಚಿತ್ರ ಕಾಂತಾರದಲ್ಲೂ ಅಭಿವ್ಯಕ್ತಿಗೊಳಿಸಲಾಗಿದೆ.

**ಯಕ್ಷಗಾನ.**

ಯಕ್ಷಗಾನವು ಜಾನಪದ ಕಲೆಯಲ್ಲ, ಆದರೆ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ನೃತ್ಯ, ಸಂಗೀತ, ಹಾಡುಗಳು, ಪಾಂಡಿತ್ಯಪೂರ್ಣ ಸಂಭಾಷಣೆ ಮತ್ತು ವರ್ಣರಂಜಿತ ವೇಷಭೂಷಣಗಳ ಮಿಶ್ರಣವಾಗಿರುವ ಭಾರತದ ಜನಪ್ರಿಯ ಸಾಂಪ್ರದಾಯಿಕ ರಂಗಭೂಮಿಯಾಗಿದೆ. ಪದವು ಆಕಾಶ ಸಂಗೀತ ಎಂದರ್ಥ. ಈ ನೃತ್ಯ ನಾಟಕವನ್ನು ರಾತ್ರಿಯಲ್ಲಿ ನಡೆಸಲಾಗುತ್ತದೆ.

**ಬೋಲಾಕ್ – ಆತ್**

ತೆರೆದ ಮೈದಾನದಲ್ಲಿ ಎಣ್ಣೆ ದೀಪದ ಹಿಂಭಾಗದಲ್ಲಿ ಕೊಡವ ಪುರುಷರು ಪ್ರದರ್ಶಿಸುತ್ತಾರೆ. ಈ ನೃತ್ಯವನ್ನು ಮಾಡುವಾಗ ಪುರುಷರು ಒಂದು ಕೈಯಲ್ಲಿ ಚವರಿ (ಯಾಕ್ ಫರ್) ಮತ್ತು ಇನ್ನೊಂದು ಕೈಯಲ್ಲಿ ಕೊಡವ ಸಣ್ಣ ಕತ್ತಿಯನ್ನು (ಓಡಿ–ಕತಿ) ಹಿಡಿದಿದ್ದಾರೆ. ಈ ನೃತ್ಯದ ಪ್ರಾದೇಶಿಕ ಪ್ರಭೇದಗಳು ಅಸ್ತಿತ್ವದಲ್ಲಿವೆ, ಇದರಲ್ಲಿ ಪ್ರದರ್ಶಕರು ಚವರಿಯೊಂದಿಗೆ ನೃತ್ಯ ಮಾಡುತ್ತಾರೆ ಮತ್ತು ಸಣ್ಣ ಕತ್ತಿಯಲ್ಲ. ಓಡಿ– ಕತ್ತಿಯನ್ನು ಸಹ ಬಳಸಿದಾಗ, ನೃತ್ಯವನ್ನು ಕತ್ತಿಯಾಟ ಎಂದು ಕರೆಯಲಾಗುತ್ತದೆ. ದುಡಿ, ಮರಳು ಗಡಿಯಾರದ ಆಕಾರದ ಡ್ರಮ್, ಲಯವನ್ನು ಒದಗಿಸುತ್ತದೆ.


ISBN : 979-889233259-0

**ಹಗಲು ವೇಷಗಾರರು.**

ಇದು ಕರ್ನಾಟಕದ ಸಂಚಾರಿ ನಟರ ಗುಂಪಾಗಿದ್ದು, ಅವರು ಲಿಪಿಯಿಲ್ಲದ ಮೂಕಾಭಿನಯದಲ್ಲಿ ಪರಿಣತಿ ಹೊಂದಿದ್ದಾರೆ; ಯಾವುದೇ ವೇದಿಕೆ ಅಥವಾ ಸೌಲಭ್ಯವನ್ನು ಬಳಸಲಾಗುವುದಿಲ್ಲ. ಕಲಾವಿದರು ಸ್ಥಳದಿಂದ ಸ್ಥಳಕ್ಕೆ ತೆರಳುತ್ತಾರೆ, ಟೆಂಟ್ಗಳನ್ನು ಹಾಕುತ್ತಾರೆ ಮತ್ತು ಪ್ರದರ್ಶನ ನೀಡಲು ಮುಂದಾಗುತ್ತಾರೆ. ಅವರು ವಿವಿಧ ಪೌರಾಣಿಕ, ಪೌರಾಣಿಕ ಮತ್ತು ನೈಜ ಪಾತ್ರಗಳನ್ನು ನಿರ್ವಹಿಸುತ್ತಾರೆ. ಪ್ರದರ್ಶನಗಳು ದೈನಂದಿನ ಜೀವನದಿಂದ ಸೆಳೆಯುತ್ತವೆ ಮತ್ತು ಕೆಲವೊಮ್ಮೆ ಪೂರ್ಣ–ಉದ್ದದ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ. ಸರ್ವಜ್ಞ, ಬಸವಣ್ಣ ಮುಂತಾದವರಿಂದ ವಚನ ಸಾಹಿತ್ಯ ನಡೆಸಿಕೊಡುತ್ತಾರೆ.

ಹಾರ್ಮೋನಿಯಂ, ತಬಲಾ–ದಗ್ಗ ಮತ್ತು ಒಂದು ಜೋಡಿ ತಾಳಗಳು ಮಧುರ ಮತ್ತು ಲಯವನ್ನು ಒದಗಿಸುತ್ತವೆ. ತಮ್ಮ ಅಭಿನಯಕ್ಕಾಗಿ, ಹಳ್ಳಿಯ ಚೌಕಗಳು ಮತ್ತು ಜಾತ್ರೆಗಳಲ್ಲಿ ಪ್ರದರ್ಶಿಸಲಾಗುತ್ತದೆ, ನಟರು ತಂಡದ ಜೊತೆಯಲ್ಲಿರುವ ಸಹಾಯಕರಿಂದ ಚೀಲದಲ್ಲಿ ಸಂಗ್ರಹಿಸಿದ ಆಹಾರವನ್ನು ಸ್ವೀಕರಿಸುತ್ತಾರೆ. ಹೆಚ್ಚಿನ ಹಗಲು ವೇಷಗಾರರು ವೀರಶೈವ ಸಂಪ್ರದಾಯಕ್ಕೆ ಸೇರಿದವರು, ಕೆಲವರು ಮುಸ್ಲಿಮರು. ಕೆಲವೊಮ್ಮೆ ಅವರನ್ನು ಜ್ಯಾತಿಗಾರರು (ಮುಸ್ಲಿಂ ಸಮುದಾಯಕ್ಕೆ ಸೇರಿದವರು) ಎಂದು ಸಂಬೋಧಿಸಲಾಗುತ್ತದೆ. ಅವರನ್ನು ಸುದುಗಾಡು ಸಿದ್ಧ (ಸ್ಮಶಾನದ ಸನ್ಯಾಸಿಗಳು) ಅಥವಾ ಬಹುರೂಪಿ (ಹಲವು ವೇಷಗಳನ್ನು ಹೊಂದಿರುವವರು) ಎಂದೂ ಕರೆಯುತ್ತಾರೆ.

**ಗೊರವರ ಕುಣಿತ**

ಗೊರವರ ಕುಣಿತವು ಶಿವನನ್ನು ಆರಾಧಿಸುವ ನೃತ್ಯವಾಗಿದ್ದು ಇದು ಮೈಸೂರು ಮತ್ತು ಉತ್ತರ ಕರ್ನಾಟಕ ಪ್ರದೇಶಗಳಲ್ಲಿ ಜನಪ್ರಿಯವಾಗಿದೆ. ಉತ್ತರ ಕರ್ನಾಟಕದಲ್ಲಿ ಗೊರವರು ಮೈಲಾರಲಿಂಗನನ್ನು ಪೂಜಿಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಗೊರವರು ಕಪ್ಪು–ಬಿಳುಪು ಉಣ್ಣೆಯ ಉಡುಪುಗಳನ್ನು ಮತ್ತು ಕಪ್ಪು–ಕರಡಿ–ತುಪ್ಪಳದ ಟೋಪಿಯನ್ನು ಧರಿಸುತ್ತಾರೆ ಮತ್ತು ಡಮರು ಮತ್ತು ಪಿಲ್ಲಂಗೋವಿ (ಕೊಳಲು) ನುಡಿಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಗೊರವರು ಕಪ್ಪು ಉಣ್ಣೆಯ ವಸ್ತ್ರಗಳನ್ನು ಮತ್ತು ಚರ್ಮದ ಭುಜದ ಚೀಲವನ್ನು ಧರಿಸುತ್ತಾರೆ; ಕೆಲವರು ಕಪ್ಪು ಕೋಟ್ ಮತ್ತು ಬಿಳಿ ಧೋತಿ ಧರಿಸುತ್ತಾರೆ. ನರ್ತಕರು ತಮ್ಮ ಹಣೆಯ ಮೇಲೆ ಕಡುಗೆಂಪು ಪುಡಿ ಮತ್ತು ವಿಭೂತಿ (ಪವಿತ್ರ ಬೂದಿ) ಉಜ್ಜುತ್ತಾರೆ. ಸಾಂಪ್ರದಾಯಿಕ ಗೊರವ ಭಕ್ತರು ಮೈಮರೆತು ನೃತ್ಯ ಮಾಡುತ್ತಾರೆ, ಕೆಲವೊಮ್ಮೆ ನಾಯಿಗಳಂತೆ ಬೊಗಳುತ್ತಾರೆ. ನೃತ್ಯಗಾರರು ಪ್ರದಕ್ಷಿಣಾಕಾರವಾಗಿ ಅಂಕುಡೊಂಕಾದ ರೀತಿಯಲ್ಲಿ ಚಲಿಸುತ್ತಾರೆ, ಯಾವುದೇ ಸ್ಥಿರ ನೃತ್ಯ ಸಂಯೋಜನೆಯಿಲ್ಲ.


ISBN : 979-889233259-0

ಉತ್ತರ ಕರ್ನಾಟಕದ ಗೊರವರು ಹಣೆಗೆ ಹಳದಿ ಪುಡಿ ಹಚ್ಚಿಕೊಂಡು ಭಕ್ತರಿಗೆ ಪ್ರಸಾದ ನೀಡುತ್ತಾರೆ. ಡಮರು, ವೇಣು, ಸಣ್ಣ ಕಂಚಿನ ಗಂಟೆಗಳು ಮತ್ತು ಕೌಬೆಲ್ಗಳನ್ನು (ಪರಿಗಂಟೆ) ನುಡಿಸಲಾಗುತ್ತದೆ. ನೃತ್ಯವು ಯಾವುದೇ ಸ್ಥಿರ ನೃತ್ಯ ಸಂಯೋಜನೆಯಿಲ್ಲದೆ ಟ್ರಾನ್ಸ್ ತರಹದ ಚಲನೆಗಳನ್ನು ಒಳಗೊಂಡಿದೆ.ಅವರ ಹೆಸರೇ ಸೂಚಿಸುವಂತೆ, ಅವರು ಪ್ರಾಥಮಿಕವಾಗಿ ಹಗಲಿನಲ್ಲಿ (ಹಗಲು) ಪ್ರದರ್ಶನ ನೀಡುತ್ತಾರೆ ಮತ್ತು ಪುರುಷರು ಮಾತ್ರ ಭಾಗವಹಿಸುತ್ತಾರೆ (ಸ್ತ್ರೀ ಪಾತ್ರಗಳನ್ನು ಒಳಗೊಂಡಂತೆ). ಮನರಂಜನೆಯೇ ಮುಖ್ಯ ಉದ್ದೇಶವಾಗಿದ್ದರೂ, ಹಗಲು ವೇಷಗಾರರು ತಮ್ಮ ಪ್ರದರ್ಶನಗಳೊಂದಿಗೆ ಪೌರಾಣಿಕ ಕಥೆಗಳು ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಗ್ರಾಮಸ್ಥರಿಗೆ ತಿಳಿಸುತ್ತಾರೆ.

**ವೀರಗಾಸೆ**

ವೀರಗಾಸೆ ಕುಣಿತದವರ ವೇಷ ಭೂಷಣಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ, ಕನಿಷ್ಠ ಎಂಟು ಅಥವಾ ಅದಕ್ಕೆ ಮೇಲ್ಪಟ್ಟ ಸಮ ಸಂಖ್ಯೆಯ ಕಲಾವಿದರು ತಲೆಗೆ ಪೇಟ, ಕಿವಿಗೆ ಕಡಕು,ಹಣೆಗೆ ವಿಭೂತಿ, ಕೊರಳಿಗೆ ರುದ್ರಾಕ್ಷಿ ಹಾಗೂ ನಾಗಾಭರಣ, ಎದೆಗೆ ವೀರಭದ್ರ ಸ್ವಾಮಿಯ ಹಲಗೆ, ಸೊಂಟಕ್ಕೆ ದಕ್ಷಬ್ರಹ್ಮನ ಶಿರ ಕಟ್ಟಿಕೊಳ್ಳುತ್ತಾರೆ. ಕೈಯಲ್ಲಿ ಕತ್ತಿ, ಕಾಲಿಗೆ ಕಡಗ ಮತ್ತು ಗೆಜ್ಜೆ. ಮೈಗೆ ಕಾವಿ ಜುಬ್ಬ ಮತ್ತು ಕಾವಿಯ ಕಸೆಗಳಿರುತ್ತವೆ. ವೀರಶೈವರಿಗೆ ಮಾತ್ರ ವಿಶಿಷ್ಟವಾದ ಈ ಕಲೆ ಅವರ ವೇಷಭೂಷಣದಿಂದಲೇ ಈ ಹೆಸರು ಪಡೆದುಕೊಂಡಿದೇ ಎನಿಸುತ್ತದೆ. (ವೀರ+ಕಾಸೆ=ವೀರಗಾಸೆಯಾಗಿರುತ್ತದೆ) ಕಾಸೆ ಕಟ್ಟಿದವರೇ ಈ ಕಲೆಯ ಪ್ರಮುಖ ಕಲಾವಿದರು. ವೀರಗಚ್ಚೆಯೇ, ವೀರಕಾಸೆಯಾಗಿ ನಂತರ ವೀರಗಾಸೆಯಾಗಿರಬಹುದು ಎಂಬ ಅಭಿಪ್ರಾಯವೂ ಇದೆ.

ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡುಬರುವ ಈ ವೀರಗಾಸೆಯ ವೇಷಭೂಷಣಗಳು ಪ್ರಾದೇಶಿಕತೆಗೆ ತಕ್ಕಂತೆ ಕೆಲವು ವ್ಯತ್ಯಾಸಗಳನ್ನು ಪಡೆದುಕೊಂಡಿವೆ. ಹಲವು ಕಡೆ ತಲೆಗೆ ಕೂದಲು ಮತ್ತು ರೇಷ್ಮೆದಾರದಿಂದ ತಯಾರಿಸಿದ ಚೌಲಿಯನ್ನು ಧರಿಸಲಾಗುತ್ತದೆ. ಕಾವಿ ಬಣ್ಣದ ಗರಿ ಅಂಚಿನ ಪೇಟವನ್ನು ತಲೆಗೆ ಸುತ್ತಿ, ಅದರ ಮುಂಭಾಗಕ್ಕೆ ಜಯ ಪಟ್ಟಿಯನ್ನು ಕಟ್ಟುತ್ತಾರೆ. ಸೊಂಟಕ್ಕೆ ಕಸೂತಿಗಳಿಂದ ಕೂಡಿದ ಕೆಂಪು ಬಣ್ಣದ ಜೊಲುಗಳಿದ್ದು, ಸೊಂಟದ ಎರಡು ಕಡೆ ಕಪ್ಪು ಬಣ್ಣದ ಚವರಿ ಕುಚ್ಚುಗಳಿರುತ್ತವೆ. ಸೊಂಟಕ್ಕೆ ಬಿಳಿ ಪಂಚೆಯನ್ನು ವೀರಗಚ್ಚೆಯಾಗಿ ತೊಡುತ್ತಾರೆ. ಕೆಂಪು ಬಣ್ಣದ ಪೈಜಾಮ, ಕಾಲಿಗೆ ಗೆಜ್ಜೆ, ಬಲಗೈಯಲ್ಲಿ ಮರದ ಖಡ್ಗ, ಕೊರಳಲ್ಲಿ ಬೆಳ್ಳಿಯ ಲಿಂಗದಕಾಯಿ (ಅಡ್ಡಾಯಿ) ಎಡಗೈಯಲ್ಲಿ ಕರವಸ್ತ್ರಗಳಿರುತ್ತವೆ. ಹಾಗೆಯೇ ಕೆಲವರ ಕೈಯಲ್ಲಿ ತ್ರಿಶೂಲಾಕಾರದ ಶಸ್ತ್ರಗಳಿರುವುದು ಉಂಟು. ಸಮಾಳೆ, ಮುಖವೀಣೆ, ಕಂಚಿನ ತಾಳಗಳು ಈ ಕಲೆಗೆ

ಬೇಕಾದ ಮುಖ್ಯ ವಾದ್ಯ ಪರಿಕರಗಳು, ಕಾಸೆ ಕಟ್ಟುವವರು, ಎದೆಯ ಮೇಲೆ ಲಿಂಗಧಾರಣೆ ಮಾಡಬೇಕು. ಹೀಗೆ ವೇಷ–ಭೂಷಣವನ್ನು ಕಲಾವಿದರು ಧರಿಸಿಕೊಂಡು ಸಾಮೂಹಿಕ ನೃತ್ಯವನ್ನು ಅಟ್ಟಹಾಸದಲ್ಲಿ ಕೊಡಬಲ್ಲರು, ಹೀಗಾಗಿ ಈ ಕಲೆಯನ್ನು ಜನರು ಇದೊಂದು ಗಂಡು ಕಲೆ ಎಂದು ಗುರುತಿಸಿರುವರು. ಇತ್ತೀಚಿನ ದಿನಗಳಲ್ಲಿ ರಾಜ್ಯದ ಹೆಣ್ಣುಮಕ್ಕಳೂ ಈ ಕಲೆಯನ್ನು ಕರಗತಮಾಡಿಕೊಂಡು ಪ್ರದರ್ಶನ ನೀಡುವಲ್ಲಿ ಯಶಸ್ಸನ್ನು ಸಾಧಿಸಿರುವರು.

***

## ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

**ಬಸವರಾಜ್ ಎನ್ ಗುಡಿ,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಭಾರತ ಸರ್ಕಾರ ನೀಡುವ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ ಎಂದರೆ ಅದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ವಾರ್ಷಿಕ ಪ್ರಶಸ್ತಿಗಳ ಜೊತೆಯಲ್ಲಿಯೇ ಭಾರತದ ವಿಭಿನ್ನ ಭಾಷೆಗಳ ಹಿರಿಯ ಸಾಹಿತಿಗಳನ್ನು ಆಯ್ಕೆ ಮಾಡಿ ಅವರಿಗೆ ಸಾಹಿತ್ಯ ಅಕಾಡೆಮಿ ಫೆಲೋ ಗೌರವ ನೀಡುತ್ತದೆ. ಇದರ ಜತೆಯಲ್ಲಿ ಯುವ ಸಾಹಿತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರ, ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಬಾಲ ಸಾಹಿತ್ಯ ಪುರಸ್ಕಾರ, ಅನುವಾದ ಕ್ಷೇತ್ರದ ಸಾಧನೆಗೆ ಅನುವಾದ ಬಹುಮಾನಗಳನ್ನೂ ನೀಡಿ ಗೌರವಿಸಲಾಗುತ್ತದೆ. ಈ ಪ್ರಶಸ್ತಿಗಳಿಗೆ ಭಾಜನರಾದ ಕನ್ನಡ ಸಾಹಿತ್ಯ ಲೋಕದ ದಿಗ್ಗಜರ ಪಟ್ಟಿ ಈ ಕೆಳಗಿನಂತಿದೆ.

1954ರಲ್ಲಿ ಸ್ಥಾಪನೆಯಾದ ಈ ಪ್ರಶಸ್ತಿಯನ್ನು ಪ್ರತಿವರ್ಷವೂ ಸಾಹಿತ್ಯ ಅಕಾಡೆಮಿ ಅಂಗೀಕರಿಸಿದ 24 ಭಾಷೆಗಳ ಒಂದೊಂದು ಪುಸ್ತಕಕ್ಕೆ ನೀಡಿ ಗೌರವಿಸಲಾಗುತ್ತದೆ. ಆರಂಭದಲ್ಲಿ ₹5000/– ಇದ್ದ ಹಣದ ಮೊತ್ತ,ಪ್ರಸ್ತುತ ಬಹುಮಾನದ ಮೊತ್ತ ₹1,00,000/–. ಪ್ರಶಸ್ತಿಯ ಮೊತ್ತದ ಜೊತೆಯಲ್ಲಿ ಒಂದು ತಾಮ್ರಪತ್ರ, ಪ್ರಶಸ್ತಿ ಫಲಕ ಮತ್ತು ಶಾಲನ್ನು ನೀಡಿ ಗೌರವಿಸಲಾಗುತ್ತದೆ.


ISBN : 979-889233259-0

**ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಸಾಹಿತಿಗಳು**

| ಕ್ರಮ ಸಂಖ್ಯೆ | ವರ್ಷ | ಕವಿಯ ಹೆಸರು | ಕೃತಿಯ ಹೆಸರು |
|---|---|---|---|
| 1 | 1955 | ಕುವೆಂಪು | ಶ್ರೀರಾಮಾಯಣದರ್ಶನಂ |
| 2 | 1956 | ರಂ. ಶ್ರೀ. ಮುಗಳಿ | ಕನ್ನಡ ಸಾಹಿತ್ಯ ಚರಿತ್ರೆ |
| 3 | 1958 | ದ. ರಾ. ಬೇಂದ್ರೆ | ಅರಳು ಮರಳು |
| 4 | 1959 | ಕೆ. ಶಿವರಾಮಕಾರಂತ | ಯಕ್ಷಗಾನ ಬಯಲಾಟ |
| 5 | 1960 | ವಿ. ಕೃ. ಗೋಕಾಕ | ದ್ಯಾವಪೃಥ್ವಿ |
| 6 | 1961 | ಎ. ಆರ್. ಕೃಷ್ಣಶಾಸ್ತ್ರಿ | ಬಂಕಿಮಚಂದ್ರ |
| 7 | 1962 | ದೆವುಡ | ಕ್ರಾಂತಿಕಲ್ಯಾಣ |
| 8 | 1965 | ಎಸ್. ವಿ. ರಂಗಣ್ಣ | ರಂಗಬಿನ್ನಪ |
| 9 | 1966 | ಪು. ಘ. ನರಸಿಂಹಾಚಾರ್ | ಹಂಸ ದಮಯಂತಿ ಮತ್ತು ಇತರ ರೂಪಕಗಳು |
| 10 | 1967 | ಡಿ. ವಿ. ಗುಂಡಪ್ಪ | ಶ್ರೀಮದ್ಭಗವದ್ಗೀತಾ ತಾತ್ಪರ್ಯ |
| 11 | 1968 | ಮಾಸ್ತಿ ವೆಂಕಟೇಶ ಅಯ್ಯಂಗಾರ್ | ಸಣ್ಣ ಕಥೆಗಳು |
| 12 | 1969 | ಡಾ॥ ಹೆಚ್. ಘಪ್ಪೇರುದ್ರಸ್ವಾಮಿ | ಕರ್ನಾಟಕ ಸಂಸ್ಕೃತಿ ಸಮೀಕ್ಷೆ |
| 13 | 1970 | ಶಂಬಾ ಜೋಷಿ | ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ |
| 14 | 1971 | ಶ್ರೀರಂಗ | ಕಾಳಿದಾಸ |
| 15 | 1972 | ಸಂ. ಶಿ. ಭೂಸನೂರುಮಠ | ಶೂನ್ಯ ಸಂಪಾದನೆಯ ಮರಾಮರ್ಶೆ |
| 16 | 1973 | ವಿ. ಸೀತಾರಾಮಯ್ಯ | ಅರಲು ಬರಲು |
| 17 | 1974 | ಎಂ. ಗೋಪಾಲಕೃಷ್ಣ ಅಡಿಗ | ವರ್ಧಮಾನ |

| | | | |
|---|---|---|---|
| 18 | 1975 | ಎಸ್. ಎಲ್. ಭೈರಪ್ಪ | ದಾಟು |
| 19 | 1976 | ರಾ. ಶಿ. | ಮನಮಂಥನ |
| 20 | 1977 | ಕೆ. ಎಸ್. ನರಸಿಂಹಸ್ವಾಮಿ | ತೆರೆದಬಾಗಿಲು |
| 21 | 1978 | ಬಿ. ಈ. ಎಲ್. ಸ್ವಾಮಿ | ಹಸಿರು ಹೊನ್ನು |
| 22 | 1979 | ಎ. ಎನ್. ಮೂರ್ತಿರಾವ್ | ಚಿತ್ರಗಳು–ಪತ್ರಗಳು |
| 23 | 1980 | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಅಮೇರಿಕಾದಲ್ಲಿ ಗೊರೂರು |
| 24 | 1981 | ಚನ್ನವೀರ ಕಣವಿ | ಜೀವಧ್ವನಿ |
| 25 | 1982 | ಚದರಂಗ | ವೈಶಾಖ |
| 26 | 1983 | ಯಶವಂತ ಚಿತ್ತಾಲ | ಕಥೆಯಾದಳು ಹುಡುಗಿ |
| 27 | 1984 | ಜಿ. ಎಸ್. ಶಿವರುದ್ರಪ್ಪ | ಕಾವ್ಯಾರ್ಥ ಚಿಂತನ |
| 28 | 1985 | ತ. ರಾ. ಸು. | ದುರ್ಗಾಸ್ತಮಾನ |
| 29 | 1986 | ವ್ಯಾಸರಾಯ ಬಲ್ಲಾಳ | ಬಂಡಾಯ |
| 30 | 1987 | ಕೆ. ಪಿ. ಪೂರ್ಣಚಂದ್ರ ತೇಜಸ್ವಿ | ಚಿದಂಬರ ರಹಸ್ಯ |
| 31 | 1988 | ಶಂಕರ ಮೋಕಾಶಿ ಪುಣೇಕರ | ಅವಧೇಶ್ವರಿ |
| 32 | 1989 | ಹಾ. ಮಾ. ನಾಯಕ | ಸಂಪ್ರತಿ |
| 33 | 1990 | ದೇವನೂರು ಮಾಹಾದೇವ | ಕುಸುಮಬಾಲೆ |
| 34 | 1991 | ಚಂದ್ರಶೇಖರ ಕಂಬಾರ | ಸಿರಿ ಸಂಪಿಗೆ |
| 35 | 1992 | ಸು. ರಂ. ಎಕ್ಕುಂಡಿ | ಬಕುಲದ ಹೂಗಳು |
| 36 | 1993 | ಪಿ. ಲಂಕೇಶ್ | ಕಲ್ಲು ಕರಗುವ ಸಮಯ |
| 37 | 1994 | ಗಿರೀಶ ಕಾರ್ನಾಡ್ | ತಲೆದಂಡ |


ISBN : 979-889233259-0

| | | | |
|---|---|---|---|
| 38 | 1995 | ಕೀರ್ತಿನಾಥ ಕುರ್ತುಕೋಟಿ | ಉರಿಯನಾಲಿಗೆ |
| 39 | 1996 | ಜಿ. ಎಸ್. ಅಮೂರ | ಭುವನದ ಭಾಗ್ಯ |
| 40 | 1997 | ಎಂ. ಚಿದಾನಂದಮೂರ್ತಿ | ಹೊಸತು–ಹೊಸತು |
| 41 | 1998 | ಬಿ. ಸಿ. ರಾಮಚಂದ್ರಶರ್ಮ | ಸಪ್ತಪದಿ |
| 42 | 1999 | ಡಿ. ಆರ್. ನಾಗರಾಜ್ | ಸಾಹಿತ್ಯ ಕಥನ |
| 43 | 2000 | ಎಲ್. ಬಸವರಾಜು | ಬುದ್ಧಚರಿತ |
| 44 | 2002 | ಸುಜನಾ (ನಾರಾಯಣಶೆಟ್ಟಿ) | ಯುಗಸಂಧ್ಯಾ |

***

## ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು

**ಸ್ನೇಹ ಎಸ್,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಜ್ಞಾನಪೀಠ ಪ್ರಶಸ್ತಿ ಭಾರತದ ಸಾಹಿತಿಗಳಿಗೆ ಸಲ್ಲುವ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ. ಈ ಪ್ರಶಸ್ತಿಯು ಭಾರತದ ಸಂವಿಧಾನದ ಎಂಟನೆ ಅನುಚ್ಛೇದದಲ್ಲಿ ಉಲ್ಲೇಖವಾಗಿರುವ ಭಾಷೆಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಯನ್ನು ಅಥವಾ ಸಮಗ್ರ ಸಾಹಿತ್ಯದ ಕೊಡುಗೆಯನ್ನು ನೀಡಿದ ಭಾರತೀಯ ನಾಗರಿಕನಿಗೆ ಲಭಿಸುವುದು. ಸಾಹು ಜೈನ್ ಪರಿವಾರದವರು, ಈ ಪ್ರಶಸ್ತಿಯನ್ನು ಮೇ 22, 1961 ರಲ್ಲಿ ಸ್ಥಾಪಿಸಿದರು. ಈ ಪ್ರಶಸ್ತಿಯನ್ನು ಪ್ರಪ್ರಥಮವಾಗಿ 1965ರಲ್ಲಿ ಮಲೆಯಾಳಂ ಲೇಖಕ ಜಿ. ಶಂಕರ ಕುರುಪರಿಗೆ ಪ್ರದಾನ ಮಾಡಲಾಯಿತು. ವಿಜೇತರಿಗೆ ಪ್ರಶಸ್ತಿ ಫಲಕ, 11 ಲಕ್ಷ ರೂಪಾಯಿ ಚೆಕ್ ಹಾಗೂ ವಾಗ್ಗೇವಿಯ ಕಂಚಿನ ವಿಗ್ರಹವನ್ನು ನೀಡಿ ಗೌರವಿಸಲಾಗುವುದು.

ಈ ಪ್ರಶಸ್ತಿಯನ್ನು ಸರಕಾರ ನೀಡುತ್ತದೆ ಎಂಬ ತಪ್ಪು ಕಲ್ಪನೆಯೂ ವ್ಯಾಪಕವಾಗಿದೆ. ವಾಸ್ತವದಲ್ಲಿ ಈ ಪ್ರಶಸ್ತಿಯನ್ನು ನೀಡುವವರು ಜ್ಞಾನಪೀಠ ಟ್ರಸ್ಟ್. ಟೈಮ್ಸ್ ಆಫ್ ಇಂಡಿಯಾದ ಒಡೆತನವನ್ನು ಹೊಂದಿರುವ ಜೈನ್ ಕುಟುಂಬ ಜ್ಞಾನಪೀಠ ಟ್ರಸ್ಟ್ ನ ಸ್ಥಾಪಕರು. ಈಗಲೂ ಅದರ ಸದಸ್ಯರಲ್ಲಿ ಹೆಚ್ಚಿನವರು ಈ ಕುಟುಂಬಕ್ಕೆ ಸೇರಿದ್ದಾರೆ.


ISBN : 979-889233259-0

1982ರಿಂದ, ಈ ಪ್ರಶಸ್ತಿಯನ್ನು ಭಾರತೀಯ ಸಾಹಿತ್ಯಕ್ಕೆ ಸಮಗ್ರ ಕೊಡುಗೆಯನ್ನು ನೀಡಿದ ಲೇಖಕರಿಗೆ ಸಂದಾಯವಾಗುತ್ತಿದೆ. ಈವರೆಗೆ ಹಿಂದಿ ಸಾಹಿತಿಗಳು ಹತ್ತು ಪ್ರಶಸ್ತಿಗಳನ್ನು ಪಡೆದು ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆಯನ್ನಾಗಿ ಮಾಡಿದ್ದಾರೆ. ಕನ್ನಡ ಭಾಷೆಯು ಎಂಟು ಪ್ರಶಸ್ತಿಯನ್ನು ಪಡೆದು ಎರಡನೆ ಸ್ಥಾನದಲ್ಲಿದೆ. 1982 ರಿಂದ ಒಂದು ಕೃತಿಯ ಬದಲಿಗೆ ಸಮಗ್ರ ಸಾಹಿತ್ಯದ ಕೊಡುಗೆಯನ್ನು ಗಮನಿಸಿ ನೀಡಲಾಗುತ್ತಿದೆ.

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪಟ್ಟಿ**

| ಕ್ರಮ ಸಂಖ್ಯೆ | ವರ್ಷ | ಕವಿಯ ಹೆಸರು | ಕೃತಿಯ ಹೆಸರು |
|---|---|---|---|
| 1 | 1967 | ಕುವೆಂಪು (ಕೆ.ವಿ.ಪುಟ್ಟಪ್ಪ) | ಶ್ರೀ ರಾಮಾಯಣ ದರ್ಶನಂ |
| 2 | 1973 | ದ. ರಾ. ಬೇಂದ್ರೆ | ನಾಕುತಂತಿ |
| 3 | 1977 | ಶಿವರಾಮ ಕಾರಂತ | ಮೂಕಜ್ಜಿಯ ಕನಸುಗಳು |
| 4 | 1983 | ಮಾಸ್ತಿವೆಂಕಟೇಶ ಅಯ್ಯಂಗಾರ್ | ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆ. |
| 5 | 1990 | ವಿ. ಕೃ. ಗೋಕಾಕ | ಭಾರತ ಸಿಂಧುರಶ್ಮಿ |
| 6 | 1994 | ಯು. ಆರ್. ಅನಂತಮೂರ್ತಿ | ಸಮಗ್ರ ಸಾಹಿತ್ಯಕ್ಕೆ ಕೊಡುಗೆ |
| 7 | 1998 | ಗಿರೀಶ್ ಕಾರ್ನಾಡ್ | ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆ. |
| 8 | 2010 | ಚಂದ್ರಶೇಖರ ಕಂಬಾರ | ಕನ್ನಡ ಸಾಹಿತ್ಯಕ್ಕೆ ಸಮಗ್ರ ಕೊಡುಗೆ |

**ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡಿಗರು**

**ಕುವೆಂಪು**

ಕನ್ನಡಕ್ಕೆ ಮೊಟ್ಟಮೊದಲು ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು ಕೆ.ವಿ. ಪುಟ್ಟಪ್ಪನವರು. ಇವರು 'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಸಿದ್ದರು. ಇವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಇವರ "ಶ್ರೀ ರಾಮಾಯಣ ದರ್ಶನಂ" ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ 1968 ರಲ್ಲಿ 'ಜ್ಞಾನಪೀಠ ಪ್ರಶಸ್ತಿ'ಯನ್ನು ನೀಡಿ ಗೌರವಿಸಿತು. ಕುವೆಂಪುರವರು ಜಲಗಾರ, ಸ್ಮಶಾನಕುರುಕ್ಷೇತ್ರ, ಶೂದ್ರತಪಸ್ವಿ, ಬೆರಳ್ಗೆ ಕೊರಳ್, ಅವರು


**ISBN : 979-889233259-0**

ರಚಿಸಿದ ಜನಪ್ರಿಯ ನಾಟಕಗಳು. ಪಾಂಚಜನ್ಯ, ಪಕ್ಷಿಕಾಶಿ, ನವಿಲು, ಮುಂತಾದುವುಗಳು ಅವರ ಕವನ ಸಂಕಲನಗಳು. ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಎಂಬ ಕಾದಂಬರಿಗಳನ್ನೂ ಸಹ ರಚಿಸಿದ್ದಾರೆ. 'ನೆನಪಿನ ದೋಣಿ' ಇವರ ಆತ್ಮಕಥೆ.

**ದ. ರಾ. ಬೇಂದ್ರೆ**

ಅಂಬಿಕಾತನಯ ದತ್ತ ಎಂಬ ಕಾವ್ಯನಾಮ ಹೊಂದಿದ್ದ ಕನ್ನಡದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ (ದ.ರಾ. ಬೇಂದ್ರೆ)ಯವರು ಧಾರವಾಡದಲ್ಲಿ 1886ರ ಜನವರಿ 31ರಂದು ಜನಿಸಿದರು. "ನಾಕುತಂತಿ ವರಕವಿ ದ. ರಾ. ಬೇಂದ್ರೆಯವರ ಕವನ ಸಂಕಲನ, ಇದಕ್ಕಾಗಿ ಬೇಂದ್ರೆಯವರಿಗೆ 1973ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರಕಿತು. ಅಂಬಿಕಾತನಯ ದತ್ತರ ಪ್ರಮುಖ ಕೃತಿಗಳೆಂದರೆ ಕೃಷ್ಣಕುಮಾರಿ, ಗರಿ, ನಾಕುತಂತಿ, ಸಖಿಗೀತ, ನಾದಲೀಲೆ, ಉಯ್ಯಾಲೆ, ಅರಳುಮರಳು, ನಾಕುತಂತಿ, ಬಾ ಹತ್ತಿರ, ಸೂರ್ಯಪಾನ, ಮೂರ್ತಿ ಮತ್ತು ಕಾಮಕಸ್ತೂರಿ, ಹೃದಯ ಸಮುದ್ರ, ಮುಕ್ತ ಕಂಠ, ಸಂಚಯ, ಉತ್ತರಾಯಣ ಮುಂತಾದ ಕವನ ಸಂಗ್ರಹಗಳು. ಬಾಲಬೋಧೆ, ಪರಾಕಿ, ಕಾವ್ಯ ವೈಖರಿ ಮುಂತಾದ 20ಕ್ಕೂ ಅಧಿಕ ಗದ್ಯ ಬರಹ ಸಂಗ್ರಹಗಳು, ಸಾಹಿತ್ಯವಿಮರ್ಶೆ, ಸಾಹಿತ್ಯ ಸಂಶೋಧನೆ, ವಿಚಾರ ಮಂಜರಿ, ಮುಂತಾದ ಹಲವು ಸಾಹಿತ್ಯ ಗ್ರಂಥಗಳನ್ನು ರಚಿಸಿದ್ದಾರೆ.

**ಶಿವರಾಮ ಕಾರಂತ**

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕು ಸಮೀಪದ ಕೋಟದಲ್ಲಿ 1902ಅಕ್ಟೋಬರ್ 10 ರಂದು ಜನಿಸಿದ್ದ ಶಿವರಾಮ ಕಾರಂತರು, ಪ್ರೌಢಶಿಕ್ಷಣವನ್ನಷ್ಟೇ ಪಡೆದಿದ್ದರು. ಇವರ 'ಮೂಕಜ್ಜಿ ಕನಸುಗಳು' ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು ಶ್ರೇಷ್ಠ ಕಾದಂಬರಿಕಾರ, ಕಲಾವಿದ, ಅಲೆಮಾರಿ, ಪತ್ರಕರ್ತ, ಪರಿಸರವಾದಿ, ಸಿನಿಮಾ ನಿರ್ಮಾಪಕರಾಗಿ, ನೃತ್ಯಪಟುವಾಗಿ, ಛಾಯಾಗ್ರಾಹಕರಾಗಿ ಹೀಗೆ ಸಾಹಿತ್ಯ–ಸಂಸ್ಕೃತಿಯ ಹತ್ತು ಹಲವು ಪ್ರಕಾರಗಳಲ್ಲಿ ಕೈಯಾಡಿಸಿ, ನಡೆದಾಡುವ ವಿಶ್ವಕೋಶ ಎಂದೇ ಖ್ಯಾತಿಗಳಿಸಿದ್ದರು.

**ಮಾಸ್ತಿ ವೆಂಕಟೇಶ ಅಯ್ಯಂಗಾರ**

ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರಲ್ಲೊಬ್ಬರಾದ 'ಸಣ್ಣಕಥೆಗಳ ಜನಕ' ಎಂದೇ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಸುಪ್ರಸಿದ್ಧರಾಗಿದ್ದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಂತೂ 'ಮಾಸ್ತಿ ಕನ್ನಡದ ಆಸ್ತಿ' ಎಂಬ ನುಡಿಗಟ್ಟಿಗೆ ಪಾತ್ರರಾಗಿದ್ದರು. ಇವರಿಗೆ ಮೈಸೂರು ಅರಸರು 'ರಾಜಸೇವಾಸಕ್ತ' ಎಂಬ ಬಿರುದನ್ನು


ISBN : 979-889233259-0

ನೀಡಿದರು. ಮಾಸ್ತಿಯವರ ಪ್ರಮುಖ ಕೃತಿಗಳಲ್ಲೊಂದು 'ಚಿಕ್ಕವೀರ ರಾಜೇಂದ್ರ' ಕಾದಂಬರಿ. ಇನ್ನೊಂದು 'ಚೆನ್ನಬಸವ ನಾಯಕ', ರಾಜವಂಶಗಳ ಉನ್ನತಿ ಅವನತಿಗಳು ಇವುಗಳ ಕಾಥಾವಸ್ತು. ಮಾಸ್ತಿಯವರ ಇತರ ಕೃತಿಗಳೆಂದರೆ ಶೇಷಮ್ಮ, ಸುಬ್ಬಣ್ಣ ಮುಂತಾದ ದೊಡ್ಡ ಕಥೆಗಳು, ಗೌಡರ ಮಲ್ಲಿ, ರಾಮನವಮಿ. ಮೂಕನ ಮಕ್ಕಳು, ಸುನೀತಾ, ಬಿನ್ನಹ, ತಾವರೆ, ಮಲಾರ, ಚೆಲುವು, ಸಂಕ್ರಾಂತಿ, ಮಾನವ ಇತ್ಯಾದಿ ಕಾವ್ಯಪ್ರಕಾರದ ಕೃತಿಗಳು.

**ಡಾ. ವಿ. ಕೃ. ಗೋಕಾಕ್**

ಕನ್ನಡ ಸಾಹಿತ್ಯಲೋಕದ ದಿಗ್ಗಜರಲ್ಲಿ ಡಾ. ವಿ. ಕೃ. ಗೋಕಾಕ್ ಒಬ್ಬರು. ಇವರು ಸಾಹಿತ್ಯ ಕ್ಷೇತ್ರದಲ್ಲಿಯಂತೆಯೇ ಭಾಷಾ ಕ್ಷೇತ್ರಕ್ಕೂ ಅಪಾರ ಕೊಡುಗೆ ನೀಡಿದವರು. ವಿನಾಯಕ ಕೃಷ್ಣ ಗೋಕಾಕ್ ಅವರು ವಿ. ಕೃ. ಗೋಕಾಕ್ ಎಂದೇ ಸುಪರಿಚಿತರಾಗಿದ್ದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಡಾ. ವಿ. ಕೃ. ಗೋಕಾಕರಿಗೆ ಭಾರತದ ಶ್ರೇಷ್ಠತಮ ಸಾಹಿತ್ಯ ಪ್ರಶಸ್ತಿಯಾದ ಜ್ಞಾನಪೀಠ (1990) ಲಭಿಸಲು ಕಾರಣವಾದ ಕೃತಿ 'ಭಾರತ ಸಿಂಧುರಶ್ಮಿ' ಎಂಬ ಮಹಾಕಾವ್ಯ. ಈ ಮಹಾಕಾವ್ಯವು ಎರಡು ಸಂಪುಟಗಳಲ್ಲಿದ್ದು, 12 ಖಂಡಗಳನ್ನು ಹೊಂದಿದೆ.

**ಡಾ. ಯು. ಆರ್. ಅನಂತಮೂರ್ತಿ**

ಕನ್ನಡಕ್ಕೆ ಆರನೆಯ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರು ಅನಂತಮೂರ್ತಿಯವರು. ಅನಂತಮೂರ್ತಿಯವರು ಸಣ್ಣಕತೆಗಾರರಾಗಿ ಹಾಗೂ ಕಾದಂಬರಿಕಾರರಾಗಿ ಪ್ರಸಿದ್ಧರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. 1955ರಲ್ಲಿ 'ಎಂದೆಂದೂ ಮುಗಿಯದ ಕತೆ' ಎಂಬ ಕಥಾಸಂಕಲನದಿಂದ ಅವರ ಸಾಹಿತ್ಯ ಕೃಷಿ ಆರಂಭವಾಯಿತು. ಪ್ರಶ್ನೆ, ಮೌನಿ, ಆಕಾಶ ಮತ್ತು ಬೆಕ್ಕು, ಸೂರ್ಯನ ಕುದುರೆ, ಐದು ದಶಕಗಳ ಕಥೆಗಳು. ಇವು ಇವರ ಕಥಾಸಂಕಲನಗಳು. ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ, ದಿವ್ಯ, ಇವರ ಕಾದಂಬರಿಗಳು. ಪ್ರಜ್ಞೆ ಮತ್ತು ಪರಿಸರ, ಸನ್ನಿವೇಶ, ಸಮಕ್ಷಮ, ಪೂರ್ವಾಪರ, ಬೆತ್ತಲೆ ಪೂಜೆ ಯಾಕೆ ಕೂಡದು, ಇವುಗಳು ವಿಮರ್ಶೆಗಳು, ಹದಿನೈದು ಪದ್ಯಗಳು, ಅಜ್ಜನ ಹೆಗಲ ಸುಕ್ಕುಗಳು, ಮಿಥುನ ಇವರ ಕವನಸಂಕಲನಗಳು.

**ಗಿರೀಶ್ ಕಾರ್ನಾಡ್**

ಗಿರೀಶ್ ಕಾರ್ನಾಡರು 1938ರ ಮೇ 19ರಂದು ಮಹಾರಾಷ್ಟ್ರದ ಮಾಥೆರ್ನ ಎಂಬಲ್ಲಿ ಜನಿಸಿದರು. ಗಿರೀಶರ ಮೊದಲನೆ ಕೃತಿ 'ಯಾಯಾತಿ' ಎಂಬ ನಾಟಕ. ಈ ನಾಟಕವು ಇವರಿಗೆ ದೊಡ್ಡಮಟ್ಟದಲ್ಲಿ ಪ್ರಶಂಸೆ


ISBN : 979-889233259-0

ಮತ್ತು ಪ್ರಚಾರವನ್ನು ತಂದುಕೊಟ್ಟಿತು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಹಿಟ್ಟಿನಹುಂಜ ಮತ್ತು ಅಗ್ನಿ ಹಾಗೂ ಮಳೆ ಇವು ಪೌರಣಿಕ ನಾಟಕಗಳಾದರೆ, ತುಘಲಕ್, ತಲೆದಂಡ ಹಾಗೂ ಟೀಪುಸುಲ್ತಾನ್ ನಾಟಕಗಳು ಐತಿಹಾಸಿಕ ಹಿನ್ನಲೆಯುಳ್ಳವು, ಜಾನಪದ ವಸ್ತುಗಳನ್ನು ಒಳಗೊಂಡ ನಾಟಕಗಳು ಹಯವದನ, ನಾಗಮಂಡಲ, ಸಾಮಾಜಿಕ ನಾಟಕ ಅಂಜುಮಲ್ಲಿಗೆ, ಗಿರೀಶ್ ಕಾರ್ನಾಡ್ ನಾಟಕಗಳು ಇಂಗ್ಲಿಷ್, ಹಿಂದಿ, ಮರಾಠಿ ಹಾಗೂ ಇತರೇ ಭಾರತೀಯ ಭಾಷೆಗಳಲ್ಲಿ ಪ್ರದರ್ಶನಗೊಂಡಿವೆ. ನಾಟಕಗಳ ರಚನೆಯ ಜೊತೆಗೆ ಇವರು ರಂಗಭೂಮಿಯಲ್ಲಿ ಹಾಗೂ ಚಲನಚಿತ್ರ ರಂಗಗಳಲ್ಲಿ ಅಭಿನಯ ಮತ್ತು ನಿರ್ದೇಶಕರಾಗಿ ಜನಪ್ರಿಯರಾಗಿದ್ದಾರೆ.

**ಡಾ. ಚಂದ್ರಶೇಖರ ಕಂಬಾರ**

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ 2 ಜನವರಿ 1937ರಂದು ಡಾ. ಚಂದ್ರಶೇಖರ ಕಂಬಾರರು ಜನಿಸಿದರು. ಕನ್ನಡ ಸಾಹಿತ್ಯಕ್ಕೆ ಇವರ ಸಮಗ್ರ ಕೊಡುಗೆಗಾಗಿ ಜ್ಞಾನಪೀಠ ಲಭಿಸಿದೆ. ಕಂಬಾರರು ರಚಿಸಿರುವ ಪ್ರಮುಖ ಕೃತಿಗಳೆಂದರೆ, ಮುಗುಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು, ಬೆಳ್ಳಿಮೀನು, ಅಕ್ಕಕ್ಕು ಹಾಡುಗಳೆ, ಚಕೋರಿ ಇವು ಕಾವ್ಯಗಳು. ನಾಟಕಗಳು – ಬೆಂಬತ್ತಿದ ಕಣ್ಣು, ನಾರ್ಸಿಸಸ್, ಜೋಕುಮಾರ ಸ್ವಾಮಿ, ಚಾಳೇಶ, ಕಿಟ್ಟಿಯ ಕತೆ, ಜೈಸಿದ ನಾಯಕ, ಕಾಡು ಕುದುರೆ, ನಾಯೀ ಕತೆ ಮುಂತಾದುವು. ಕಾದಂಬರಿ – ಅಣ್ಣ ತಂಗಿ, ಕರಿಮಾಯಿ, ಜೀಕೆ ಮಾಸ್ತರ ಪ್ರಣಯ ಪ್ರಸಂಗ, ಸಿಂಗಾರೆವ್ವಾ ಮತ್ತು ಅರಮನೆ. ಜಾನಪದ– ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಸಂಗ್ಯಾಬಾಳ್ಯಾ, ಬಣ್ಣಿಸಿ ಹಾಡವ್ವ ನನ ಬಳಗ, ಬಯಲಾಟಗಳು, ಮಾತಡೋ ಲಿಂಗವೇ ಮುಂತಾದವುಗಳು.

***


ISBN : 979-889233259-0

## ಪಂಪ ಪ್ರಶಸ್ತಿ ಪುರಸ್ಕೃತರು

**ಮೇಘ ಕೆ,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಪಂಪ ಪ್ರಶಸ್ತಿ (ಅಥವಾ ಪಂಪ ಪ್ರಶಸ್ತಿ) ಭಾರತದ ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರವು 1987 ರಲ್ಲಿ ಸ್ಥಾಪಿಸಿತು. ಇದು ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನೀಡುವ ಅತ್ಯುನ್ನತ ಸಾಹಿತ್ಯ ಗೌರವವಾಗಿದೆ ಮತ್ತು ಕನ್ನಡ ಭಾಷೆಯಲ್ಲಿ ಬರೆದ ಕೃತಿಗಳನ್ನು ಗುರುತಿಸುತ್ತದೆ.

**ಪಂಪ ಪ್ರಶಸ್ತಿ**

ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಿಗಾಗಿ ನಾಗರಿಕ ಪ್ರಶಸ್ತಿಗೆ ಪ್ರಶಸ್ತಿ ನೀಡಲಾಗಿದೆ . ಕರ್ನಾಟಕದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿ ಕರ್ನಾಟಕ ಸರ್ಕಾರ ಪ್ರತಿಫಲಗಳು) ₹ 1 ಲಕ್ಷ (1987–2007), ₹ 3 ಲಕ್ಷ (2008– ಇಂದಿನವರೆಗೆ) ಪ್ರಸ್ತುತ – 5 ಲಕ್ಷ, ಮೊದಲು ಪ್ರಶಸ್ತಿ ನೀಡಲಾಯಿತು 1987, ಕೊನೆಯದಾಗಿ ಪ್ರಶಸ್ತಿ ನೀಡಲಾಗಿದೆ 2022, ಮುಖ್ಯಾಂಶಗಳು, ಒಟ್ಟು ಪ್ರಶಸ್ತಿ ನೀಡಲಾಗಿದೆ 36, ಮೊದಲ ವಿಜೇತ ಕುವೆಂಪು ಕೊನೆಯ ವಿಜೇತ ಡಾ ಎಸ್ ಆರ್ ರಾಮಸ್ವಾಮಿ, 2021 ಬಾಬು ಕೃಷ್ಣಮೂರ್ತಿ, ಕನ್ನಡದ ಮೊದಲ ಕವಿ ಆದಿಕವಿ ಪಂಪ ಅವರ ಹೆಸರನ್ನು ಈ ಪ್ರಶಸ್ತಿಗೆ ಇಡಲಾಗಿದೆ. ಪ್ರಶಸ್ತಿಯು ಮೂಲತಃ ₹ 1 ಲಕ್ಷ ($1,300), ಒಂದು ಶಾಲು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿತ್ತು. 2008 ರಲ್ಲಿ ನಗದು ಬಹುಮಾನವನ್ನು ₹ 3 ಲಕ್ಷಕ್ಕೆ ($3,800) ಹೆಚ್ಚಿಸಲಾಯಿತು. 1996 ಕ್ಕಿಂತ ಮೊದಲು, ಕನ್ನಡ ಬರಹಗಾರರ ಅತ್ಯುತ್ತಮ ಏಕ ಕೃತಿಗಾಗಿ ಪ್ರಶಸ್ತಿಗಳನ್ನು ನೀಡಲಾಯಿತು. ಅಂದಿನಿಂದ, ಕನ್ನಡ ಸಾಹಿತ್ಯಕ್ಕೆ ಜೀವಮಾನದ ಕೊಡುಗೆಗಾಗಿ ಬರಹಗಾರರಿಗೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪಂಪನ ಹುಟ್ಟೂರಾದ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ವಾರ್ಷಿಕವಾಗಿ ನಡೆಯುವ ಸಾಂಸ್ಕೃತಿಕ ಉತ್ಸವವಾದ ಕದಂಬೋತ್ಸವದ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಪಂಪ ಪ್ರಶಸ್ತಿಯನ್ನು ಪ್ರದಾನ ಮಾಡುತ್ತಾರೆ.

1987 ರಲ್ಲಿ ಪ್ರಾರಂಭವಾದಾಗಿನಿಂದ, ಈ ಪ್ರಶಸ್ತಿಯನ್ನು ಒಟ್ಟು 31 ವ್ಯಕ್ತಿಗಳಿಗೆ ನೀಡಲಾಗಿದೆ. ಕುವೆಂಪು ಅವರು ಭಾರತೀಯ ಮಹಾಕಾವ್ಯ ರಾಮಾಯಣದ ಆಧುನಿಕ ನಿರೂಪಣೆಯಾದ ಶ್ರೀ ರಾಮಾಯಣ ದರ್ಶನಂ (1949) ಕೃತಿಗಾಗಿ ಗೌರವ ಪಡೆದ ಮೊದಲ ಪ್ರಶಸ್ತಿಯನ್ನು ಪಡೆದರು. 2015 ರಲ್ಲಿ, ವಿದ್ವಾಂಸ


ISBN : 979-889233259-0

ಎಂಎಂ ಕಲಬುರ್ಗಿ ಅವರ ಹತ್ಯೆಯ ವಿರುದ್ಧ ಪ್ರತಿಭಟನೆಯ ಸಂಕೇತವಾಗಿ ಚಂದ್ರಶೇಖರ ಪಾಟೀಲ್ ಅವರು ತಮ್ಮ ಪ್ರಶಸ್ತಿಯನ್ನು ಹಿಂದಿರುಗಿಸಿದರು. ಕುವೆಂಪು ಅವರು ಈ ಪ್ರಶಸ್ತಿಗೆ ಮೊದಲ ಭಾಜನರಾಗಿದ್ದರು.

**ಪಂಪ ಪ್ರಶಸ್ತಿ ಪುರಸ್ಕೃತರ ಪಟ್ಟಿ**

| ಕ್ರಮ ಸಂಖ್ಯೆ | ವರ್ಷ | ಕವಿಯ ಹೆಸರು | ಕೃತಿಯ ಹೆಸರು |
|---|---|---|---|
| 1 | 1987 | ಕುವೆಂಪು | ಶ್ರೀ ರಾಮಾಯಣ ದರ್ಶನಂ |
| 2 | 1988 | ಟಿಎನ್ ಶ್ರೀಕಂಠಯ್ಯ | ಭಾರತೀಯ ಕಾವ್ಯ ಮೀಮಾಂಸೆ |
| 3 | 1989 | ಕೆ.ಶಿವರಾಮ ಕಾರಂತ | ಮೈ ಮನಗಳ ಸುಳಿಯಲಿ |
| 4 | 1990 | ಎಸ್.ಎಸ್.ಭೂಸನೂರಮಠ | ಶೂನ್ಯ ಸಂಪಾದನೇಯ ಪರಾಮರ್ಶೆ |
| 5 | 1991 | ಪಿಟಿ ನರಸಿಂಹಾಚಾರ್ | ಶ್ರೀ ಹರಿಚರಿತ |
| 6 | 1992 | ಎ.ಎನ್ ಮೂರ್ತಿ ರಾವ್ | ದೇವರು |
| 7 | 1993 | ಗೋಪಾಲಕೃಷ್ಣ ಅಡಿಗ | ಸುವರ್ಣ ಪುತ್ಥಳಿ |
| 8 | 1994 | ಸೇಡಿಯಾಪು ಕೃಷ್ಣ ಭಟ್ಟ | ವಿಚಾರ ಪ್ರಪಂಚ |
| 9 | 1995 | ಕೆ.ಎಸ್.ನರಸಿಂಹಸ್ವಾಮಿ | ದುಂಡು ಮಲ್ಲಿಗೆ |
| 10 | 1996 | ಎಂ ಎಂ ಕಲಬುರ್ಗಿ | ಜೀವಮಾನದ ಕೊಡುಗೆ |
| 11 | 1997 | ಜಿ ಎಸ್ ಶಿವರುದ್ರಪ್ಪ | ಜೀವಮಾನದ ಕೊಡುಗೆ |
| 12 | 1998 | ಜವರೇಗೌಡ | ಜೀವಮಾನದ ಕೊಡುಗೆ |
| 13 | 1999 | ಚೆನ್ನವೀರ ಕಣವಿ | ಜೀವಮಾನದ ಕೊಡುಗೆ |
| 14 | 2002 | ಎಂ.ಚಿದಾನಂದ ಮೂರ್ತಿ | ಜೀವಮಾನದ ಕೊಡುಗೆ |
| 15 | 2000 | ಎಲ್.ಬಸವರಾಜು | ಜೀವಮಾನದ ಕೊಡುಗೆ |
| 16 | 2001 | ಪೂರ್ಣಚಂದ್ರ ತೇಜಸ್ವಿ | ಜೀವಮಾನದ ಕೊಡುಗೆ |


ISBN : 979-889233259-0

| | | | |
|---|---|---|---|
| 17 | 2003 | ಚಂದ್ರಶೇಖರ ಕಂಬಾರ | ಜೀವಮಾನದ ಕೊಡುಗೆ |
| 18 | 2004 | ಎಚ್ ಎಲ್ ನಾಗೇಗೌಡ | ಜೀವಮಾನದ ಕೊಡುಗೆ |
| 19 | 2005 | ಎಸ್ ಎಲ್ ಭೈರಪ್ಪ | ಜೀವಮಾನದ ಕೊಡುಗೆ |
| 20 | 2006 | ಜಿ ಎಸ್ ಅಮುರ್ | ಜೀವಮಾನದ ಕೊಡುಗೆ |
| 21 | 2007 | ಯಶವಂತ ವಿ. ಚಿತ್ತಾಲ್ | ಜೀವಮಾನದ ಕೊಡುಗೆ |
| 22 | 2008 | ಟಿ ವಿ ವೆಂಕಟಾಚಲ ಶಾಸ್ತ್ರಿ | ಜೀವಮಾನದ ಕೊಡುಗೆ |
| 23 | 2009 | ಚಂದ್ರಶೇಖರ ಪಾಟೀಲ | ಜೀವಮಾನದ ಕೊಡುಗೆ |
| 24 | 2010 | ಗೋವಿಂದರಾಯ ಹೆಚ್.ನಾಯಕ್ | ಜೀವಮಾನದ ಕೊಡುಗೆ |
| 25 | 2011 | ಬರಗೂರು ರಾಮಚಂದ್ರಪ್ಪ | ಜೀವಮಾನದ ಕೊಡುಗೆ |
| 26 | 2012 | ಡಿ ಎನ್ ಶಂಕರಭಟ್ | ಜೀವಮಾನದ ಕೊಡುಗೆ |
| 27 | 2013 | ಕಯ್ಯರ್ ಕಿಞಣ್ಣ ರೈ | ಜೀವಮಾನದ ಕೊಡುಗೆ |
| 28 | 2014 | ಜಿ. ವೆಂಕಟಸುಬ್ಬಯ್ಯ | ಕನ್ನಡ ನಿಘಂಟು |
| 29 | 2015 | ಬಿ ಎ ಸನದಿ | ಜೀವಮಾನದ ಕೊಡುಗೆ |
| 30 | 2016 | ಹಂಪನಾ | ಜೀವಮಾನದ ಕೊಡುಗೆ |
| 31 | 2017 | ಕೆ ಎಸ್ ನಿಸ್ಸಾರ್ ಅಹಮದ್ | ಜೀವಮಾನದ ಕೊಡುಗೆ |
| 32 | 2018 | ಎಸ್.ಶೆಟ್ಟರ್ | ಜೀವಮಾನದ ಕೊಡುಗೆ |
| 33 | 2019 | ಸಿದ್ದಲಿಂಗಯ್ಯ | ಜೀವಮಾನದ ಕೊಡುಗೆ |
| 34 | 2020 | ಸಿ ಪಿ ಕೃಷ್ಣ ಕುಮಾರ್, | ಜೀವಮಾನದ ಕೊಡುಗೆ |
| 35 | 2021 | ಬಾಬು ಕೃಷ್ಣಮೂರ್ತಿ | ಜೀವಮಾನದ ಕೊಡುಗೆ |
| 36 | 2022 | ಡಾ ಎಸ್ ಆರ್ ರಾಮಸ್ವಾಮಿ. | ಜೀವಮಾನದ ಕೊಡುಗೆ |


ISBN : 979-889233259-0

## ಕನ್ನಡದ ಶಾಸನಗಳು

**ರಂಜಿತಾ ಎಲ್,** ಪ್ರಶಿಕ್ಷಣಾರ್ಥಿ, ನಾಲ್ಕನೆಯ ಸೆಮಿಸ್ಟರ್

ಶಾಸನಗಳು ಎಂದರೆ ಬಹುಕಾಲ ಉಳಿಯುವಂತಹ ಶಿಲೆ, ಲೋಹ ಮೊದಲಾದುವುಗಳ ಮೇಲಿನ ಬರಹ. ಶಾಸನ ಎಂಬ ಸಂಸ್ಕೃತ ಪದಕ್ಕೆ ಆಜ್ಞೆ (ರಾಜಾಜ್ಞೆ) ಎಂದುದು ಮೂಲಾರ್ಥ. ಶಾಸ್ ಧಾತುವಿನಿಂದ ಬಂದದ್ದು ಶಾಸನ. ಶಾಸ್ ಎಂದರೆ – ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂಬ ಅರ್ಥಗಳಿವೆ. ಮೂಲತಃ ಶಾಸನ ಎಂಬುದು ದಾನ ಸಂಬಂಧವಾದ ರಾಜಾಜ್ಞೆ, ಒಟ್ಟಿನಲ್ಲಿ ಶಾಸನವೆಂದರೆ ಗಟ್ಟಿಯಾದ ಅಥವಾ ಶಾಶ್ವತವಾದ ಯಾವುದೇ ಬಗೆಯ ದಾಖಲೆಗಳು. ಶಾಸನಗಳೇ ಕರ್ನಾಟಕದ ಐತಿಹಾಸಿಕ ಪರಂಪರೆಯ ರಚನೆಗೆ ಒದಗಿಸುವ ಮುಖ್ಯ ಮಾಹಿತಿ ಕೋಶ. ಶಾಸನಗಳು ವಾಸ್ತವ ವಿಷಯಗಳ ದಾಖಲೆಗಳಾದ್ದರಿಂದ ಅವುಗಳಲ್ಲಿ ದೊರಕುವ ವಿಷಯ ಸಂಪತ್ತು ಅಗಾಧವಾದುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ 950 ಶಾಸನಗಳು ಪತ್ತೆಯಾಗಿದ್ದು, ಅವುಗಳಲ್ಲಿ 350 ಹೊಯ್ಸಳ ಅರಸರ ಕಾಲದವು ಎನ್ನಲಾಗಿದೆ. ಭಾರತದಲ್ಲಿ ತಮಿಳುನಾಡನ್ನು ಬಿಟ್ಟರೆ ಅತಿ ಹೆಚ್ಚಿನ ಸಂಖ್ಯೆಯ ಶಾಸನಗಳು ಕರ್ನಾಟಕದಲ್ಲಿ ದೊರೆಯುತ್ತವೆ.

**ಹಲ್ಮಿಡಿ ಶಾಸನದ ಪಠ್ಯಶಾಸನಗಳು:** ಬಹುಶಃ ತಮಿಳುನಾಡನ್ನು ಬಿಟ್ಟರೆ ಕರ್ನಾಟಕದಲ್ಲಿ ದೊರೆಯುವಷ್ಟು ಶಾಸನಗಳು ಭಾರತದ ಯಾವ ಪ್ರಾಂತದಲ್ಲಿಯೂ ಇಲ್ಲ. ಸು. 20,000ಕ್ಕೂ ಹೆಚ್ಚು ಶಾಸನಗಳು ಕರ್ನಾಟಕದಲ್ಲಿ ಈವರೆಗೆ ದೊರಕಿವೆ. ಅವುಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಶಾಸನಗಳು ಅಚ್ಚಾಗಿವೆ. ಕರ್ನಾಟಕದಲ್ಲಿ ದೊರೆಯುವ ಅತ್ಯಂತ ಪ್ರಾಚೀನವಾದ ಶಾಸನಗಳೆಂದರೆ ಮೌರ್ಯ ವಂಶದ ಅಶೋಕ ಚಕ್ರವರ್ತಿಯ (ಪ್ರ.ಶ.ಪೂ. 272–232) ಧರ್ಮಲಿಪಿಗಳು. ಭಾರತದ ಇತರೆಡೆಗಳಲ್ಲೂ ಈ ವರೆಗೆ ದೊರಕಿರುವ ಅತ್ಯಂತ ಪ್ರಾಚೀನ ಬರೆಹಗಳೆಂದರೆ ಈತನ ಧರ್ಮಶಾಸನಗಳೇ. ಇದಕ್ಕೂ ಪೂರ್ವದ ಹರಪ್ಪ ಸಂಸ್ಕೃತಿಯ ಮುದ್ರೆಗಳ ಮೇಲಿರುವ ಚಿತ್ರಲಿಪಿಯನ್ನು ಇನ್ನೂ ಸಮರ್ಪಕವಾಗಿ ಓದಿ ಗುರುತಿಸಿಲ್ಲ. ಇಡೀ ಭಾರತದಲ್ಲಿ ಇದುವರೆಗೆ ದೊರೆತ ಅಶೋಕನ ಒಟ್ಟು 13 ಲಘು ಶಿಲಾಲೇಖಗಳಲ್ಲಿ (ಮೈನರ್ ರಾಕ್ ಈಡಿಕ್ಟ್) 6 ಶಾಸನಗಳು ಕರ್ನಾಟಕದಲ್ಲಿಯ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿಯೂ ರಾಯಚೂರು ಜಿಲ್ಲೆಯ ಮಾಸ್ಕಿ, ಗವಿಮಠ ಮತ್ತು ಪಾಲ್ಕಿಗುಂಡು ಎಂಬಲ್ಲಿಯೂ ದೊರೆತಿವೆ. ಇವು ಮೌರ್ಯಕಾಲದ ಬ್ರಾಹ್ಮೀ ಲಿಪಿಯಲ್ಲಿ ಪ್ರಾಕೃತ ಭಾಷೆಯಲ್ಲಿವೆ. ಬ್ರಹ್ಮಗಿರಿ ಗುಂಪಿನ ಮೂರು ಶಾಸನಗಳ ಕೊನೆಯ ವಾಕ್ಯವಾದ ಚಪಡೇನ ಲಿಖಿತೇ ಲಿಪಿಕರೇಣ ಎಂಬಲ್ಲಿ ಮೊದಲಿನ ಎರಡು ಶಬ್ದಗಳನ್ನು ಬ್ರಾಹ್ಮೀ


ISBN : 979-889233259-0

ಲಿಪಿಯಲ್ಲಿ ಮತ್ತು ಲಿಪಿಕರೇಣ ಎಂಬ ಶಬ್ದವನ್ನು ಖರೋಷ್ಠೀ ಲಿಪಿಯಲ್ಲಿ ಬರೆಯಲಾಗಿದೆ. ಕರ್ನಾಟಕ ಶಾಸನಗಳ ಮೊದಲ ಲಿಪಿಕಾರ ಚಪಡ ತನಗೆ ಖರೋಷ್ಠೀಲಿಪಿಯ ಜ್ಞಾನ ಇದ್ದಿತೆಂದು ತಿಳಿಸುವುದಕ್ಕಾಗಿ ಆ ಶಬ್ದವನ್ನು ಖರೋಷ್ಠೀಯಲ್ಲಿ ಬರೆದಿರಬಹುದು. ಅಶೋಕನ ಶಾಸನಗಳಲ್ಲಿ ಉಪಯೋಗಿಸಿದ ಬ್ರಾಹ್ಮೀ ಲಿಪಿಯಿಂದಲೇ ಉತ್ತರ ಹಾಗೂ ದಕ್ಷಿಣ ಭಾರತದ ಎಲ್ಲ ಪ್ರಚಲಿತ ಲಿಪಿಗಳು ಉದ್ಭವಿಸಿರುತ್ತವೆ.

ಕರ್ನಾಟಕದಲ್ಲಿ ದೊರೆತ ದಕ್ಷಿಣ ಭಾರತದಕ್ಷಿಣ ಭಾರತಯ ಶಾಸನಗಳಿಂದ ಈ ಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತೆಂದು ಗೊತ್ತಾಗುತ್ತದೆ. ಈ ಭಾಗಕ್ಕೆ ಇಸಿಲ ಎಂಬ ಹೆಸರಿದ್ದು, ಇದು ಸುವರ್ಣಗಿರಿ ಪ್ರಾಂತ್ಯಕ್ಕೆ ಸೇರಿತ್ತೆಂಬುದು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಆತನ ಶಾಸನಗಳಿಂದ ತಿಳಿಯುತ್ತದೆ. ರಾಯಚೂರು ಜಿಲ್ಲೆಯ ಮಸ್ಕಿ ಶಾಸನದಲ್ಲಿ ಅಶೋಕನ ಹೆಸರನ್ನೇ ಉಲ್ಲೇಖಿಸಿದ್ದುದರಿಂದ ಉಳಿದ ಶಾಸನಗಳಲ್ಲಿ ಉಕ್ತವಾದ ದೇವಾನಾಂ ಪ್ರಿಯ ಪ್ರಿಯದರ್ಶಿ ರಾಜಾ ಅಥವಾ ದೇವಾನಾಂಪ್ರಿಯ ರಾಜಾ ಎಂಬ ಹೆಸರು ಅಶೋಕನಿಗೆ ಅನ್ವಯಿಸುತ್ತದೆಂಬ ವಿಷಯ ಖಚಿತವಾಯಿತು. ತರುವಾಯ ಕರ್ನಾಟಕದಲ್ಲಿ ರಾಜ್ಯವಾಳಿದ ಸಾತವಾಹನರ ಶಾಸನಗಳು ಈಗಿನ ಮೈಸೂರು ರಾಜ್ಯದಲ್ಲಿ ದೊರೆತಿಲ್ಲವಾದರೂ ಮೊದಲು ಬಳ್ಳಾರಿ ಜಿಲ್ಲೆಗೆ ಸೇರಿದ ಹಾಗೂ ಈಗ ಕರ್ನೂಲು ಜಿಲ್ಲೆಯಲ್ಲಿ ಸಮಾವೇಶಗೊಂಡಿರುವ ಆದವಾನಿ ತಾಲ್ಲೂಕಿನ ಮ್ಯಾಕದೋನಿ ಎಂಬಲ್ಲಿ ಆ ವಂಶದ ಸಿರಿಪುಳುಮಾವಿಯ ಶಾಸನವೊಂದಿದೆ.

ಈತ 2ನೆಯ ವಾಸಿಠೀಪುತ ಪುಳುಮಾವಿ (130–59) ಎಂದು ವಿದ್ವಾಂಸರ ಅಭಿಪ್ರಾಯ. ಸಾತವಾಹನರ ಸಾಮಂತರಾದ ಚುಟುಕುಲ ಸಾತಕಣ್ಣಿಗಳು ಬನವಾಸಿ ಪ್ರಾಂತದಲ್ಲಿ 3ನೆಯ ಶತಮಾನದಲ್ಲಿ ಆಳುತ್ತಿದ್ದು, ಆ ವಂಶದ ಅರಸು ಹಾರಿತೀಪುತ ವಿಣ್ಹುಕಡ ಚುಟುಕುಲಾನಂದ ಸಾತಕಣ್ಣಿ ಎಂಬಾತನ ಎರಡು ಶಾಸನಗಳು ಬನವಾಸಿ ಮತ್ತು ಮಳವಳ್ಳಿಗಳಲ್ಲಿ ದೊರೆತಿವೆ. ಇತ್ತೀಚೆಗೆ ಗುಲ್ಬಶಾಸನಗಳು ಪ್ರಾಕೃತ ಭಾಷೆಯಲ್ಲಿವೆ. ಮೇಲೆ ಹೇಳಿದ ಮ್ಯಾಕದೋನಿ ಶಾಸನದಿಂದಲೂ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿ ಎಂಬಲ್ಲಿ ದೊರೆತ ಪಲ್ಲವ ರಾಜ ಶಿವಸ್ಕಂದ ವರ್ಮನ ಪ್ರಾಕೃತಭಾಷೆಯ ತಾಮ್ರಶಾಸನದಿಂದಲೂ ಬಳ್ಳಾರಿಯ ಬಹುಭಾಗ ಸಾತವಹನಿಹಾರ ಅಥವಾ ಸಾತಾಹನಿರಟ್ಠ ಅಂದರೆ ಸಾತವಾಹನ ರಾಷ್ಟ್ರ ಎಂಬ ಪ್ರಾಂತವನ್ನೊಳಗೊಂಡಿತ್ತೆಂಬುದಾಗಿ ತಿಳಿಯುತ್ತದೆ.

ಶಾತವಾಹನರ ತರುವಾಯ ಈ ಭಾಗ ಪಲ್ಲವರ ವಶದಲ್ಲಿತ್ತೆಂಬ ವಿಷಯವೂ ಈ ತಾಮ್ರಶಾಸನದಿಂದ ವಿಶದವಾಗುವುದು. 3–4ನೆಯ ಶತಮಾನದಗ್ರಾ ಜಿಲ್ಲೆಯ ಸನ್ನತಿ ಎಂಬಲ್ಲಿ ಸು. ಮೂರನೆಯ ಶತಮಾನದ ಲಿಪಿಯಲ್ಲಿ ಬರೆದ ಮತ್ತು ನಾಗಾರ್ಜುನಕೊಂಡದ ಇಕ್ಷ್ವಾಕು ಅರಸರ ಶಾಸನಗಳ ಲಿಪಿಯನ್ನು ಹೋಲುವ


ISBN : 979-889233259-0

30ರಷ್ಟು ಚಿಕ್ಕಪುಟ್ಟ ಶಾಸನಗಳು ದೊರೆತಿವೆ. ಅವುಗಳಿಂದ ಮತ್ತು ಅಲ್ಲಿ ದೊರೆತ ಬೇರೆ ಅವಶೇಷಗಳಿಂದ ಆ ಸ್ಥಳ ಮೂರನೆಯ ಶತಮಾನದಲ್ಲಿ ಬೌದ್ಧರ ಪ್ರಮುಖ ಕೇಂದ್ರವಾಗಿತ್ತೆಂದು ತಿಳಿಯುವುದು.

ಆದ್ದರಿಂದ ಕನ್ನಡ ನಾಡು ಕಲೆ, ಸಾಹಿತ್ಯ, ಶಾಸನಗಳು ಇಡಿ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠ ಎಂಬುದಕ್ಕೆ ಇವುಗಳೇ ಮೂಲಾಧಾರಗಳು ಎಂಬುದು ಸತ್ಯವಾದ ಮಾತು.

***

## ಜಗಜ್ಯೋತಿ ಬಸವಣ್ಣನವರು

**ಪ್ರಶಾಂತ್ ಭಂಗಿ,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಬಸವಣ್ಣ ಬಸವಣ್ಣ ಜನಿಸಿದ್ದು ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ತಂದೆ ಮಾದರಸ, ತಾಯಿ ಮಾದಲಂಬಿಕೆ ಭಾರತದ 12 ನೇ ಶತಮಾನದ ಕನ್ನಡದ ಒಬ್ಬ ತತ್ವಜ್ಞಾನಿ, ಕಲಚೂರಿ ಅರಸನ ಬಿಜ್ಜಳ ಆಸ್ಥಾನದಲ್ಲಿ ಮಂತ್ರಿಯಾಗಿದ್ದರು ಮತ್ತು ಸಾಮಾಜಿಕ ಸುಧಾರಕರಾಗಿದ್ದರು. ಶಿವ ಕೇಂದ್ರೀಕೃತ ಭಕ್ತಿ ಚಳುವಳಿಯಲ್ಲಿ ಕನ್ನಡ ಕವಿಯಾಗಿದ್ದರು. ಬಸವಣ್ಣ ವಚನಗಳ ಮೂಲಕ ಸಾಮಾಜಿಕ ಅರಿವು ಹರಡಿದರು, ಬಸವಣ್ಣರು ಲಿಂಗ ತಾರತಮ್ಯ, ಸಾಮಾಜಿಕ ತಾರತಮ್ಯ, ಮೂಢನಂಬಿಕೆಗಳನ್ನು ನಿರಾಕರಿಸಿದರು.ಇಷ್ಟಲಿಂಗ ಹಾರವನ್ನು ಪರಿಚಯಿಸಿದರು (ಶಿವ ಲಿಂಗ) ಶಿವನ ಒಂದು ಭಕ್ತಿ ಒಂದು ನಿರಂತರ ಜ್ಞಾಪನೆ ಎಂದು ಇದನ್ನು ಎಲ್ಲರು ಧರಿಸಿ ಪೂಜಿಸಬಹುದು. ತನ್ನ ಸಾಮ್ರಾಜ್ಯದ ಮುಖ್ಯಮಂತ್ರಿಯಾಗಿ, ಅವರು ಅನುಭವ ಮಂಟಪ (ಅಥವಾ, "ಆಧ್ಯಾತ್ಮಿಕ ಅನುಭವದ ಭವನ), ಇಲ್ಲಿ ಎಲ್ಲಾ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ಪುರುಷ ಮತ್ತು ಮಹಿಳೆಯರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಲು ಸ್ವಾಗತಿಸಿತು.

ಬಸವಣ್ಣನವರ ಜೊತೆ 770 ಅಮರಗಣಂಗಳು ಇದ್ದರೆಂದು ಮತ್ತು 1, 96,000 ಶರಣರಿದ್ದರೆಂದು ಐತಿಹಾಸಿಕ ಪುರಾವೆಗಳಿವೆ. ಸಾಂಪ್ರದಾಯಿಕ ದಂತಕಥೆಗಳು ಮತ್ತು ವಿದ್ವತ್ಪೂರ್ಣ ಗ್ರಂಥಗಳು ಲಿಂಗಾಯತ ಸ್ಥಾಪಕ ಬಸವಣ್ಣ ಎಂದು ಉಲ್ಲೇಖಿಸುತ್ತವೆ . ಆದಾಗ್ಯೂ, ಆಧುನಿಕ ಕಲಾಚುರಿ ಶಾಸನಗಳಂತಹ ಐತಿಹಾಸಿಕ ಸಾಕ್ಷ್ಯವನ್ನು ಅವಲಂಬಿಸಿದೆ ಬಸವ ಕವಿ ತತ್ವಜ್ಞಾನಿಯಾಗಿದ್ದು, ಈಗಾಗಲೇ ಅಸ್ತಿತ್ವದಲ್ಲಿದ್ದ ಸಂಪ್ರದಾಯವನ್ನು ಸಂಸ್ಕರಿಸಿದರು ಮತ್ತು ಶಕ್ತಿಯನ್ನು ತುಂಬಿದರು ಎಂದು ಉಲ್ಲೇಖಿಸುತ್ತವೆ.ಕನ್ನಡ ಕವಿ ಹರಿಹರರಿಂದ ರಚಿತ (ಕ್ರಿ.ಶ. 1180) ಬಸವರಾಜದೇವರ ರಗಳೆ (ಸಿ.ಎಸ್. 8080 ರಲ್ಲಿ 25 ವಿಭಾಗಗಳು ಲಭ್ಯವಿದೆ) ಸಾಮಾಜಿಕ ಸುಧಾರಕನ ಜೀವನದ ಬಗ್ಗೆ ಲಭ್ಯವಿರುವ ಅತ್ಯಂತ ಆರಂಭಿಕ ಖಾತೆಯಾಗಿದೆ ಮತ್ತು ಲೇಖಕನು ತನ್ನ


ISBN : 979-889233259-0

ನಾಯಕನ ಸಮಕಾಲೀನ ಸಮೀಪದಲ್ಲಿದ್ದ ಕಾರಣದಿಂದಾಗಿ ಅದು ಮುಖ್ಯವೆಂದು ಪರಿಗಣಿಸಲಾಗಿದೆ. ಬಸವನ ಜೀವನ ಮತ್ತು ವಿಚಾರಗಳ ಸಂಪೂರ್ಣ ವಿವರ 13 ನೇ ಶತಮಾನದ ಪವಿತ್ರ ತೆಲುಗು ಪಠ್ಯ ಪಾಲ್ಕುರಿಕಿ ಸೋಮನಾಥರ ಬಸವ ಪುರಾಣದಲ್ಲಿ ನಿರೂಪಿಸಲ್ಪಟ್ಟಿದೆ. ಬಸವ ಸಾಹಿತ್ಯ ಕೃತಿಗಳು ಕನ್ನಡ ಭಾಷೆಯಲ್ಲಿ ವಚನ ಸಾಹಿತ್ಯವನ್ನು ಒಳಗೊಂಡಿದೆ.ಅವರನ್ನು ಭಕ್ತಿಭಂಡಾರಿ ಎಂದೂ ಕರೆಯುತ್ತಾರೆ (ಅಕ್ಷರಶಃ, ಭಕ್ತಿಯ ಖಜಾಂಚಿ), ಬಸವಣ್ಣ (ಹಿರಿಯ ಸಹೋದರ ಬಸವ) ಅಥವಾ ಬಸವೇಶ್ವರ.

**ಸಾಮಾಜಿಕ ಸಮಾನತೆ**

ಇವನಾರವ ಇವನಾರವ ಇವನಾರವ ನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ.

- ಶೂದ್ರರಾದ ರೈತಾಪಿ ಜನರು, ಕಾಯಕಜೀವಿಗಳು, ಮಹಿಳೆಯರು ಮತ್ತು ಪಂಚಮರು ಈ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನವಾದ ವರ್ಣ ವ್ಯವಸ್ಥೆಯಿಂದಾಗಿ ಪಡಬಾರದ ಕಷ್ಟಪಟ್ಟಿದ್ದಾರೆ. ಮೇಲ್ವರ್ಗ ಮತ್ತು ಮೇಲ್ಜಾತಿಯ ಪುರುಷರಿಗಾಗಿಯೇ ಬದುಕಿನ ಎಲ್ಲ ಸುಖಭೋಗಗಳು ಮೀಸಲಾಗಿದ್ದವು. ಇವರು ಮಾತ್ರ ಜನಿವಾರ ಧರಿಸುವ ಹಕ್ಕನ್ನು ಪಡೆದಿದ್ದರು.
- ಜನಿವಾರ ಧರಿಸುವ ಬ್ರಾಹಣ ಓದಿರಬಹುದು, ಬರೆದಿರಬಹುದು ಆದರೆ ಕಾಯಕಜೀವಿಯಾಗಿ ಉತ್ಪಾದನೆಯಲ್ಲಿ ತೊಡಗಿಲ್ಲ. ಉತ್ಪಾದನೆಯ ಅನುಭವದಿಂದ ಬರುವ ಜ್ಞಾನವನ್ನು ಹಿಂದಿನ ಕಾಲದಲ್ಲಿ ಅವನೆಂದೂ ಪಡೆಯಲಿಲ್ಲ. ಕ್ಷತ್ರಿಯ ನಾಗಿರಬಹುದು ಆದರೆ ಉತ್ಪಾದನೆಯಲ್ಲಿ ತೊಡಗಲಿಲ್ಲ. ವೈಶ್ಯ ವಸ್ತುಗಳ ಮಾರಾಟ ಮಾಡಿರಬಹುದು, ಕೃಷಿಭೂಮಿಯ ಒಡೆಯನೂ ಆಗಿರಬಹುದು ಆದರೆ ಸ್ವತಃ ಉತ್ಪಾದನೆ ಮಾಡಲಿಲ್ಲ. ಈ ಮೂರೂ ವರ್ಣದವರಿಗೂ ಜನಿವಾರ ಇದೆ.
- ಆದರೆ ಉತ್ಪಾದನೆಯಲ್ಲಿ ಕಾಯಕ ಜೀವಿಗಳಿಗೆ ಮತ್ತು ಪಂಚಮರಿಗೆ ಜನಿವಾರ ಇಲ್ಲ. ಯಾರಿಗೆ ಜನಿವಾರ ಇತ್ತೋ ಅವರು ದುಡಿಯದೆ ಸುಖ ಜೀವನವನ್ನು ಅನುಭವಿಸಿದರು. ಯಾರಿಗೆ ಜನಿವಾರ ಇದ್ದಿದ್ದಿಲ್ಲವೂ ಅವರು ದುಡಿದೂ ಕಷ್ಟ ಜೀವನವನ್ನು ಅನುಭವಿಸಿದರು. ಅಂತೆಯೆ ಬಸವಣ್ಣನವರು ಕಟ್ಟ ಕಡೆಗೆ ಮನುಷ್ಯನ ಕಡೆಗೆ ಬಂದರು ಈ ಅನ್ಯಾಯದ ವಿರುದ್ಧ ಸಿಡಿದೆದ್ದರು.
- "ಜಾತಿ ಸಂಕರವಾದ ಬಳಿಕ ಕುಲವನರಸುವರೆ?" ಎಂದು ಪ್ರಶ್ನಿಸಿ ಕಾಯಕಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ


ISBN : 979-889233259-0

ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

- ಭಾರತದಲ್ಲಿ ವಿವಿಧ ಜಾತಿಗಳ ಕಾಯಕಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲ ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಆ ಕಾಯಕಗಳ ಒಳಗೆ ಇದ್ದ ಜಾತಿ ವಿಷವನ್ನು ಹೊರ ಹಾಕಿದರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು.

**ಧಾರ್ಮಿಕ ಬೆಳವಣಿಗೆಗಳು**

- ಬಸವೇಶ್ವರರು ಹನ್ನೆರಡು ವರ್ಷಗಳ ಕಾಲ ಕೂಡಲ ಸಂಗಮದಲ್ಲಿ ಅಧ್ಯಯನ ಮಾಡುತ್ತಾ ಕಳೆದರು. ಅವರ ದೃಷ್ಟಿಯಲ್ಲಿ ದೇವನು ಒಬ್ಬ ಮತ್ತು ಅವನು ಮಾನವರಲಿದ್ದಾನೆಯೇ ಹೊರತು ಗುಡಿ–ಗುಂಡಾರಗಳಲ್ಲಿ ಅಲ್ಲ. ಕೆಲಸ ಮಾಡಿ ಜೀವನ ನಡೆಸಬೇಕು, ಆಲಸಿ ಜೀವನ ಸಲ್ಲ. ಸುಳ್ಳು ಹೇಳುವುದು, ವಂಚಿಸುವುದು, ಕೊಲೆ–ಸುಲಿಗೆ ಮಾಡುವುದು, ಪ್ರಾಣಿಬಲಿ ನೀಡುವುದು, ಪರಧನ ಹರಣ, ಪರಸ್ತ್ರೀ ವ್ಯಾಮೋಹ ಹೊಂದುವುದು ಘೋರ ಅಪರಾಧ.
- ಕೆಲಸದಲ್ಲಿ ಮೇಲು ಅಥವಾ ಕೀಳು ಎಂಬುದಿಲ್ಲ. ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾನತೆ, ಕಾಯಕ, ದಾಸೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರು ಬೇಕಾದರೂ ಶಿವಶರಣರಾಗ ಬಹುದು ಎಂದು ಬಸವಣ್ಣವರು ಸಾರಿದರು. ಪೊಳ್ಳು ದೇವರುಗಳನ್ನು ಸ್ತುತಿಸುತ್ತಿದ್ದ ಮತ್ತು ಪುರೋಹಿತಶಾಹಿಯಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೊಸ ಜೀವನ ನೀಡಿದರು.
- ಜಾತಿ, ಮತ, ಲಿಂಗಗಳ ಭೇದವನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವತಾ ವಾದಿ ಎಂದೂ ಕರೆಯಲಾಗುತ್ತದೆ. ಮಾನವಿಯತೆ. ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು.


ISBN : 979-889233259-0

- ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲವೂ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವಾತಾ ವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅಪಾರ ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ.
- ಬಸವಣ್ಣನವರ ಪ್ರೇರಣೆಯಿಂದ ಹರಿಜನ ಮತ್ತು ಬ್ರಾಹ್ಮಣ ಕುಟುಂಬಗಳ ನಡುವೆ ನಡೆದ ಅನುಲೋಮ ವಿವಾಹ ಕಲ್ಯಾಣದ ಕ್ರಾಂತಿಗೆ ಮುನ್ನುಡಿಯಾಯಿತು. ಇವರು ಷಟ್ ಸ್ಥಲ, ವಚನ, ಕಾಲಜ್ಞಾನ ವಚನ, ಮಂತ್ರಗೋಪ್ಯ, ಶಿಖಾರತ್ನ ವಚನ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರನ್ನು ಕುರಿತಂತೆ ಕನ್ನಡ, ತೆಲುಗು, ಸಂಸ್ಕೃತ, ತಮಿಳು, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಪುರಾಣಗಳು ರಚನೆಯಾಗಿವೆ. ಬಾಗೇವಾಡಿ ಕಪ್ಪಡಿಸಂಗಮ, ಕಲ್ಯಾಣ ಪಟ್ಟಣಗಳಲ್ಲಿ ಇವರ ಸ್ಮಾರಕಗಳಿವೆ.
- ಬೆಳಗಾವಿ ಜಿಲ್ಲೆಯ ಅರ್ಜುನವಾಡದ ಶಿಲಾಶಾಸನದಲ್ಲಿ ಉಲ್ಲೇಖಿತವಾಗಿರುವ ಸಂಗಣಬಸವ ಎಂಬ ಹೆಸರು ವಚನಕಾರ ಬಸವಣ್ಣನವರದ್ದೇ ಎಂದು ವಿದ್ವಾಂಸರು ಊಹಿಸಿದ್ದಾರೆ.

ಅಂತಿಮವಾಗಿ ಹೇಳುವುದಾದರೆ, ಬಸವಣ್ಣ ಜಾತಿ ಮತಗಳಿಗಿಂತ ಭಿನ್ನವಾಗಿ ಮಾನವ ಧರ್ಮವನ್ನು ಅತಿಯಾಗಿ ಮೆಚ್ಚಿದ್ದರು. ಅದಕ್ಕಾಗಿಯೇ ತಮ್ಮ ವಚನಗಳ ಮೂಲಕ ಸಮಾಜವನ್ನು ತಿದ್ದುವುದರ ಮೂಲಕ ಜೀವನದ ಪ್ರತಿಯೊಂದು ಸಂಗತಿಯನ್ನು ಸಮಾಜಕ್ಕೆ ತಿಳಿಯಪಡಿಸಿದರು.

***


ISBN : 979-889233259-0

## ಮಲೆನಾಡು

**ನಯನ ಹೆಚ್,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಜಿಟಿ – ಜಿಟಿ , ಪಿಟಿ – ಪಿಟಿ, ಮಳೆಯಿಂದ ಶುರುವಾಯಿತು
ಈ ಮಳೆಗಾಲ,
ತಣ್ಣನೆ ಗಾಳಿ, ಸುತ್ತೆಲ್ಲಾ ಹಸಿರು ತುಂಬಿದ ನಿಸರ್ಗ
ಆಗಸವೇ ಕಳಚಿ ಬಿದ್ದಂತೆ ಸ್ವರ್ಗ,
ಮಳೆಗಾಲದಲ್ಲಿ ಯಾವಾಗಲೂ ಒಲೆಯ ಬೆಂಕಿಯಲ್ಲಿ ಕಾದ ಹಂಡೆಯ ನೀರು,
ಹೊಗೆಯೇ ತುಂಬಿರುವ ಬಚ್ಚಲು ಮನೆ
ಬಿಸಿ – ಬಿಸಿ ಅಭ್ಯಂಜನ.

ಅಣಬೆ ಕಾರಿಡಿ ಹತ್ಮಿನಿನ ಹುಡುಕಾಟ,
ಹಲಸಿನಕಾಯಿ ಹಪ್ಪಳ, ಚಿಪ್ಸ್, ಸಂಡಿಗೆ
ಬೆಂಕಿ ಕೆಂಡದಲ್ಲಿ ಕೈಕಾಲು ಕಾಸುತ್ತಾ
ಹಲಸಿನಕಾಯಿ ಬೀಜ, ಗೇರು ಬೀಜ, ಸುಟ್ಟುಕೊಂಡು ತಿಂತಾ ಇದ್ರೆ, ಆಹಾ!!
ಹೆಂಚಿನ ಮನೆಯಲ್ಲಿ ಸೋರದ ಜಾಗವೇ ಇಲ್ಲ,
ಮೂಲೆಯಿಂದ ಹೊರಬಂದ ಕೊಡೆಗಳು, ರೈನ್ಕೋಟ್ಗಳು
ಅಪರೂಪಕ್ಕೆ ಕಾಣುವ ಸೂರ್ಯ,
ಆಗಾಗ ಹೋಗಿ ಬರುವ ಕರೆಂಟ್,
ಜೀರುಂಡೆಗಳ ಜೀರ್ ಎನ್ನುವ ಶಬ್ದ,
ಕ್ವಾಟರ್ ಎನ್ನುವ ಕಪ್ಪೆಯ ಕೂಗು,

ರಸ್ತೆಯಲ್ಲಿ ಸತ್ತು ಬಿದ್ದ ಹಾವುಗಳು,
ಮುಟ್ಟಿದರೆ ನಾಚಿಕೊಳ್ಳುವ ಬಸವನ ಹುಳು,
ನೂರಾರು ಕಾಲುಗಳುಳ್ಳ ಅಪರೂಪದ ಸಹಸ್ರಪದಿ ಹುಳು,
ನೀರು ತುಂಬಿ ಉಕ್ಕುವ ಕೆರೆಕಟ್ಟೆ ಚರಂಡಿಗಳು,
ನಾಟಿ ಮಾಡುವ ಹೊಲಗಳು,
ನೆರೆ ತುಂಬಿದ ಗದ್ದೆಗಳು,
ಹೋಗದ ಟ್ರಿಪ್ ಗಳು,
ಬರೀ ಮಳೆ– ಮಳೆ ಎತ್ತಾ ನೋಡಿದರೂ ಜೀಗುಟ್ಟುವ ಮಳೆ.


ISBN : 979-889233259-0

## ಭಕ್ತ ಕನಕದಾಸರು

**ಸುಮಾ ಜಿ ಎಂ**
ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ದಾಸ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆ ನೀಡಿದ ತತ್ವಜ್ಞಾನಿ ಶ್ರೀ ಕನಕದಾಸರು 1509 ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಾಡ ಗ್ರಾಮದಲ್ಲಿ ಕುರುಬ ಜನಾಂಗಕ್ಕೆ ಜನಿಸಿದರು. ತಂದೆ ಬೀರಪ್ಪ ನಾಯಕ ತಾಯಿ ಬಚ್ಚಮ್ಮ. ಕನಕದಾಸರ ಮೂಲ ಹೆಸರು ತಿಮ್ಮಪ್ಪ ನಾಯಕ ದಾಸ ಪರಂಪರೆಯಲ್ಲಿ ಬರುವ 250ಕ್ಕು ಹೆಚ್ಚು ದಾಸರಲ್ಲಿ ಕನಕದಾಸ ರೊಬ್ಬರೆ ಕ್ಷೂದ್ರ ದಾಸರು. ಯುದ್ಧದಲ್ಲಿ ದಂಡನಾಯಕ ರಾಗಿದ್ದು ಯುದ್ಧವೊಂದರಲ್ಲಿ ಸೋತು ವೈರಾಗ್ಯ ಉಂಟಾಗಿ ದಾಸರಾದರಂತೆ. ಕನಕದಾಸರ ಕೀರ್ತನೆಗಳ ಅಂಕಿತನಾಮ ಕಾಗಿನೆಲೆ ಆದಿಕೇಶವ. ಅವರು ಬಡಾ ಗ್ರಾಮದ ಮುಖ್ಯಸ್ಥರಾಗಿದ್ದರು ಮತ್ತು ಕುಟುಂಬದಲ್ಲಿನ ನಷ್ಟ ಮತ್ತು ಯುದ್ಧದಲ್ಲಿ ಅವಮಾನದಿಂದಾಗಿ ಪ್ರಾಪಂಚಿಕ ಸೌಕರ್ಯಗಳನ್ನು ತ್ಯಜಿಸಿದರು ಎಂಬುದು ಇನ್ನೊಂದು ಜನಪ್ರಿಯ ನಂಬಿಕೆ.

**ಶಿಕ್ಷಣ :** ಪುರಂದರದಾಸರ ಸಮಕಾಲೀನರಾದ ವ್ಯಾಸರಾಯರು ಕನಕದಾಸರಿಗೆ ನವ–ವೈಷಣವ ಧರ್ಮಕ್ಕೆ ದೀಕ್ಷೆ ನೀಡಿದರು.ಅವರು ಕಾವ್ಯ ಮತ್ತು ಹಾಡುಗಳಲ್ಲಿ ಹರಿದಾಸ ಸಂಪ್ರದಾಯದ ಶ್ರೇಷ್ಠ ಪ್ರತಿಪಾದಕರಾಗಿದ್ದರು, ಇದು ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ನಿರೂಪಿಸಿತು. ಕನಕದಾಸರು ಅಲೆದಾಡುವ ದಂಡ ನಾಯಕರಾಗಿದ್ದರು ಮತ್ತು ಅವರ ಕಾಲದ ತಿರುಪತಿ, ಹಂಪಿ, ಉಡುಪಿ ಇತ್ಯಾದಿ ಜನಪ್ರಿಯ ದೇಗುಲಗಳಿಗೆ ಭೇಟಿ ನೀಡಿದ್ದರು.

**ಕನಕದಾಸರ ಸಾಧನೆಗಳು :** ಇನ್ನು ಇವರ ಸಾಧನೆಗಳ ಬಗ್ಗೆ ಹೇಳಬೇಕೆಂದರೆ 16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ಸಮರ ಸಾರಿದವರಲ್ಲಿ ಕನಕದಾಸರು ಒಬ್ಬರು.ಪುರಂದರ ದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕನಕದಾಸರ ಕಾಣಿಕೆಯೂ ಸಲ್ಲುತ್ತದೆ.ಕನಕನ ಇಷ್ಟದೇವರು ಶ್ರೀ ಆದಿಕೇಶವ. ಆದುದರಿಂದಲೇ ಅವನು ಬಾಡಕ್ಕೆ ಸಮೀಪದ ಕಾಗಿನೆಲೆಯಲ್ಲಿ ಆದಿಕೇಶವ ದೇವಾಲಯವನ್ನು ಕಟ್ಟಿಸಿದರು.ಸೌಹಾರ್ದತೆ, ಸಮಾನತೆ, ಆಧ್ಯಾತ್ಮಿಕ ಸಾಧನೆಗಳ ಬಗ್ಗೆ ಕನಕದಾಸರ ತತ್ವೋಪದೇಶಗಳು ಚಿರಂತನವಾಗಿವೆ ಮತ್ತು ಸಾರ್ಥಕ ಬದುಕಿಗೆ ದಾರಿದೀಪವಾಗಿವೆ.


ISBN : 979-889233259-0

ಕನಕದಾಸರು ಶ್ರೀ ವ್ಯಾಸರಾಯರ ಮೆಚ್ಚಿನ ಶಿಷ್ಯರಾಗಿದ್ದರು. ಮಧ್ವ ತತ್ವಶಾಸ್ತ್ರವನ್ನು ಕಲಿತು ಒಪ್ಪಿಕೊಂಡ ಕನಕದಾಸರು ಉಡುಪಿಯ ಶ್ರೀ ಕೃಷ್ಣನಭಕ್ತರು. ಕಾಗಿನೆಲೆಯ ಆದಿಕೇಶವನ ಭಕ್ತರಾದ ಇವರು ಜಾತಿಪದ್ಧತಿಯ ತಾರತಮ್ಯಗಳನ್ನು ವಿರುದ್ಧ ಹೋರಾಡಿದವರು. ಕನಕದಾಸರು ಕನ್ನಡ ಸಾಹಿತ್ಯ ಲೋಕಕ್ಕೆ ಸಾಹಿತ್ಯದ ಹಲವು ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು ಕೊಡುಗೆ ನೀಡಿದ್ದಾರೆ ಹಾಗೂ ಸಂಗೀತ ಜಗತ್ತಿಗೆ ಅವರದೇ ಆದಂತಹ ಕೊಡುಗೆಯನ್ನು ಮಂಡಿಗೆಗಳ ರೂಪದಲ್ಲಿ ಅರ್ಪಿಸಿದ್ದಾರೆ.ಅವರು ರಚಿಸಿದ ಸಾವಿರಾರು ಕೀರ್ತನೆಗಳು ಕುಟುಂಬದಲ್ಲಿನ ಜಗಳಗಳು, ನಕಲಿ ಸ್ವಾಮಿಗಳು ಮತ್ತು ಗುರುಗಳು, ದುರಾಸೆಯ ಪುರುಷರು, ಅನೈತಿಕ ಮತ್ತು ಸಂಪ್ರದಾಯವಾದಿ ಪುರೋಹಿತರು, ನಂಬಿಕೆಯಿಲ್ಲದ ಪುರುಷರು ಮತ್ತು ಮಹಿಳೆಯರು, ಜಾತಿ, ಅಸಮಾನತೆ, ಕುತಂತ್ರದ ವ್ಯಾಪಾರಿಗಳು ಮತ್ತು ಹೆಚ್ಚಿನವುಗಳನ್ನು ವಿಡಂಬಿಸುತ್ತದೆ. ಕನಕದಾಸರ ಸುಮಾರು 316 ಕೀರ್ತನೆಗಳು ಹಾಗೂ ಇನ್ನಿತರ ಸಾಹಿತ್ಯ ಮಾತ್ರ ಲಭ್ಯವಾಗಿರುವುದನ್ನು ಕಾಣಬಹುದಾಗಿದೆ.

**ಕನಕದಾಸರ ಐದು ಮುಖ್ಯ ಕಾವ್ಯಕೃತಿಗಳು ಕೆಳಗಿನಂತಿವೆ.**

1. ಮೋಹನತರಂಗಿಣಿ
2. ನಳಚರಿತ್ರೆ
3. ರಾಮಧಾನ್ಯ ಚರಿತೆ
4. ಹರಿಭಕ್ತಿಸಾರ
5. ನೃಸಿಂಹಸ್ತವ

**ಉಡುಪಿ ಶ್ರೀ ಕೃಷ್ಣನ ಮಹಾನ್ ಭಕ್ತ ಕನಕದಾಸರು – ಇತಿಹಾಸ**

ಒಂದು ದಿನ ಕರ್ನಾಟಕದ ಚಿಕ್ಕ ನಗರವಾದ ಉಡುಪಿಯಲ್ಲಿ ಕನಕದಾಸರನ್ನು ಭೇಟಿ ಮಾಡಲು ವ್ಯಾಸತೀರ್ಥರು ವಿನಂತಿಸಿದರು. ಈ ಸುಂದರ ನಗರದಲ್ಲಿ ಕನಕದಾಸರು ಭೇಟಿ ನೀಡಲು ಮತ್ತು ಪ್ರಾರ್ಥನೆ ಸಲ್ಲಿಸಲು ಉತ್ಸುಕರಾಗಿದ್ದ ಶ್ರೀ ಕೃಷ್ಣ ದೇವಾಲಯವೂ ಇದೆ. ಆದರೆ ಕನಕದಾಸರು ಕೆಳಜಾತಿಗೆ ಸೇರಿದವರು ಎಂದು ಬ್ರಾಹ್ಮಣ ಪುರೋಹಿತರು ಅವರನ್ನು ದೇವಾಲಯಕ್ಕೆ ಪ್ರವೇಶಿಸಲು ಬಿಡಲಿಲ್ಲ. ವ್ಯಾಸತೀರ್ಥರು ಅವರನ್ನು ಒಳಗೆ ಬಿಡಲು ಮತ್ತು ಅವರ ಪ್ರಾರ್ಥನೆಯನ್ನು ಸಲ್ಲಿಸಲು ಕೇಳಿಕೊಂಡ ನಂತರವೂ ಅವರು ಒಪ್ಪಲಿಲ್ಲ.


ISBN : 979-889233259-0

ಕನಕದಾಸರು ದೇವಾಲಯದ ಹೊರಗೆ ಬಿಡಾರ ಹೂಡಿ ಶ್ರೀಕೃಷ್ಣನನ್ನು ಸ್ತುತಿಸಿ ಗೀತೆಗಳನ್ನೂ ಕಾವ್ಯಗಳನ್ನೂ ರಚಿಸತೊಡಗಿದರು. ಅವರು ತಮ್ಮ ನೆಚ್ಚಿನ ಭಗವಂತನನ್ನು ಧ್ಯಾನಿಸಲು ಮತ್ತು ಅವರ ಸಂಯೋಜನೆಗಳನ್ನು ಹಾಡಲು ಪ್ರಾರಂಭಿಸಿದರು. ಬ್ರಾಹ್ಮಣ ಪುರೋಹಿತರು ಮತ್ತು ಇಡೀ ನಗರದ ಸಂಪೂರ್ಣ ಅಪನಂಬಿಕೆಗೆ ಹೀಗೆ ಸಂಭವಿಸಿತು ದೇವಾಲಯದ ಹೊರಗೋಡೆಯು ಬಿರುಕು ಬಿಟ್ಟಿತು ದೇವಾಲಯದ ಗೋಡೆಯು ಬಿದ್ದುಹೋಯಿತು ಮತ್ತು ಶ್ರೀಕೃಷ್ಣನ ವಿಗ್ರಹವು ಕನಕದಾಸರ ಕಡೆಗೆ ತಿರುಗಿತು. ಕನಕದಾಸರು ತಮ್ಮ ಪ್ರಾರ್ಥನೆಯನ್ನು ಮನಃಪೂರ್ವಕವಾಗಿ ಶ್ರೀಕೃಷ್ಣನಿಗೆ ಅರ್ಪಿಸಿದರು. ನಂತರ ಈ ಗೋಡೆಯ ಮೇಲೆ ಕನಕನ ಕಿಂಡಿ ಎಂಬ ಕಿಟಕಿಯನ್ನು ರಚಿಸಲಾಯಿತು. ಅಲ್ಲಿ ಇಂದಿಗೂ ಭಕ್ತರು ಭಗವಂತನನ್ನು ನೋಡುತ್ತಾರೆ. ವಿಗ್ರಹವು ಪೂರ್ವಕ್ಕೆ ಮುಖಮಾಡಿದ ತನ್ನ ಹಿಂದಿನ ವಿಧಾನದಿಂದ ಪಶ್ಚಿಮಕ್ಕೆ ಮುಖ ಮಾಡಿದೆ ಎಂದು ನಂಬಲಾಗಿದೆ. ಈ ಕಥೆಯು ಭಗವಂತನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಮತ್ತು ಮುಖ್ಯವಾದುದು ಭಕ್ತಿ, ಸಮರ್ಪಣೆ ಮತ್ತು ಪ್ರಾಮಾಣಿಕತೆ ಎಂದು ನೆನಪಿಸುತ್ತದೆ.

ಇಂದಿಗೂ ಕನಕದಾಸ ಭಕ್ತ ಕನಕದಾಸರಾಗಿದ್ದು ತಮ್ಮ ಕೀರ್ತನೆಗಳ ಮೂಲಕ ಮನೆ ಮನೆಯಲ್ಲಿಯೂ ಪ್ರಖ್ಯಾತಿಯನ್ನು ಹೊಂದಿದ್ದಾರೆ. ಅಲ್ಲದೇ, ಕೇವಲ ಜಾತಿ, ಜನಾಂಗ, ಧರ್ಮಕ್ಕೆ ಮಾತ್ರ ಸೀಮಿತವಾಗದೇ ತಮ್ಮ ಹಾಡುಗಳ ಮೂಲಕ ಮಾನವ ಜೀವನದ ಸಂದೇಶವನ್ನು ಸಾರುವ ಬಹುಮುಖ್ಯ ಸಂಗತಿಗಳಾಗಿ ಮನೆಮಾತಾಗಿರುವುದಕ್ಕೆ ಇವರು ರಚಿಸಿದ ಕೀರ್ತನೆಗಳೇ ಕಾರಣ. ಆದ್ದರಿಂದ, ಈ ಸಂದೇಶವನ್ನು 21ನೇ ಶತಮಾನದಲ್ಲಿಯೂ ಪ್ರದಾನ ಪಾತ್ರವನ್ನು ಹೊಂದಿವೆ.

***


ISBN : 979-889233259-0

## ಅವಸರದೊಳಗೆ ಒಂದಿನ ಸಲ್ಲಿಕೆ

**ನಯನ ಹೆಚ್,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಸಲ್ಲಿಕೆ ಬಿ.ಇಡಿ ಜೀವನದಲ್ಲೊಂದು ಮೈಲಿಗಲ್ಲು,
ನಿದ್ದೆ ಇಲ್ಲದ ಅದೆಷ್ಟೋ ರಾತ್ರಿಗಳು,
ಗಡಿಬಿಡಿ ನಡಿಗೆಯ ಅದೆಷ್ಟೋ ದಿನಗಳು,
ದುಡ್ಡಿಲ್ಲದ ಕಾಲಿ ಜೇಬುಗಳು.

ಸಹಿಗಾಗಿ ಓಡುವ ಅದೆಷ್ಟೋ ಕಾಲುಗಳು,
ಬರೆದರೂ ಮುಗಿಯದ ಸೆಮಿನಾರ್ಗಳು,
ನಿರ್ದೇಶನಗಳೇ ಕೇಳುವ ಅದೆಷ್ಟೋ ಕಿವಿಗಳು,
ಅಸಮಾಧಾನದ ಅದೆಷ್ಟೋ ಮನಗಳು.

ಸಾಕು ಸಾಕೆನಿಸಿತು ಎಂದೇಳುವ ಅದೆಷ್ಟೋ ಮಾತುಗಳು,
ಅದೆಷ್ಟೇ ಕೆಲಸ ಮಾಡಿದರು ಸುಲಭವಾಗಿ ಒಪ್ಪದೇ ಸ್ಪಷ್ಟತೆ ಬಯಸುವ ಮೇಷ್ಟುಗಳು,
ಇನ್ನಾ ಕಲಿಕೆ ಆಗಿಲ್ಲ, ಈಗ ಆರಂಭ ಕಲಿಯುವುದು ತುಂಬಾ ಇದೆ ಎಂಬ ಡೈಲಾಗ್ಗಳು,
ಊಟವಿಲ್ಲದ ಅದೆಷ್ಟೋ ಹೊಟ್ಟೆಗಳು, ಆದರೂ ಉತ್ತಮ ಭವಿಷ್ಯಕ್ಕೆ ಬೇಕು ಈ ಮಾತುಗಳು.

ಕಣ್ಣೀರು ತುಂಬಿರುವ ಅದೆಷ್ಟೋ ಕಣ್ಣುಗಳು,
ತಲೆನೋವುಗಳು, ಸ್ವಲ್ಪ ಚಳಿ ಜ್ವರಗಳು,
ನಮ್ಮನ್ನೇ ನಾವು ಮರೆತಂತ ಸ್ಥಿತಿಗಳು.
ಕಷ್ಟವಾದರೂ ಸಹಿಸಲಾರದ, ನುಂಗಲಾರದ, ಬಿಸಿ ತುಪ್ಪದಂತಿರುವ ಪರಿಸ್ಥಿತಿಗಳು.

ಕೊನೆಗೂ ಬರೆದು ಮುಗಿಸಿದ ಅಸೈನ್ಮೆಂಟ್ ಸಬ್ಮಿಷನ್ ಮುಗಿದೇ
ಹೋಯಿತು, ಎಲ್ಲಾ ಆಯ್ತು ಅನ್ನೋ ಸಂತೋಷ ಒಂದು ಕಡೆ,
ಕಷ್ಟಪಟ್ಟು ಬರೆದ ರೆಕಾರ್ಡ್ಸ್ ಗತಿ ಇನ್ನೇನು ಆಗುವುದೋ ಅನ್ನೋ ನೋವು ಇನ್ನೊಂದು ಕಡೆ,
ರೆಕಾರ್ಡ್ ಕೊಡಲು ಇಷ್ಟ ಇಲ್ಲದೇ ಕೈ ಕೈ ಹಿಚುಕಿಕೊಂಡ ಅದೆಷ್ಟೋ ಮನಸ್ಸುಗಳಲ್ಲಿ ನಾ ಕೂಡ ಒಬ್ಬಳು.

## ಗೋಕಾಕ್ ಚಳುವಳಿ (1980)

**ರಶೀದಾಬಾನು ಬೇಗಂ ದೊಡ್ಮನಿ,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಸೋಶಿಯಲ್ ಮೀಡಿಯಾ ಬೆಳವಣಿಗೆಯ ನಂತರ ಕನ್ನಡ ಅಭಿಮಾನಕ್ಕೆ ಹೊಸ ಗುರುತು ಪ್ರಸಿದ್ಧಿ ದೊರಕಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮನಸಿಗನಿಸಿದ್ದನ್ನು ಮುಕ್ತವಾಗಿ ಬರೆದುಕೊಳ್ಳುವ ಕಾಲ ಇದು. ಬಹಳ ಬೇಗ ಜನರಿಗೆ ತಲುಪಿ ಬಿಡುತ್ತದೆ. ಮೊದಲಿನಂತೆ ಪತ್ರಿಕೆ, ಸಂಚಿಕೆಗಳಲ್ಲಿ ಪ್ರಕಟವಾಗಲಿ ಎಂದು ಆಶಿಸುತ್ತಾ ಕೂರುವ ಕಾಲ ಇದಲ್ಲ.

ಇವತ್ತು ಹುಲ್ಲಾಗು ಬೆಟ್ಟದಡಿಯಲ್ಲಿ ನಾನು ಹೇಳ ಹೊರಟಿರುವುದು ಗೋಕಾಕ್ ಚಳುವಳಿಯ ಬಗ್ಗೆ ನಿಮಗೆ ತಿಳಿದಿರಬಹುದು ಇದು ಶುರುವಾದದ್ದು ವಿ ಕೃ ಗೋಕಾಕ್ ಅವರಿಂದ. ಕರ್ನಾಟಕ ಏಕೀಕರಣ ಚಳುವಳಿಯ ಫಲವಾಗಿ 1956ರ ನವಂಬರ್ 1 ರಂದು ಮೈಸೂರು ರಾಜ್ಯ ನಿರ್ಮಾಣವಾಯಿತು. ಕನ್ನಡ ಮಾತನಾಡುವ ಪ್ರಾದೇಶಿಕ ಸ್ಥಳಗಳೆಲ್ಲ ವಿಲೀನಗೊಂಡು ಮೈಸೂರು ರಾಜ್ಯ ಸ್ಥಾಪನೆಯಾಗಿತ್ತಾದರೂ ಕನ್ನಡಕ್ಕೆ ಬೇಕಾದ ಸ್ಥಾನಮಾನಗಳು ಸಿಕ್ಕಿರಲಿಲ್ಲ. ಇಂದಿರಾ ಗಾಂಧಿ ತಮ್ಮ ಆಡಳಿತದ ಅವಧಿಯಲ್ಲಿ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳನ್ನು ಆಡಳಿತ ಭಾಷೆಗಳನ್ನಾಗಿ ಸಂವಿಧಾನದಲ್ಲಿ ತಿದ್ದುಪಡಿ ತಂದರು.

ಶಾಲೆಗಳಲ್ಲಿ ತ್ರಿಭಾಷಾ ಸೂತ್ರವಿದ್ದ ಆ ಸಮಯದಲ್ಲಿ ಕರ್ನಾಟಕದ ಶಾಲೆಗಳಲ್ಲಿ ಇಂಗ್ಲಿಷ್ ಹಿಂದಿ ಜೊತೆಗೆ ಕನ್ನಡದ ಭಾಷೆಗಳನ್ನು ಆಯ್ದುಕೊಂಡರು, ಕಾರಣ ಕನ್ನಡವಿನ್ನುಅಧಿಕೃತ ಭಾಷೆಯಾಗಿ ಹೊರಹಮ್ಮಿದ್ದಿಲ್ಲ. ಸಂಸ್ಕೃತದ ಪಾರುಪತ್ಯ ಅಧಿಕವಾಗಿತ್ತು. ಇವೆಲ್ಲವನ್ನೂ ಕಂಡ ವಿನಾಯಕ ಕೃಷ್ಣ ಗೋಕಾಕರು ವರದಿಯನ್ನು ಸಿದ್ಧಪಡಿಸುತ್ತಾರೆ. ಈ ವರದಿಯ ಮೂಲಕ ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಬೇಕೆಂದು ಶಾಲಾ ಶಿಕ್ಷಣದ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸಬೇಕೆಂದು ಭಿನ್ನವಿಸಿಕೊಳ್ಳುತ್ತಾರೆ. 80ರ ದಶಕದಲ್ಲಿ ಈ ಗೋಕಾಕ್ ವರದಿ ಭಾರಿ ಸದ್ದು ಮಾಡಿತು. ಗೋಕಾಕರ ಪ್ರಯತ್ನದಿಂದ ಗೋಕಾಕ್ ವರದಿ ಅಂದುಕೊಂಡಿದ್ದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಜನರನ್ನು ತಲುಪಿತು. ಜನರಲ್ಲಿ ಕನ್ನಡ ಅಭಿಮಾನ ಜಾಗ್ರುತವಾಯಿತು. ಕನ್ನಡ ಅನುಭವಿಸುತ್ತಿದ್ದ ಮಲತಾಯಿ ಧೋರಣೆ ರಾಜ್ಯದಲ್ಲಿ ಪ್ರಬಲವಾಗುತ್ತಿದ್ದ ವಲಸಿಗ ಭಾಷೆಗಳ ಮಧ್ಯ ನಶಿಸುತ್ತಿದ್ದ ಕನ್ನಡವನ್ನು ಮತ್ತೆ ಎತ್ತಿ ಹಿಡಿಯಬೇಕೆಂದು ಹಲವಾರು ಗಣ್ಯರು ಮುಂದೆ ಬಂದರು. ಡಾ.ರಾಜಕುಮಾರ್ ಅವರು ಇತರೆ ಚಿತ್ರ ಕಲಾವಿದರೊಂದಿಗೆ "ಚೈತ್ರ ಯಾತ್ರೆ" ಹೆಸರಿನಲ್ಲಿ ಊರೂರಿಗೆ ತೆರಳಿ ಗೋಕಾಕ್ ಚಳುವಳಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಾರೆ. ದೊಡ್ಡ ಮಟ್ಟದಲ್ಲಿ


ISBN : 979-889233259-0

ಚಳುವಳಿಯಾಯಿತು. ಜನ ದಂಗೆ ಎದ್ದರು. ಸರ್ಕಾರದ ಮೇಲೆ ಒತ್ತಡ ಹೇರಿದರು. ಚನ್ನವೀರ ಕಣವಿ, ಗೀತಾ ಕುಲಕರ್ಣಿ, ಶಾಂತಾದೇವಿ ಮಾಳವಾಡ, ಸಂಗೀತ ವಿದುಷಿ ಗಂಗೂಬಾಯಿ ಹಾನಗಲ್ ಮುಂತಾದವರು ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಪತ್ರಿಕಾರಂಗದಿಂದ ಅಭೂತಪೂರ್ವ ಬೆಂಬಲ ದೊರೆಯಿತು. "ಗೋಕಾಕ್ ವರದಿ ಜಾರಿಗೆ ಬರಲಿ" "ಏನೇ ಬರಲಿ ಕನ್ನಡ ಇರಲಿ" "ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ" "ಕರ್ನಾಟಕ ಮಾತೆಗೆ ಜಯವಾಗಲಿ" ಎಂದೆಲ್ಲಾ ಘೋಷಣೆಗಳನ್ನು ಕೂಗುತ್ತಾ ಚಳುವಳಿಯನ್ನು ನಡೆಸಿದರು.

ಗೋಕಾಕ್ ಚಳುವಳಿ ನಡೆದು 38 ವರ್ಷಗಳೆ ಕಳೆದಿವೆ, ಕನ್ನಡದ ಅಂದಿನ ಮತ್ತು ಇಂದಿನ ಪರಿಸ್ಥಿತಿ ಹಾಗೆ ಇದೆ ಎಂದು ಹೇಳಿದರೆ ಅತಿಶಯವಾಗಲಿಕ್ಕಿಲ್ಲ, ಖಾಸಗಿ ಶಾಲೆಗಳ ದಬ್ಬಾಳಿಕೆಯಲ್ಲಿ ಸರಕಾರಿ ಕನ್ನಡ ಶಾಲೆಗಳು ಮುಚ್ಚಿ ಹೋಗುತ್ತಿವೆ. ಸರಕಾರಿ ಸಂಸ್ಥೆಗಳಾಗಲಿ, ಖಾಸಗಿ ಒಡೆತನದ ಉದ್ಯಮಗಳಾಗಲಿ ಕರ್ನಾಟಕದಲ್ಲಿ ಕನ್ನಡ ಬೇಕೇ ಬೇಕು ಎಂದೇನೂ ಇಲ್ಲ, ಕನ್ನಡ ಲಿಪಿಸುಧಾರಕರು ಹುಟ್ಟಿಕೊಂಡಿದ್ದಾರೆ, ಕನ್ನಡ ಪರ ಸಂಘಟನೆಗಳು ಈಗಲೂ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸುವಲ್ಲಿ ನಿರತವಾಗಿವೆ.

80ರ ದಶಕದ ಅದೇ ಪಾಡು ಮುಂದುವರೆಯುವುದಾದಲ್ಲಿ ನಮಗೆ ಗೋಕಾಕ್ ಚಳುವಳಿಯ ಅವಶ್ಯವೇನಿತ್ತು? ಜೈಲುವಾಸ ಅನುಭವಿಸಿದ ಆ ಹೋರಾಟಗಾರರ ಕಷ್ಟ, ಉಪವಾಸ ಸತ್ಯಗಾರ ನಡೆಸಿದ ಮಹನೀಯರ ದಿಟ್ಟ ಸಂಕಲ್ಪ, ಪ್ರಾಣ ತೆತ್ತ ರೈತರ ಬಲಿದಾನ ಇದೆಲ್ಲ ಬೇಕಾಗಿಯೇ ಇರಲಿಲ್ಲ. ನಾವು ಮತ್ತದೇ ಪರಿಸ್ಥಿತಿಗೆ ನಮ್ಮನ್ನು ನಾವು ದೂಡಿಕೊಳ್ಳುತ್ತಿದ್ದೇವೆ. ಎಕ್ಕಡ ಎನ್ನಡಗಳ ಮಧ್ಯೆ ಕನ್ನಡ ಸೊರಗುತ್ತಿದೆ. ನಮ್ಮ ನಾಡಿನಲ್ಲೇ ಕನ್ನಡ ಫಲಕಗಳನ್ನು ಹಾಕಬೇಕೆಂದು ಶಾಲೆಯಲ್ಲಿ ಕನ್ನಡವನ್ನು ಕಡ್ಡಾಯ ಮಾಡಬೇಕೆಂದು ಇಂದೂ ಹೋರಾಡುತ್ತಲೇ ಇದ್ದೇವೆ.

**ಹಾಗಿದ್ದಲ್ಲಿ ನಾವು ಮಾಡಬೇಕಾಗಿದ್ದೇನು?**

ಜಯಂತ್ ಕಾಯ್ಕಿಣಿ ಅವರು ಹೇಳುವಂತೆ ಕನ್ನಡ ನಮ್ಮನ್ನು ಉಳಿಸುತ್ತದೆ, ಆದರೆ ನಮ್ಮತನವನ್ನು ನಾವು ಕಾಪಾಡಿಕೊಳ್ಳದೆ ಹೋದಲ್ಲಿ ಇನ್ನೊಂದು ಗೋಕಾಕ್ ಚಳುವಳಿ ನಡೆಸುವ ಅನಿವಾರ್ಯತೆ ಬಹಳ ದೂರವೇನಿಲ್ಲ. ಅನ್ಯ ಭಾಷೆಗಳೊಂದಿಗೆ ಅವರ ಭಾಷೆಯಲ್ಲಿಯೇ ಸಂವಹಿಸಲು ಯತ್ನಿಸಿ ಅವರನ್ನು ನಮ್ಮಲ್ಲಿ ಒಬ್ಬರಂತೆ ಕಂಡಿದ್ದು ನಮ್ಮ ಔದಾರ್ಯ, ವಿಶಾಲ ಹೃದಯ ಎಲ್ಲವೂ ಸರಿ. ಆದರೆ ಇನ್ನು ಮೇಲಾದರೂ ನಮ್ಮ ಭಾಷೆಯನ್ನು ಅವರು ಕಲಿತುಕೊಳ್ಳುವ ಅನಿವಾರ್ಯತೆಯನ್ನು ಸೃಷ್ಟಿಸಬೇಕಾಗಿದೆ.


ISBN : 979-889233259-0

ಕನ್ನಡದ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳೋಣ. ಕನ್ನಡದಲ್ಲಿ ಬರುವ ಒಳ್ಳೆಯ ಚಿತ್ರಗಳನ್ನು ಬೆಂಬಲಿಸೋಣ. ಅನ್ಯ ಭಾಷೆಗೆ ಗೌರವ ಕೊಡುವುದರ ಜೊತೆಗೆ ನಮ್ಮತನವನ್ನು ಕಾಪಾಡಿಕೊಳ್ಳೋಣ. ನಮ್ಮ ಮುಂದಿನ ಪೀಳಿಗೆಗೆ ನಮ್ಮ ಭಾಷೆಯ ಮಹತ್ವ ಶ್ರೀಮಂತಿಕೆಯನ್ನು ಅರಿವು ಮಾಡಿಕೊಡೋಣ. ಕನ್ನಡ ಬದುಕಾಗಲಿ, ಉಸಿರಾಗಲಿ, ಬೆಳಕಾಗಲಿ, ನಮ್ಮ ಹೆಮ್ಮೆಯಾಗಲಿ.

***

## ಪುಸ್ತಕವೆಂಬ ಪರಮಾಪ್ತ...

**ಪರಮೇಶ್ ಉಪ್ಪಾರ್,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಪುಸ್ತಕಕ್ಕಿಂತ ಒಳ್ಳೆಯ ಗೆಳೆಯರು ಯಾರಿದ್ದಾರೆ? ಎಂಬ ಪ್ರಶ್ನೆಗೆ ಒಪ್ಪಬಹುದಾದ ಉತ್ತರವಿಲ್ಲ. ಅದೆಂತಹದ್ದೇ ಗಟ್ಟಿ ಬಾಂಧವ್ಯವನ್ನು ಗೆಳೆಯರೊಂದಿಗೆ ನಾವು ಬೆಸೆದಿದ್ದರೂ ಕೆಲವೊಮ್ಮೆ ಕಾರಣವೇ ಇಲ್ಲದೆ ಗೆಳೆತನ ಮುರಿದು ಬೀಳುತ್ತದೆ. ಹಸಿ ಮುನಿಸು, ಅನುಮಾನ, ಹತಾಶೆ ಮತ್ತು ಬಿರುಕು ಗಳು ಗೆಳೆತನದಲ್ಲಿ ಆಗಾಗ ಮಾಮೂಲಿಪುಸ್ತಕಕ್ಕಿಂತ ಒಳ್ಳೆಯ ಗೆಳೆಯರು ಯಾರಿದ್ದಾರೆ? ಎಂಬ ಪ್ರಶ್ನೆಗೆ ಒಪ್ಪಬಹುದಾದ ಉತ್ತರವಿಲ್ಲ. ಅದೆಂತಹದ್ದೇ ಗಟ್ಟಿ ಬಾಂಧವ್ಯವನ್ನು ಗೆಳೆಯರೊಂದಿಗೆ ನಾವು ಬೆಸೆದಿದ್ದರೂ ಕೆಲವೊಮ್ಮೆ ಕಾರಣವೇ ಇಲ್ಲದೆ ಗೆಳೆತನ ಮುರಿದು ಬೀಳುತ್ತದೆ. ಹಸಿ ಮುನಿಸು, ಅನುಮಾನ, ಹತಾಶೆ ಮತ್ತು ಬಿರುಕು ಗಳು ಗೆಳೆತನದಲ್ಲಿ ಆಗಾಗ ಮಾಮೂಲಿ..ಪುಸ್ತಕದಿ ದೊರೆತರಿವು ಮಸ್ತಕದಿ ತಿಳಿದ ಮಣಿ ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ. ಕೆಲವೊಮ್ಮೆ ಯಾರನ್ನು ನಂಬುವುದು ಎಂಬ ಪ್ರಶ್ನೆ ಎದುರಾಗಿ, ಇನ್ನಿಲ್ಲದಂತೆ ನಮ್ಮನ್ನು ಕಾಡುತ್ತದೆ. ಆದರೆ, ಪುಸ್ತಕದೊಂದಿಗಿನ ಗೆಳೆತನ ಹಾಗಲ್ಲ. ಅಲ್ಲೊಂದು ಗಾಢ ಪ್ರೀತಿಯಿದೆ, ಭರವಸೆಯಿದೆ. ನಾವು ನಾವಾಗಿಯೇ ಉಳಿಯಲು, ಎಲ್ಲರೊಳಗೊಂದಾಗಿ ಬದುಕಲು ಪುಸ್ತಕವೆಂಬ ಗೆಳೆಯ ಪ್ರೇರೇಪಣೆ ನೀಡುತ್ತಲೇ ಇರುತ್ತಾನೆ.

ಮುಖ್ಯವಾಗಿ ಪುಸ್ತಕದ ಗೆಳೆಯನಿಗೆ ನಿರೀಕ್ಷೆಗಳೇ ಇರುವುದಿಲ್ಲ. ನಮಗಾಗಿ ಮೊಗೆ ಮೊಗೆದು ನೀಡುವು ದರಲ್ಲಿಯೇ ತೃಪ್ತಿ ಕಂಡು, ನಮ್ಮ ಮನಸ್ಸನ್ನು ಹಗುರ ಮಾಡಿ ಹೃದಯವನ್ನು ಹಿಗ್ಗಿಸುತ್ತಾನೆ. ಹಾಗಂತ ಪುಸ್ತಕದ ಗೆಳೆಯನ ಸಖ್ಯತೆ ಸುಖಾ ಸುಮ್ಮನೆ ಒಲಿಯುವುದಿಲ್ಲ. ಅವನು ಒಲಿಯುವುದು ಪ್ರೀತಿಗೆ, ಆರಾಧನೆಗೆ, ಶ್ರಮಕ್ಕೆ, ಛಲಕ್ಕೆ ಮತ್ತು ಶುದ್ಧವಾದ ಧ್ಯಾನಕ್ಕೆ. ಅವನು ಒಮ್ಮೆ ಒಲಿದುಬಿಟ್ಟರೆ ಎಂದಿಗೂ ನಮ್ಮ ಸಾಮೀಪ್ಯ ತೊರೆಯುವು


ISBN : 979-889233259-0

ದಿಲ್ಲ. ಆಗಾಗ್ಗೆ ನಮ್ಮನ್ನು ಬೆರಗಿನ ಲೋಕದೊಳಗೆ ಮುಳುಗಿಸಿ ಮೇಲಕ್ಕೆತ್ತುತ್ತಲೇ ಇರುತ್ತಾನೆ. ಅವನು ಬಯಸುವುದು ಸ್ವಚ್ಛ ವಾತಾವರಣ, ಶಿಸ್ತು ಮತ್ತು ತೆರೆದ ಮನಸ್ಸು. ನಂಬಿದವರಿಗೆ ಎಂದಿಗೂ ಮೋಸ ಮಾಡದ ಪುಸ್ತಕದ ಗೆಳೆಯ ಪ್ರತಿಯೊಬ್ಬರ ಬಾಳಿಗೂ ಅತ್ಯವಶ್ಯಕ. ಅವನಿಗೇನು ಪುಟ್ಟ ಜಾಗ ಸಿಕ್ಕರೂ ಹಸನ್ಮುಖಿಯಾಗಿ ವಿರಾಜಮಾನನಾಗುತ್ತಾನೆ.

ಪುಸ್ತಕದ ಗೆಳೆಯ ಮನುಷ್ಯನಿಗೆ ಜ್ಞಾನ ನೀಡುವ ಪ್ರಖರ ಬೆಳಕಿನ ಸೊಡರು. ಪುಸ್ತಕದ ಗೆಳೆಯನನ್ನು ಓದುತ್ತಾ ಅದರೊಂದಿಗೆ ಬೆರೆತರೆ ಮಹತ್ತರವಾದುದ್ದನ್ನು ಗಳಿಸುತ್ತೇವೆ. ಅಲೌಕಿಕವಾದ ಆನಂದ ಪಡೆಯುತ್ತಾ ಜಗತ್ತಿಗೆ ನಮ್ಮನ್ನು ನಾವುತೆರೆದುಕೊಳ್ಳುತ್ತೇವೆ.ಕಗ್ಗ ಬ್ರಹ್ಮ ಡಿವಿಜಿಯವರು ಹೇಳು ವಂತೆ, ಪುಸ್ತಕಗಳಿಂದ ಪಡೆದ ಜ್ಞಾನ ಮನದೊಳಗೆ ಪ್ರವೇಶಿಸಿ ಸ್ವಾನುಭಾವ ವಾಗಿ ಪರಿಪಕ್ವವಾಗಿ ಹೊರ ಹೊಮ್ಮಿದರೆ ಸಹಜ ಕ್ರಿಯೆಯಲ್ಲಿ ಹೂ ಬಿಡುವ ಮರದಂತೆ ಕಂಗೊಳಿಸಿ ಅರಿವಿನ ಪರಿಮಳವನ್ನು ಸುತ್ತಲೂ ಪಸರಿಸಿ ಪ್ರತಿಯೊಬ್ಬರು ಆಘ್ರಾಣಿಸುವಂತೆ ಮಾಡುತ್ತದೆ. ಪ್ರತಿಯೊಬ್ಬರು ಪುಸ್ತಕದೊಂದಿಗೆ ಗೆಳೆತನ ಮಾಡೋಣ, ಪುಸ್ತಕಗಳನ್ನು ಪ್ರೀತಿಸೋಣ. ನಮ್ಮ ಕಪಾಟಿನಲ್ಲಿ ಸಾವಿರಾರು ಪುಸ್ತಕದ ಗೆಳೆಯರಿರಲಿ, ಅವುಗಳೊಂದಿಗೆ ಹಿತವಾದದ್ದನ್ನು ಅನುಭವಿಸಿ ಸಾರ್ಥಕವಾದ ಜೀವನ ಸಾಗಿಸೋಣ. ಪುಸ್ತಕವೆಂಬ ಗೆಣೆಕಾರನಿರಲಿ ಬಾಳಿನಲಿ.

***

## ಕನ್ನಡದ ಸಂಸ್ಕೃತಿ

**ಉಮಾ ಜೆ,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಒಂದು ಜನಾಂಗ ತನ್ನ ತನವನ್ನು ವಿಶಿಷ್ಟವಾಗಿ ಉಳಿಸುವುದು ಸಂಸ್ಕೃತಿಯಿಂದ ಹಾಗೆ ಒಂದು ಜನಾಂಗ ಅಥವಾ ಜನವರ್ಗ ಇನ್ನೊಂದು ಜನಾಂಗಕ್ಕಿಂತ ಬೇರೆ ವಿಶಿಷ್ಟತೆಗಳನ್ನು ಗುರುತಿಸುವುದರ ಮೊತ್ತವೇ ಒಂದು ನಾಡಿನ ಸಂಸ್ಕೃತಿಯಾಗಿದೆ. ನಮ್ಮ ಹೆಮ್ಮೆ ಕನ್ನಡ ಸಂಸ್ಕೃತಿಯ ತವರು ಆಗಿದೆ. ಕನ್ನಡ ಎಂದರೆ ಕೇವಲ ವರ್ಣಮಾಲೆಯಲ್ಲ, ಅದು ಕರುನಾಡ ಜಲ, ನೆಲ, ಜನ, ಬದುಕು, ಸಾಹಿತ್ಯ, ಕಲೆ, ಸಂಗೀತ ಎಲ್ಲವನ್ನು ಒಳಗೊಂಡಿದೆ.

ಕನ್ನಡಿಗರ ಸಂಸ್ಕೃತಿ ಒಂದೇ ದಿನದಲ್ಲಿ ಸೃಷ್ಟಿಯಾಗಿದ್ದಲ್ಲ, ಹಲವು ಶತಮಾನಗಳಿಂದ ಒಂದೇ ನಾಡಿನಲ್ಲಿ ಜನನವು ನಡೆದು ಬಂದಿರುವ ಪರಿಣಾಮ ಅಥವಾ ಫಲವಾಗಿದೆ. "ಸರ್ವ ಜನಾಂಗದ ಶಾಂತಿಯ ತೋಟ ನಮ್ಮ ಕನ್ನಡ ನಾಡು","ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬಂತೆ


ISBN : 979-889233259-0

ನಾವು ದೇಶದ ಯಾವುದೇ ಮೂಲೆಯಲ್ಲಿದ್ದರೂ ಕನ್ನಡವನ್ನು ಉಳಿಸಿ, ಬೆಳೆಸಿ ಹಾಗೂ ನಮ್ಮ ಕನ್ನಡದ ಸಂಸ್ಕೃತಿಯನ್ನು ಎಂದಿಗೂ ಮರೆಯದೆ ಗೌರವಿಸಿ. ಇಲ್ಲಿನ ಜನರು ವಿವಿಧ ಧರ್ಮ, ಸಂಪ್ರದಾಯ ಮತ್ತು ಪದ್ಧತಿಗಳನ್ನು ಅನುಸರಿಸಿದ್ದಾರೆ. ಜನರ ಆಹಾರ ಪದ್ಧತಿ, ಹುಡುಗೆ, ತತ್ವ ಜ್ಞಾನ, ಇವು ಜನರ ಬದುಕಿನ ಕ್ರಮವಾಗಿವೆ. ಅಂದರೆ ಇವು ಸಂಸ್ಕೃತಿಯಾಗಿ ಹೊರಹೊಮ್ಮಿವೆ. ಹಾಗೆ ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ ಕನ್ನಡ ಕನ್ನಡ, ಕಸ್ತೂರಿ. ಕನ್ನಡ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು .; ಕನ್ನಡ ನಾಡು ನುಡಿಯಲ್ಲಿ ಶ್ರೇಷ್ಠತೆ ಇದೆ. "ಕನ್ನಡ ಭಾಷೆ ನಮ್ಮ ಸಂಸ್ಕೃತಿ" ನಾವು ನಮ್ಮ ಕನ್ನಡದ ಸುಗ್ಗಿಯನ್ನು ಕೇವಲ ನವೆಂಬರ್ ಮಾಸದಲ್ಲಿ ಮಾತ್ರವಲ್ಲ ಪ್ರತಿದಿನ ಆಚರಿಸಬೇಕು. ಕಣಕಣದಲ್ಲೂ ಕನ್ನಡವಾಗಿರಬೇಕು.ಹಾಗೆ ಕನ್ನಡ ನಾಡು ಸಂಸ್ಕೃತಿ ಬೀಡು.

ಕನ್ನಡ ನಾಡಿನ ಹಬ್ಬಗಳಲ್ಲಿ ಸರ್ಕಾರದಿಂದ ರಜೆ ಘೋಷಿಸಲಾಗುತ್ತದೆ. ಭಾರತವು ಅನೇಕ ಹಬ್ಬಗಳನ್ನು ಆಚರಿಸಲಾಗುತ್ತದೆ. ನಮ್ಮ ದೇಶದ ರಾಷ್ಟ್ರೀಯ ಹಬ್ಬಗಳೆಂದರೆ ಗಣರಾಜ್ಯೋತ್ಸವ, ಸ್ವತಂತ್ರ ದಿನಾಚರಣೆ, ಮತ್ತು ಗಾಂಧಿ ಜಯಂತಿ ಹೆಸರಂತ ಧಾರ್ಮಿಕ ಹಬ್ಬಗಳೆಂದರೆ ದೀಪಾವಳಿ, ಗಣೇಶ ಚತುರ್ಥಿ, ಹೋಳಿ, ಯುಗಾದಿ,ಸಂಕ್ರಾಂತಿ ರಕ್ಷಾಬಂಧನ ರಥಯಾತ್ರೆ, ಮಹಾಶಿವರಾತ್ರಿ, ಕ್ರಿಸ್ಮಸ್ ಕೃಷ್ಣ ಜನ್ಮಾಷ್ಟಮಿ ಮತ್ತು ಅನೇಕ ಇತರ ಹಬ್ಬಗಳನ್ನು ದೇಶದಾದ್ಯಂತ ಬಹಳ ಹೆಮ್ಮೆ ಮತ್ತು ಏಕತೆಯಿಂದ ಆಚರಿಸಲಾಗುತ್ತದೆ.

ವೃತ್ತಗಳು ಎಂದರೆ ಅತಿ ಪ್ರಾಮುಖ್ಯತೆಯನ್ನು ಹೊಂದಿರುವುದಾಗಿದೆ. ಯಕ್ಷಗಾನವು ಲಿಖಿತ ಲಿಪಿಯ ಕೊರತೆಯನ್ನು ಹೊಂದಿದೆ ಮತ್ತು ಕಲಾವಿದನ ಸ್ವಯಂಪ್ರೇರಿತ ಸಾಮರ್ಥ್ಯ, ಸುಧಾರಿಸಲು ಉತ್ತಮವಾಗಿ ಮತ್ತು ಕಥಾವಸ್ತು ಪಾತ್ರದ ಬಗ್ಗೆ ಉತ್ತಮ ಜ್ಞಾನವನ್ನು ಹೊಂದಲು ಸಂಪೂರ್ಣವಾಗಿ ಅವಲಂಬಿತವಾಗಿರುತ್ತದೆ ಯಕ್ಷಗಾನದ ವಿಶಿಷ್ಟ ಕಲಾ ಪ್ರಕಾರವು ನೃತ್ಯವಾಗಿದೆ.

ಆಹಾರ ಪದ್ಧತಿಯಲ್ಲಿಯೂ ಸಹ ಪಾಕ ಪದ್ದತಿಯಲ್ಲಿ ವ್ಯಾಪಕವಾಗಿ ಆಹಾರ ಪ್ರಭೇದಗಳಗಿವೆ. ಪ್ರತಿಯೊಂದು ಪ್ರದೇಶವು ತನ್ನದೇ ಆದ ಅಡುಗೆ ವೈಶಿಷ್ಟ್ಯತೆಯನ್ನು ಹೊಂದಿದೆ. ಉತ್ತರ, ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಈಶಾನ್ಯ ವರ್ಗೀಕರಣಗಳನ್ನು ಮಾಡಬಹುದು.

ಕನ್ನಡ ನಾಡಿನಲ್ಲಿ ಒಂದು ಕಲ್ಲಿಗೆ ಕೆತ್ತನೆಯ ಮೂಲಕ ಜೀವವನ್ನು ತುಂಬವುದಾಗಿವೆ.ಕಾಗದ ಮರ ಇತ್ಯಾದಿಗಳನ್ನು ಕಲಾವಿದರು ತಮ್ಮ ವರ್ಣ ಚಿತ್ರಗಳಿಗೆ ಆಧಾರವಾಗಿ ಬಳಸುತ್ತಿದ್ದರು. ಕುಂಚಗಳನ್ನು ಸಂಶ್ಲೇಷಿತ ವಸ್ತುಗಳಿಂದಮಾಡಲಾಗಿಲ್ಲ ಆದರೆ ಒಂಟೆಗಳು ಮೇಕೆ ಮತ್ತು ಅಳಿಲುಗಳಂತಹ ಪ್ರಾಣಿಗಳ ಮೂಲಕ

ಕೂದಲಿನಿಂದ ತಯಾರಿಸಲಾಗುತ್ತದೆ. ಮೈಸೂರು ಶೈಲಿಗೆ ಆಭರಣ ಚಿತ್ರಗಳು ಸಾಮಾನ್ಯವಾಗಿ ದಂತ ಕಥೆಗಳು ಪೌರಾಣಿಕ ದೃಶ್ಯಗಳು ಮತ್ತು ರಾಜ ಮನೆತನದ ಚಿತ್ರಣಗಳಾಗಿವೆ.

ಕನ್ನಡ ನಾಡು ಸಂಸ್ಕೃತಿಯ ತವರೂರಾಗಿದೆ. ಇದನ್ನು ಉಳಿಯು ಉಳಿಸುವುದು, ಬೆಳೆಸುವುದು ನಮ್ಮಕರ್ತವ್ಯವಾಗಿದೆ. ಕನ್ನಡ ನಾಡಿನ ಮಕ್ಕಳು ನಾವು ಕನ್ನಡದ ಸಂಸ್ಕೃತಿಯನ್ನು ಕನ್ನಡ ದವರು ಮಾತ್ರ ಅಲ್ಲದೆ ಬೇರೆ ದೇಶದಲ್ಲಿಯೂ ಕನ್ನಡಿಗನ ಸಂಸ್ಕೃತಿ ಬೆಳೆಸೋಣ.

***

## ವೀರಗಾಸೆ

**ಶಾಲಿನಿ ಆರ್ ಎಸ್,** ಪ್ರಶಿಕ್ಷಣಾರ್ಥಿ, ದ್ವಿತೀಯ ಸೆಮಿಸ್ಟರ್

ಕರ್ನಾಟಕದ ಜಾನಪದ ನೃತ್ಯಗಳಲ್ಲಿ ವೀರಗಾಸೆಯೂ ಒಂದಾಗಿದೆ. ವೀರಗಾಸೆ ಹಾಗೂ ವೀರಭದ್ರನ ಕುಣಿತಕ್ಕೆ ಸಾಮ್ಯತೆ ಇದ್ದಷ್ಟೆ ವ್ಯತ್ಯಾಸವೂ ಇದೆ. ವೀರಗಾಸೆಯು ನೃತ್ಯ ಪ್ರಕಾರದ ಒಂದು ಉತ್ತಮ ಕಲೆಯಾಗಿದೆ. ನೃತ್ಯ ಪ್ರಕಾರದ ಮೂಲವು ಭಾರತದ ರಾಜ್ಯವಾದ ಕರ್ನಾಟಕದಿಂದ ಬಂದಿದೆ. ನೃತ್ಯ ಪ್ರದರ್ಶನವು ಹಿಂದೂ ಪುರಾಣದ ವಿಷಯವನ್ನು ಆಧರಿಸಿದೆ. ಇದನ್ನು ದಕ್ಷಿಣ ಭಾರತದಲ್ಲಿ ಉತ್ತಮ ಸಾಂಪ್ರದಾಯಿಕ ನೃತ್ಯ ಪ್ರಕಾರವಾಗಿದೆ. ವಿಶೇಷವಾಗಿ ದಸರಾ ಸಮಯದಲ್ಲಿ ಹಾಗೂ ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ನಡೆಸಲಾಗುತ್ತದೆ.

